ಶುಕ್ರವಾರ, ಜೂನ್ 20, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಛತ್ತೀಸಗಢಕ್ಕೆ ಶಾ ಭೇಟಿ



ಜೂನ್ 22ರಿಂದ ಎರಡು ದಿನಗಳ ಛತ್ತೀಸಗಢ ಭೇಟಿ ಸಂದರ್ಭದಲ್ಲಿ ಗೃಹ ಸಚಿವ ಅಮಿತ್ ಶಾ ಅವರು ನಕ್ಸಲ್ ವಿರೋಧಿ ಕಾರ್ಯಾಚರಣೆಯನ್ನು ಪರಿಶೀಲಿಸಲಿದ್ದಾರೆ

ನಿಜದ ಪ್ರಜಾಪ್ರಭುತ್ವ...

‘ತುಳಿತಕ್ಕೊಳಗಾದವರ ಅಸಮಾನತೆ ಹೋಗಲಾಡಿಸದೆ, ನಿಜವಾದ ಪ್ರಜಾಪ್ರಭುತ್ವವಿದೆ ಎನ್ನಲಾಗದು’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹೇಳಿದ್ದಾರೆ

ಚಟಿಕೆ ಸುದ್ದಿ

ಕಸಾಪ: 54 ದತ್ತಿ ಪ್ರಶಸ್ತಿಗಳಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 54 ವಿವಿಧ ದತ್ತಿ ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಆಹ್ವಾನಿಸಿದೆ. 2024ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಅಥವಾ ಪ್ರಕಾಶಕರು ಕಳುಹಿಸಿ ಕೊಡಬಹುದಾಗಿದೆ. ಕಾದಂಬರಿ, ಕಥಾ ಸಂಕಲನ, ಅನುವಾದ, ಸಂಶೋಧನೆ, ಮಕ್ಕಳ ಸಾಹಿತ್ಯ, ವೈಚಾರಿಕ ಬರಹಗಳು, ವೈದ್ಯಕೀಯ ಸಾಹಿತ್ಯ, ಇತಿಹಾಸ, ಜಾನಪದ, ಮನೋವಿಜ್ಞಾನ, ಸಿನಿಮಾ ಸಾಹಿತ್ಯ ಸೇರಿ ವಿವಿಧ ಪ್ರಕಾರಗಳ ಸಾಹಿತ್ಯ ಕೃತಿಗಳನ್ನು ದತ್ತಿ ಪ್ರಶಸ್ತಿಗಳಿಗೆ ಪರಿಗಣಿಸಲಾಗುತ್ತದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಪುಸ್ತಕಗಳ ಪ್ರತಿಗಳು ಯಾವ ದತ್ತಿಗೆ ಎನ್ನುವುದನ್ನು ಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ಬರೆದು, ಜುಲೈ 20ರೊಳಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳುಹಿಸಬೇಕು. ಸಂಪರ್ಕ ಸಂಖ್ಯೆ: 080 26612991 ಅಥವಾ 26623548

ಎನ್‌ಎಚ್‌ಎಂ: ಕೆಲಸದಿಂದ ತೆಗೆಯದಂತೆ ಆಗ್ರಹ

ಬೆಂಗಳೂರು: 'ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ (ಎನ್‌ಯುಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಯನ್ನು ಮೌಲ್ಯಮಾಪನದ ಹೆಸರಿನಲ್ಲಿ ಕೆಲಸದಿಂದ ತೆಗೆಯಬಾರದು' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘವು ಸರ್ಕಾರಕ್ಕೆ ಆಗ್ರಹಿಸಿದೆ. 15-18 ವರ್ಷಗಳಿಂದ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಅನ್ಯಾಯವಾಗಲಿದೆ. ಆರ್ಥಿಕ ಸಂಕಷ್ಟದಿಂದ ಅವರ ಕುಟುಂಬಗಳು ಬೀದಿಗೆ ಬೀಳಲಿವೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಮಧ್ಯಸ್ಥಿಕೆ ವಹಿಸಿ, ಸಮಸ್ಯೆ ಪರಿಹರಿಸಬೇಕು' ಎಂದು ಸಂಘದ ಅಧ್ಯಕ್ಷ ಶ್ರೀಕಾಂತ್ ಸ್ವಾಮಿ ಒತ್ತಾಯಿಸಿದ್ದಾರೆ.

ಕನ್ನಡತನ ಘೋಷವಾಕ್ಯ ಆಹ್ವಾನ

ಬೆಂಗಳೂರು: ವಿಧಾನಸೌಧ ಮತ್ತು ವಿಕಾಸಸೌಧದ ಕಟ್ಟಡಗಳಿಗೆ ಕನ್ನಡತನ ಪ್ರತಿಬಿಂಬಿಸುವ ಘೋಷವಾಕ್ಯಗಳನ್ನು ಅಳವಡಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಯೋಜನೆ ರೂಪಿಸಿದ್ದು, ಸಾರ್ವಜನಿಕರಿಂದ ಘೋಷವಾಕ್ಯಗಳನ್ನು ಆಹ್ವಾನಿಸಿದೆ.

'ಈ ಕಟ್ಟಡಗಳ ಭವ್ಯತೆಗೆ ಪೂರಕವಾಗಿ ಆಯ್ದ ಜಾಗಗಳಲ್ಲಿ ಕನ್ನಡದ ಘೋಷವಾಕ್ಯಗಳನ್ನು ಅಳವಡಿಸುವ ಮಹತ್ವದ ತೀರ್ಮಾನವನ್ನು ಸರ್ಕಾರವು ತೆಗೆದುಕೊಂಡಿದೆ. ಸಾರ್ವಜನಿಕರು ಕನ್ನಡ ಮತ್ತು ಕರ್ನಾಟಕದ ಕುರಿತಾದ ಘೋಷವಾಕ್ಯಗಳನ್ನು ಕಳುಹಿಸಬಹುದಾಗಿದೆ. ಸಾಹಿತ್ಯಿಕ ಘೋಷವಾಕ್ಯಗಳಲ್ಲದೆ, ಜನಪದದ ಸೂಕ್ತಿಗಳು, ಚಳವಳಿಗಳ ಘೋಷಣೆಗಳು, ಸಿನಿಮಾ ಗೀತೆಗಳನ್ನು ಸಹ ಅವಲೋಕಿಸಿ ಮೌಲ್ಯಯುತ ಸಲಹೆಗಳನ್ನು ನೀಡಬಹುದಾಗಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಇದೇ 30ರೊಳಗೆ ಪ್ರಾಧಿಕಾರದ ಇ ಮೇಲ್: chairman.kanpra@gmail.com ಗೆ ಘೋಷವಾಕ್ಯ ಕಳುಹಿಸಬೇಕು. ಸಂಪರ್ಕ ಸಂಖ್ಯೆ ಮತ್ತು ವಿಳಾಸ ಕಡ್ಡಾಯವಾಗಿ ನಮೂದಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದುರ್ಗಮ ಪ್ರದೇಶಕ್ಕೆ ಆರೋಗ್ಯ ಸೇವೆ

ಮಾವು ಬೆಳೆಗಾರರಿಗೆ ಪರಿಹಾರ: ಕೇಂದ್ರ ಕೃಷಿ ಸಚಿವರ ಭೇಟಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದುರ್ಗಮ ಮತ್ತು ಸಂಪರ್ಕ ರಹಿತ ಪ್ರದೇಶಗಳ ಜನರಿಗೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ಪ್ರಾಥಮಿಕ ಆರೋಗ್ಯ ಆರೈಕೆ ಸೇವೆ ಒದಗಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

'ಈ ಯೋಜನೆಗೆ ₹15.97 ಕೋಟಿಯನ್ನು ಒದಗಿಸಲು ಒಪ್ಪಿಗೆ ನೀಡಲಾಗಿದೆ. ಬಹುತೇಕ ಸಂಪರ್ಕರಹಿತ ಮತ್ತು ದುರ್ಗಮ ಪ್ರದೇಶಗಳಲ್ಲಿ ಆರೋಗ್ಯ ಸೇವೆಯ ಕೊರತೆ ಇದೆ. ಅದನ್ನು ನೀಗಿಸಲು ಸಂಚಾರಿ ಆರೋಗ್ಯ ಘಟಕಗಳನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಮಾವು ಬೆಳೆಗಾರರಿಗೆ ಹೆಚ್ಚಿನ ಪರಿಹಾರ ಒದಗಿಸುವಂತೆ ಒತ್ತಾಯಿಸಲು ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಲು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಮತ್ತು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು ಎಂದು ಪಾಟೀಲ ತಿಳಿಸಿದರು.

ಮಾವು ಬೆಳೆಗಾರರ ಸಂಕಷ್ಟದ ವಿಚಾರವಾಗಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ಕೋಲಾರ ಮತ್ತು ಬೆಂಗಳೂರು ಗ್ರಾಮೀಣ ಭಾಗದ ಸಚಿವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಆಂಧ್ರದ ಚಿತ್ತೂರು ಭಾಗದಲ್ಲಿ ರಾಜ್ಯದ ಮಾವಿನ ಹಣ್ಣುಗಳ ಪ್ರವೇಶಕ್ಕೆ ಅವಕಾಶ ನೀಡದ ವಿಚಾರವನ್ನು ಸಚಿವ ಕೆ.ಎಚ್‌. ಮುನಿಯಪ್ಪ ಪ್ರಸ್ತಾಪಿಸಿದರು ಎಂದು ಹೇಳಿದರು.

ಚಿಕ್ಕಬಳ್ಳಾಪುರ ಜಿಲ್ಲೆ ನಂದಿಬೆಟ್ಟದಲ್ಲಿ ಜುಲೈ 16 ಅಥವಾ 17ರಂದು ಸಚಿವ ಸಂಪುಟ ನಡೆಸಲಾಗುವುದು. ಆ ಭಾಗಕ್ಕೆ ಸಂಬಂಧಿಸಿದಂತೆ ಕೆಲವು ಇಲಾಖೆಗಳಿಂದ ಪ್ರಸ್ತಾವನೆಗಳು ಬಂದಿರಲಿಲ್ಲ. ಆ ಪ್ರದೇಶಕ್ಕೆ ಪರಿಣಾಮಕಾರಿ ಕೆಲಸಗಳು ಆಗಬೇಕು ಎಂಬ ಉದ್ದೇಶದಿಂದ ಮತ್ತು ಕೆಲವು ಸಚಿವರ ಕೋರಿಕೆ ಮೇರೆಗೆ ನಂದಿಬೆಟ್ಟದಲ್ಲಿ ನಡೆಯಬೇಕಿದ್ದ ಸಂಪುಟ ಸಭೆ ಮುಂದೂಡಲಾಗಿತ್ತು ಎಂದರು.

ಪ್ರಮುಖ ತೀರ್ಮಾನಗಳು

- ಕರ್ನಾಟಕ ನೋಂದಣಿ ಸಂಘಗಳ ಕಾಯ್ದೆ 1960ರ ಪ್ರಕಾರ ಸಂಘಗಳಾಗಿ ನೋಂದಾಯಿಸಲ್ಪಟ್ಟ ಆರೋಗ್ಯ ರಕ್ಷಾ ಸಮಿತಿಗಳು ಆಡಳಿತ ಮತ್ತು ಸಾಮಾನ್ಯ ಸಭೆಯ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಅಧಿಕಾರದಲ್ಲಿ ಬದಲಾವಣೆ ಮಾಡಲು ಒಪ್ಪಿಗೆ
- ಪಾರ್ಶ್ವವಾಯು ಮತ್ತು ತಲೆಗೆ ತೀವ್ರ ಪೆಟ್ಟಾದ ರೋಗಿಗಳ ಆರೈಕೆಗಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಹಬ್ ಮತ್ತು ಸ್ಪೋಕ್ ಚಿಕಿತ್ಸಾ ಮಾದರಿ ಅನುಷ್ಠಾನಕ್ಕೆ ₹12.87 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮೋದನೆ
- ಬಸವಕಲ್ಯಾಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಅನುಭವ ಮಂಟಪದ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ₹742 ಕೋಟಿಗೆ ಅನುಮೋದನೆ
- ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕು ಶಿಲಹಳ್ಳಿ ಗ್ರಾಮದ ಬಳಿ ಕೃಷ್ಣಾನದಿಯ ಉಪನದಿಗೆ ಅಡ್ಡಲಾಗಿ ಹೈಲೆವೆಲ್ ಮೈನರ್ ಸೇತುವೆ ನಿರ್ಮಾಣ ಮತ್ತು ಹುಬ್ಬಳ್ಳಿ ನಗರದ ರಾಜನಾಲಾ ತಡೆಗೋಡೆ ನಿರ್ಮಾಣಕ್ಕೆ ₹23.51 ಕೋಟಿಗೆ ಅನುಮೋದನೆ
- ಮಸ್ಕಿ ನಾಲಾದಿಂದ ಕನಕನಾಲಾ ಕಣಿವೆಗೆ ಪ್ರವಾಹದ ನೀರನ್ನು ತಿರುಗಿಸಲು ಮಸ್ಕಿನಾಲೆಯ ಮೇಲ್ಭಾಗದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು ಮತ್ತು ಕನಕನಾಲಾ ಆಧುನೀಕರಣ ಯೋಜನೆಗೆ ₹134.56 ಕೋಟಿಗೆ ಅನುಮೋದನೆ
- ಸಿಂಧನೂರು ತಾಲ್ಲೂಕು ಚನ್ನಬಸವೇಶ್ವರ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ವಿಯರ್ ನಿರ್ಮಾಣ ಮಾಡುವ ₹43.10 ಕೋಟಿ ವೆಚ್ಚದ ಕಾಮಗಾರಿಗೆ ಒಪ್ಪಿಗೆ

ಅಪ್ಸರಕೊಂಡ ಕಡಲ ವನ್ಯ ಜೀವಿಧಾಮಕ್ಕೆ ಒಪ್ಪಿಗೆ

ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಸಮುದ್ರತೀರದ 6 ಕಿ.ಮೀವರೆಗಿನ ಪ್ರದೇಶ ಮತ್ತು ಅರಣ್ಯ ಪ್ರದೇಶವನ್ನು ಒಳಗೊಂಡ 5,959.322 ಹೆಕ್ಟೇರ್ ಪ್ರದೇಶವನ್ನು 'ಅಪ್ಸರಕೊಂಡ–ಮುಗಲಿ ಕಡಲ ವನ್ಯಜೀವಿಧಾಮ' ಎಂದು ಘೋಷಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಈ ಕುರಿತು ಮಾಹಿತಿ ನೀಡಿದ ಸಚಿವ ಎಚ್‌.ಕೆ.ಪಾಟೀಲ, ಕಡಲ ವನ್ಯಜೀವಿ ಧಾಮದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಹಾಗೂ ಮೀನುಗಾರರ ದೋಣಿಗಳ ಪ್ರವೇಶಕ್ಕೆ ನಿರ್ಬಂಧವಿಲ್ಲ. ಅಲ್ಲಿನ ಜನರ ಅಸ್ತಿತ್ವದಲ್ಲಿರುವ ಹಕ್ಕುಗಳಿಗೆ ಯಾವುದೇ ನಿರ್ಬಂಧವಿಲ್ಲ ಎಂದರು.

ಹೊನ್ನಾವರದ 8.21 ಕಿ.ಮೀ ಸಮುದ್ರ ತೀರದ 6 ಕಿ.ಮೀ ಸಮುದ್ರ ಪ್ರದೇಶ ಮತ್ತು 835 ಹೆಕ್ಟೇರ್ ಅರಣ್ಯ ಪ್ರದೇಶ ಈ ಕಡಲ ವನ್ಯಜೀವಿಧಾಮದ ವ್ಯಾಪ್ತಿಗೆ ಬರಲಿದೆ. ಸಮುದ್ರದ ಒಳಗಿನ ಜೀವಿಗಳ ರಕ್ಷಣೆಯ ಪ್ರಮುಖ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಕೆಎಟಿ ಕಾರ್ಯವೈಖರಿ: ಸಂಪುಟದಲ್ಲಿ ಆಕ್ರೋಶ

ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆಎಟಿ) ಕಾರ್ಯವೈಖರಿ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿದ್ದು, ಆ ವ್ಯವಸ್ಥೆ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾಯಿತು ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ಕೆಎಟಿ ವ್ಯವಸ್ಥೆ ಬಗ್ಗೆ ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ಕೆಪಿಎಸ್‌ಸಿಯ 384 ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪಟ್ಟಿಯನ್ನು ಕೆಎಟಿ ಇತ್ತೀಚೆಗೆ ರದ್ದು ಮಾಡಿತ್ತು. ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆಯಾಗಿದೆ ಎಂಬ ಕಾರಣವನ್ನು ನೀಡಿತ್ತು. 'ಈ ವಿಷಯ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಿತು' ಎಂದು ಪಾಟೀಲ ಹೇಳಿದರು.

ಸುದ್ದಿ 2 ನಿಮಿಷ

ಹೊಸಪೇಟೆ: ಮೃಗಾಲಯದ ಹೆಣ್ಣು ಹುಲಿ 'ದೇವಿ' ಸಾವು

ಹೊಸಪೇಟೆ: ತಾಲ್ಲೂಕಿನ ಕಮಲಾಪುರದಲ್ಲಿನ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯದಲ್ಲಿನ 19 ವರ್ಷದ 'ದೇವಿ' ಎಂಬ ಹೆಣ್ಣು ಹುಲಿ ಗುರುವಾರ ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದೆ.

'ಮಾನವ-ವನ್ಯಜೀವಿ ಸಂಘರ್ಷದಲ್ಲಿ ಸಿಲುಕಿ ತೀವ್ರ ಗಾಯಗೊಂಡು ನಿತ್ರಾಣವಾಗಿದ್ದ ಹೆಣ್ಣು ಹುಲಿಯನ್ನು ಎರಡು ವರ್ಷಗಳ ಹಿಂದೆ ಚಿಕಿತ್ಸೆಗಾಗಿ ಮೃಗಾಲಯಕ್ಕೆ ತರಲಾಗಿತ್ತು. ಆರೋಗ್ಯ ಕೊಂಚ ಸುಧಾರಿಸಿತ್ತು' ಎಂದು ಡಿಸಿಎಫ್ ಹಾಗೂ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಶ್ ನಾಯ್ಕ ತಿಳಿಸಿದ್ದಾರೆ.

ಹುಲಿ ದಾಳಿ: ಮಹಿಳೆ ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ವಲಯದ ದೇಶಿಪುರ ಬೀಟ್‌ನ ಕಾಡಂಚಿನ ಜಮೀನಿನಲ್ಲಿ ಗುರುವಾರ ಹುಲಿದಾಳಿಗೆ ಸಿಲುಕಿ ದೇಶಿಪುರ ಕಾಲೋನಿಯ ಪುಟ್ಟಮ್ಮ (32) ಮೃತಪಟ್ಟರು.

ಮಧ್ಯಾಹ್ನ ಜಾನುವಾರು ಮೇಯಿಸುತ್ತಿದ್ದ ಅವರ ಮೇಲೆ ಏಕಾಏಕಿ ಎರಗಿದ ಹುಲಿಯು ಕುತ್ತಿಗೆ, ಎದೆ ಹಾಗೂ ಹೊಟ್ಟೆ ಭಾಗವನ್ನು ಗಾಯಗೊಳಿಸಿ, ಸುಮಾರು ನೂರು ಮೀಟರ್ ದೂರಕ್ಕೆ ಎಳೆದೊಯ್ದು ಬಿಸಾಡಿತ್ತು. 'ಹುಲಿ ದಾಳಿಯಿಂದಲೇ ಮಹಿಳೆ ಮೃತಪಟ್ಟಿರುವುದು ದೃಢಪಟ್ಟಿದೆ. ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲಾಗುವುದು' ಎಂದು ಬಂಡೀಪುರ ಮುಖ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್ ತಿಳಿಸಿದ್ದಾರೆ.

'ಹುಲಿಯನ್ನು ಕೂಡಲೇ ಸೆರೆ ಹಿಡಿಯಬೇಕು, ಮಹಿಳೆಯ ಕುಟುಂಬಕ್ಕೆ ₹25 ಲಕ್ಷ ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡಬೇಕು' ಎಂದು ಗ್ರಾಮಸ್ಥರು ಹಾಗೂ ರೈತ ಸಂಘದ ಮುಖಂಡರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

9 ದಿನಗಳಲ್ಲಿ ಇಬ್ಬರ ಸಾವು: 9 ದಿನಗಳ ಅಂತರದಲ್ಲಿ ಹುಲಿ ದಾಳಿಯಿಂದ ಇಬ್ಬರು ಮೃತಪಟ್ಟಿರುವುದು ಕಾಡಂಚಿನ ಗ್ರಾಮಗಳಲ್ಲಿ ಭೀತಿ ಸೃಷ್ಟಿಸಿದೆ. ಜೂನ್ 10ರಂದು ಬಿಳಿಗಿರಿರಂಗನಾಥ ಸ್ವಾಮಿ ಅರಣ್ಯ ವ್ಯಾಪ್ತಿಯ ಬೇಡಗುಳಿ ಸಮೀಪದ ರಾಮಯ್ಯನ ಪೋಡಿನಲ್ಲಿ ಹುಲಿ ದಾಳಿಯಿಂದ ರಂಗಮ್ಮ ಮೃತಪಟ್ಟಿದ್ದರು. ರವಿ ಎಂಬವರ ಮೇಲೆ ಮಾರಣಾಂತಿಕ ದಾಳಿ ನಡೆದಿತ್ತು.

ಮನೆ ಹಂಚಿಕೆ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಹೆಚ್ಚಳ

ಕಾನೂನು ಹೋರಾಟ ಚಿಂತನೆ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಸತಿ ಇಲಾಖೆಯ ವಿವಿಧ ಮನೆ ಹಂಚಿಕೆ ಯೋಜನೆಗಳಲ್ಲಿ ಮುಸ್ಲಿಮರಿಗೆ ಶೇ 15ರಷ್ಟು ಹಂಚಿಕೆ ಮಾಡುವ ಸರ್ಕಾರದ ನಿರ್ಧಾರದಿಂದ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗದವರ ಮೀಸಲಾತಿಗೆ ಧಕ್ಕೆಯಾಗಲಿದೆ. ಇದು ಖಂಡನೀಯ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಧರ್ಮದ ಆಧಾರದಲ್ಲಿ ಯಾವುದೇ ರೀತಿಯ ಮೀಸಲಾತಿ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸರ್ಕಾರದ ಈ ನಡೆ ನ್ಯಾಯಾಂಗ ನಿಂದನೆ ಮಾತ್ರವಲ್ಲ, ಸಂವಿಧಾನ ವಿರೋಧಿಯೂ ಹೌದು' ಎಂದರು.

'ಸಿದ್ದರಾಮಯ್ಯ ಅವರು ಈ ಹಿಂದೆ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಕಲ್ಪಿಸಿದ್ದರು. ಈಗ ವಸತಿ ಯೋಜನೆಯಲ್ಲೂ ಮುಸ್ಲಿಮರಿಗೆ ಮಣೆ ಹಾಕಲು ಹೊರಟಿದ್ದಾರೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸುವ ಬಗ್ಗೆ ಪರಿಶೀಲನೆ ನಡೆಸುತ್ತೇವೆ' ಎಂದರು.

'ಬಹಮನಿ ಸುಲ್ತಾನರ ಆಳ್ವಿಕೆ'

ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಬಹಮನಿ ಸುಲ್ತಾನರ ಕಾಲದ ಆಳ್ವಿಕೆಯನ್ನು ಮರುಸ್ಥಾಪಿಸಲು ಹೊರಟಿದೆ. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಧರ್ಮದ ಹೆಸರಿನಲ್ಲಿ ಮುಸ್ಲಿಮರಿಗೆ ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿ ಕಲ್ಪಿಸಿ ನಂತರ ಸರ್ಕಾರಿ ಗುತ್ತಿಗೆ ಕಾಮಗಾರಿಗಳ ಹಂಚಿಕೆಯಲ್ಲಿಯೂ ಮೀಸಲಾತಿ ನಿಗದಿಪಡಿಸಿತ್ತು. ಈಗ ವಸತಿ ಸೌಲಭ್ಯ ಕಲ್ಪಿಸುವುದರಲ್ಲಿಯೂ ಮೀಸಲಾತಿ ಹೆಚ್ಚಿಸಿದೆ. ಸಂವಿಧಾನದ ಆಶಯ-ವರ್ಗ ತಾರತಮ್ಯಕ್ಕೆ ಅವಕಾಶ ನೀಡದಿರುವುದನ್ನು ಗಾಳಿಗೆ ತೂರಿರುವ ಕಾಂಗ್ರೆಸ್ ಸರ್ಕಾರವು, ಮುಸ್ಲಿಂ ಸಮುದಾಯವನ್ನು ಓಲೈಸಲು ಟೊಂಕ ಕಟ್ಟಿ ನಿಂತಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಅಧಿಕಾರ ಉಳಿಸಿಕೊಳ್ಳಲು ಸಿದ್ದರಾಮಯ್ಯ ನಾಟಕ'

'ಸಿದ್ದರಾಮಯ್ಯ ಅವರು ಇದೇ ಅಕ್ಟೋಬರ್‌ನಲ್ಲಿ ಮುಖ್ಯಮಂತ್ರಿಯ ಕುರ್ಚಿಯನ್ನು ಬಿಟ್ಟುಕೊಡಬೇಕಾಗಿದೆ. ಅದನ್ನು ತಪ್ಪಿಸಲು ಮುಸ್ಲಿಮರಿಗೆ ಮೀಸಲಾತಿ ಹೆಚ್ಚಿಸುವ ನಾಟಕವಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಧಿಕಾರ ಬಿಟ್ಟುಕೊಟ್ಟು ಹೋಗುವ ಸ್ಥಿತಿ ಬಂದರೆ, ಮುಸ್ಲಿಮರೆಲ್ಲರೂ ತನ್ನ ಜತೆಗೆ ಬರಲಿ ಎಂದು ಸಿದ್ದರಾಮಯ್ಯ ಹೀಗೆ ಮಾಡುತ್ತಿದ್ದಾರೆ. ಇಂತಹ ತುಷ್ಟೀಕರಣವನ್ನು ಮುಂದುವರಿಸಿದರೆ ಅವರು ಮುಸ್ಲಿಮರಿಗಷ್ಟೇ ಮೀಸಲಾದ ಮುಖ್ಯಮಂತ್ರಿ ಆಗುತ್ತಾರೆ' ಎಂದರು.

'ಅಂದು ನೆಹರೂ ಹಾಗೂ ಜಿನ್ನಾ ಅವರು ತಮ್ಮ ಸ್ವಾರ್ಥಕ್ಕಾಗಿ ಭಾರತವನ್ನು ವಿಭಜಿಸಿದರು. ಇಂದು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕರ್ನಾಟಕದಲ್ಲಿ ಧರ್ಮದ ಆಧಾರದ ಮೇಲೆ ಸಮಾಜ ವಿಭಜಿಸಲು ಹೊರಟಿದ್ದಾರೆ. ಸಂವಿಧಾನದ ರಕ್ಷಕರು ಎಂದು ಹೇಳಿಕೊಂಡು ಓಡಾಡುವ ಈ ಇಬ್ಬರು ನಾಯಕರಿಂದಲೇ ಸಂವಿಧಾನಕ್ಕೆ ಅಪಚಾರವಾಗುತ್ತಿದೆ' ಎಂದರು.

'ಮತ ಬ್ಯಾಂಕ್ ರಾಜಕಾರಣವನ್ನೇ ಬಂಡವಾಳವಾಗಿಸಿಕೊಂಡಿರುವ ಕಾಂಗ್ರೆಸ್, ತನ್ನ ತುಷ್ಟೀಕರಣವನ್ನ ಮುಂದುವರಿಸಲು ದಿನಕ್ಕೊಂದು ಹೊಸ ದಾರಿ ಹುಡುಕಿಕೊಳ್ಳುತ್ತಿದೆ. ಈ ಸಂವಿಧಾನ ವಿರೋಧಿ, ಸಾಮಾಜಿಕ ನ್ಯಾಯ ವಿರೋಧಿ ಮೀಸಲಾತಿ ಹೆಚ್ಚಳವನ್ನು ಹಿಂಪಡೆಯುವವರೆಗೂ ಬಿಜೆಪಿ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲಿದೆ' ಎಂದರು.

'ಸಾಮಾಜಿಕ ಸಾಮರಸ್ಯದ ಬಲಿ'

ಧರ್ಮಾಧಾರಿತ ಮೀಸಲಾತಿಗೆ ಅವಕಾಶವೇ ಇಲ್ಲ. ಆದರೆ ಕಾಂಗ್ರೆಸ್ ಸರ್ಕಾರವು ಓಲೈಕೆ ಮತ್ತು ಮತ ಬ್ಯಾಂಕ್ ರಾಜಕಾರಣಕ್ಕೆ ಮುಂದಾಗಿದೆ. ಇದು ಒಂದು ಅಪಾಯಕಾರಿ ನಡೆಯಾಗಿದೆ. ವಸತಿ ಯೋಜನೆಗಳಲ್ಲೂ ಮುಸ್ಲಿಮರಿಗೆ ಮೀಸಲಾತಿ ಹೆಚ್ಚಿಸುವ ಮೂಲಕ ಸಮಾಜವನ್ನು ಒಡೆಯಲು ಕಾಂಗ್ರೆಸ್ ಮುಂದಾಗಿದೆ. ಅಲ್ಪಕಾಲಿಕ ರಾಜಕೀಯ ಲಾಭಕ್ಕಾಗಿ ಕರ್ನಾಟಕದ ಸಾಮಾಜಿಕ ಸಾಮರಸ್ಯವನ್ನೇ ಬಲಿಗೊಡುತ್ತಿದೆ.

ಅಮಿತ್ ಮಾಳವೀಯ, ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	115.78	34,092	1,148
ಹಾರಂಗಿ	2,859	2,849.38	3,853	3,416
ಕಬಿನಿ	2,284.00	2,280.35	18,696	25,000
ಹೇಮಾವತಿ	2,922	2,912.50	15,567	5,010
ಲಿಂಗನಮಕ್ಕಿ	1,819	1,772.22	22,905	6,182
ಸೂಪಾ (ಮೀ)	564	531.34	12,012.01	2,327.08
ಮಾಣಿ	595	590.13	2,028	-
ತುಂಗಭದ್ರಾ	1,633	1608.23	43,706	215
ಮಲಪ್ರಭಾ	2,079.5	2,053.55	4,216	194
ಘಟಪ್ರಭಾ	2175	2,113.75	9,766	123
ಭದ್ರಾ *	186	148.3	19,027	1,273
ಆಲಮಟ್ಟಿ (ಮೀ)	519.6	515.36	80,084	58,799
ನಾರಾಯಣಪುರ (ಮೀ)	492.25	490.46	75,015	75,015

* ನೆಲಮಟ್ಟದಿಂದ

ಮಲ ಹೊರುವ ಪದ್ಧತಿ : ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನುಷ್ಯರಿಂದ ಶೌಚ ಗುಂಡಿಗಳನ್ನು ಸ್ವಚ್ಛಗೊಳಿಸುವ ಮತ್ತು ಮಲ ಹೊರುವ ಅನಿಷ್ಟ ಪದ್ಧತಿಗೆ ನಿಷೇಧ ಹೇರಿದ್ದರೂ ಅದು ಇಂದಿಗೂ ನಡೆದುಕೊಂಡು ಹೋಗುತ್ತಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ಶೌಚ ಗುಂಡಿ, ಒಳಚರಂಡಿ, ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (ಎಸ್‌ಟಿಪಿ) ಸ್ವಚ್ಛಗೊಳಿಸಲು ಮನುಷ್ಯರನ್ನು ಬಳಸಿಕೊಳ್ಳುವುದನ್ನು ತಕ್ಷಣ ನಿಲ್ಲಿಸಬೇಕು' ಎಂದು ಕೋರಿ 'ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿ ಪರಿಶೀಲಿಸಿದ ನ್ಯಾಯಪೀಠ, 'ಮಲ ಹೊರುವ ಪದ್ಧತಿ ಇನ್ನೂ ಜೀವಂತವಾಗಿದೆಯೇ' ಎಂದು ಅಚ್ಚರಿ ವ್ಯಕ್ತಪಡಿಸಿತು. 'ಸುಪ್ರೀಂ ಕೋರ್ಟ್ ಈಗಾಗಲೇ ಇದಕ್ಕೆ ಪೂರ್ಣ ವಿರಾಮ ಹಾಕಿದೆಯಲ್ಲಾ' ಎಂದೂ ಪ್ರಶ್ನಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಮೈತ್ರೇಯಿ ಕೃಷ್ಣನ್, 'ಈ ಪದ್ಧತಿಯನ್ನು ನಿಷೇಧಿಸಲಾಗಿದ್ದರೂ ಅದು ಮತ್ತೊಂದು ರೂಪದಲ್ಲಿ ಜಾರಿಯಲ್ಲಿದೆ. ಇದಕ್ಕೆ ಮನುಷ್ಯರನ್ನು ಬಳಸಿಕೊಳ್ಳುವ ಘಟನೆಗಳು ಮರುಕಳಿಸುತ್ತಲೇ ಇವೆ. ಇತ್ತೀಚೆಗೆ ಎಸ್‌ಟಿಪಿ ಘಟಕವೊಂದನ್ನು ಸ್ವಚ್ಛಗೊಳಿಸುವಾಗ ಇಬ್ಬರು ಪೌರ ಕಾರ್ಮಿಕರು ಮೃತಪಟ್ಟಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ)ಗಳ ನಿರ್ವಹಣೆಗೆ ನಿರ್ದಿಷ್ಟ ವ್ಯವಸ್ಥೆ, ಉಸ್ತುವಾರಿ ಅಥವಾ ಮಾರ್ಗಸೂಚಿ ಇಲ್ಲದಂತಾಗಿದೆ. ಎಸ್‌ಟಿಪಿಗಳು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ವ್ಯಾಪ್ತಿಗೆ ಬರುತ್ತವೆ. ದುರ್ಘಟನೆಯಲ್ಲಿ ಪ್ರಾಣ ಹಾನಿ ಸಂಭವಿಸಿದರೆ ಅದು ತನಗೆ ಸಂಬಂಧವಿಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಹೇಳುತ್ತದೆ. ಆದ್ದರಿಂದ, ಎಸ್‌ಟಿಪಿಗಳ ನಿರ್ವಹಣೆ ಬಗ್ಗೆ ಸಮಗ್ರ ಪರಿಶೀಲನೆ ನಡೆಸಬೇಕು ಹಾಗೂ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಮೈತ್ರೇಯಿ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ರಾಜ್ಯದ ಎಲ್ಲಾ ಕೈಗಾರಿಕಾ ಹಾಗೂ ಜನವಸತಿ ಪ್ರದೇಶಗಳ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ನಿರ್ವಹಣೆ ಬಗ್ಗೆ ನಾಲ್ಕು ವಾರಗಳಲ್ಲಿ ಸಮಗ್ರ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿತು.

ಎಚ್‌ಡಿಕೆ ವಿರುದ್ಧದ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನುಗಳ ಒತ್ತುವರಿ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಮೀನಿನ ಮಾಲೀಕತ್ವ ಕುರಿತಂತೆ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಎಸ್‌ಐಟಿ ರಚಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಇ.ಎಸ್‌. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಎಸ್‌ಐಟಿ ರಚಿಸಿದ ಬಳಿಕ ಸರ್ಕಾರ ಅಧಿಸೂಚನೆ ಹೊರಡಿಸಬೇಕು. ಆದರೆ, ಈ ಪ್ರಕ್ರಿಯೆ ನಡೆಸದೇ ಅರ್ಜಿದಾರ ಕುಮಾರಸ್ವಾಮಿ ಅವರಿಗೆ ಎಸ್‌ಐಟಿ ಸಮನ್ಸ್ ಜಾರಿ ಮಾಡಿದೆ. ಆದ್ದರಿಂದ, ಎಸ್‌ಐಟಿ ರಚನೆ ಕಾನೂನುಬಾಹಿರವಾಗಿದ್ದು ಈ ಕುರಿತ ಆದೇಶ ವಜಾಗೊಳಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮುಂದಿನ ವಿಚಾರಣೆ ತನಕ ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆ ನೀಡಿತು. ಪ್ರತಿವಾದಿಗಳಾದ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಮನಗರ ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಕುಮಾರಸ್ವಾಮಿ ಪರ ಹೈಕೋರ್ಟ್ ವಕೀಲ ಎ.ವಿ.ನಿಶಾಂತ್ ವಕಾಲತ್ತು ಸಲ್ಲಿಸಿದ್ದಾರೆ.

ಪ್ರಕರಣವೇನು?: 'ಎಚ್‌.ಡಿ.ಕುಮಾರಸ್ವಾಮಿ ಮತ್ತು ಅವರ ಸಂಬಂಧಿಗಳು ಕೇತಗಾನಹಳ್ಳಿಯ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಆದರೆ, ಇದನ್ನು ಜಾರಿಗೊಳಿಸಿಲ್ಲ' ಎಂದು ಸಮಾಜ ಪರಿವರ್ತನಾ ಸಮುದಾಯ, ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಐಎಎಸ್ ಅಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ 2025ರ ಜನವರಿ 28ರಂದು ಆದೇಶಿಸಲಾಗಿದೆ.

ವಕೀಲರ ಪರಿಷತ್ ಚುನಾವಣೆ: ಅರ್ಜಿ

ಬೆಂಗಳೂರು: ವಕೀಲಿ ವೃತ್ತಿ ನಡೆಸುವುದಕ್ಕಾಗಿ (ಸರ್ಟಿಫಿಕೇಷನ್ ಆಫ್ ಪ್ರ್ಯಾಕ್ಟೀಸ್–ಸಿಒಪಿ) ರಾಜ್ಯ ವಕೀಲರ ಪರಿಷತ್‌ನಿಂದ ನೀಡಲಾಗುವ ವೃತ್ತಿ ದೃಢೀಕರಣ ಪತ್ರ ಸಲ್ಲಿಸುವ ಪ್ರಕ್ರಿಯೆ ಈಗ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ಒದಗಿಸಿ' ಎಂದು ರಾಜ್ಯ ವಕೀಲರ ಪರಿಷತ್ತಿಗೆ ಹೈಕೋರ್ಟ್ ನಿರ್ದೇಶಿಸಿದೆ. ಈ ಸಂಬಂಧ ಹೈಕೋರ್ಟ್ ವಕೀಲ ರಹಮತ್ ಉಲ್ಲಾ ಕೊತ್ವಾಲ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಕೋರಿಕೆ ಏನು?: 'ಅವಧಿ ಮುಗಿದರೂ ಅಧಿಕಾರದಲ್ಲಿ ಮುಂದುವರಿದಿರುವ ಹಾಲಿ ರಾಜ್ಯ ವಕೀಲರ ಪರಿಷತ್ ಅನ್ನು ವಿಸರ್ಜಿಸಿ ತಕ್ಷಣ ವಕೀಲರ ಪರಿಷತ್‌ಗೆ ಚುನಾವಣೆ ನಡೆಸುವಂತೆ ಭಾರತೀಯ ವಕೀಲರ ಪರಿಷತ್‌ಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ವಿಮಾನ ಹಾರುವ ಮುನ್ನ ಲೋಪ ಇರಲಿಲ್ಲ'

ಮುಂಬೈ (ಪಿಟಿಐ): 'ಇತ್ತೀಚೆಗೆ ಅಪಘಾತಕ್ಕೀಡಾದ ಬೋಯಿಂಗ್ 787-8 'ಡ್ರೀಮ್ ಲೈನರ್' ವಿಮಾನವನ್ನು ಉತ್ತಮವಾಗಿ ನಿರ್ವಹಿಸಲಾಗಿತ್ತು. ಹಾರಾಟಕ್ಕೂ ಮುನ್ನ ಅದರಲ್ಲಿ ಯಾವುದೇ ಲೋಪಗಳು ಪತ್ತೆ ಆಗಿರಲಿಲ್ಲ' ಎಂದು ಏರ್ ಇಂಡಿಯಾ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಗುರುವಾರ ತಿಳಿಸಿದ್ದಾರೆ.

'ವಿಮಾನವು 2023ರ ಜೂನ್‌ನಲ್ಲಿ ಪ್ರಮುಖ ತಪಾಸಣೆಗೆ ಒಳಗಾಗಿತ್ತು ಮತ್ತು ಮುಂದಿನ ತಪಾಸಣೆ 2025ರ ಡಿಸೆಂಬರ್‌ನಲ್ಲಿ ನಿಗದಿಯಾಗಿತ್ತು' ಎಂದು ಅವರು ಹೇಳಿದ್ದಾರೆ.

ಮುಂದಿನ ಕೆಲ ವಾರಗಳವರೆಗೆ ತಾತ್ಕಾಲಿಕ ಕ್ರಮವಾಗಿ ಏರ್ ಇಂಡಿಯಾದ ಅಂತರರಾಷ್ಟ್ರೀಯ ಕಾರ್ಯಾಚರಣೆಯಲ್ಲಿ ಶೇ 15ರಷ್ಟು ಕಡಿತವಾಗಲಿದೆ ಎಂದು ಅವರು ವಿಮಾನ ಪ್ರಯಾಣಿಕರಿಗೆ ಕಳುಹಿಸಿರುವ ಸಂದೇಶದಲ್ಲಿ ತಿಳಿಸಿದ್ದಾರೆ.

'ವಿಮಾನದ ಬಲಭಾಗದ ಎಂಜಿನ್ ಅನ್ನು 2025ರ ಮಾರ್ಚ್‌ನಲ್ಲಿ ಮತ್ತು ಎಡಭಾಗದ ಎಂಜಿನ್ ಅನ್ನು 2025ರ ಏಪ್ರಿಲ್‌ನಲ್ಲಿ ಸಮಗ್ರವಾಗಿ ಪರಿಶೀಲಿಸಲಾಗಿತ್ತು. ವಿಮಾನ ಮತ್ತು ಅದರ ಎಂಜಿನ್‌ಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಲಾಗಿತ್ತು. ವಿಮಾನ ಹಾರುವುದಕ್ಕೂ ಮುನ್ನ ಯಾವುದೇ ಲೋಪಗಳು ಕಂಡು ಬಂದಿರಲಿಲ್ಲ' ಎಂದು ಅವರು ಮಾಹಿತಿ ನೀಡಿದ್ದಾರೆ.

'ದುರಂತಕ್ಕೆ ಕಾರಣ ಏನು ಎಂಬುದನ್ನು ತಿಳಿಯಬೇಕಿದೆ. ಅದಕ್ಕಾಗಿ ಅಧಿಕಾರಿಗಳು ನೀಡುವ ತನಿಖಾ ವರದಿ ಎದುರು ನೋಡುತ್ತಿದ್ದೇವೆ' ಎಂದರು.

ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಬೋಯಿಂಗ್ 787 ಮತ್ತು 777ರ ಹಾರಾಟಕ್ಕೂ ಮುನ್ನ ಸುರಕ್ಷಾ ತಪಾಸಣೆಗಳನ್ನು ನಡೆಸಲಾಗುತ್ತಿದೆ. ಈ ಹೆಚ್ಚುವರಿ ಪರಿಶೀಲನೆಯಿಂದಾಗಿ ವಿಮಾನ ಹೊರಡುವ ಸಮಯದಲ್ಲಿ ವ್ಯತ್ಯಾಸಗಳಾಗುತ್ತಿವೆ. ಹೀಗಾಗಿ ಏರ್ ಇಂಡಿಯಾವು ಇದೇ 20ರಿಂದ ಜುಲೈ ಮಧ್ಯದವರೆಗೆ ತನ್ನ ಅಂತರರಾಷ್ಟ್ರೀಯ ವಿಮಾನಗಳ ಹಾರಾಟದಲ್ಲಿ ಶೇ 15ರಷ್ಟು ಕಡಿತ ಮಾಡಲು ನಿರ್ಧರಿಸಿದೆ ಎಂದು ವಿಲ್ಸನ್ ಮಾಹಿತಿ ನೀಡಿದ್ದಾರೆ.

> **ದುರಂತದಲ್ಲಿ ಮೃತಪಟ್ಟವರ ಸ್ಪಷ್ಟ ಸಂಖ್ಯೆ ಇಲ್ಲ. ಒಟ್ಟು 318 ಮೃತದೇಹ ಮತ್ತು ದೇಹದ ಭಾಗಗಳನ್ನು ಸಂಗ್ರಹಿಸಿ ಡಿಎನ್‌ಎ ಪರೀಕ್ಷೆಗೆ ನೀಡಿದ್ದೇವೆ. ಇದರಲ್ಲಿ ಕಾಣೆಯಾದವರ ಡಿಎನ್‌ಎ ಮಾದರಿಗಳೂ ಸೇರಿವೆ**
>
> **ಜಿ.ಎಸ್‌. ಮಲಿಕ್,** ಅಹಮದಾಬಾದ್ ಪೊಲೀಸ್ ಕಮಿಷನರ್

ಗುರುವಾರ ಕ್ಲೈವ್ ಕುಂದರ್ ಅವರ ತಾಯಿಯ ದುಃಖದ ಕಟ್ಟೆಯೊಡೆದ ಕ್ಷಣ –ಪಿಟಿಐ ಚಿತ್ರ

ಕ್ಲೈವ್ ಕುಂದರ್ ಅಂತ್ಯಸಂಸ್ಕಾರ

ಇತ್ತೀಚೆಗೆ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದ ಸಹ ಪೈಲಟ್ ಆಗಿದ್ದ ಕ್ಲೈವ್ ಕುಂದರ್ ಅವರ ಮೃತದೇಹವನ್ನು ಮುಂಬೈನಲ್ಲಿರುವ ಅವರ ನಿವಾಸಕ್ಕೆ ಗುರುವಾರ ತರಲಾಗಿದೆ. ಮಧ್ಯಾಹ್ನ 1 ಗಂಟೆಯವರೆಗೆ ಮೃತದೇಹದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ನಂತರ ಕ್ರಿಶ್ಚಿಯನ್ ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

198 ಮಂದಿ ಮೃತದೇಹ ಹಸ್ತಾಂತರ

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ 270 ಮಂದಿಯ ಪೈಕಿ ಡಿಎನ್‌ಎ ಪರೀಕ್ಷೆಯ ಮೂಲಕ 215 ಮಂದಿಯ ಗುರುತನ್ನು ಪತ್ತೆಹಚ್ಚಲಾಗಿದೆ. ಈವರೆಗೆ 198 ಮಂದಿಯ ಮೃತದೇಹವನ್ನು ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಇಲ್ಲಿನ ಸಿವಿಲ್ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾ. ರಾಕೇಶ್ ಜೋಶಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. '149 ಮಂದಿ ಭಾರತೀಯರ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ. 32 ಮಂದಿ ಬ್ರಿಟಿಷ್ ಪ್ರಜೆಗಳ, ಪೋರ್ಚುಗೀಸ್‌ನ 7 ಮಂದಿಯ ಮತ್ತು ಕೆನಡಾದ ಒಬ್ಬ ಪ್ರಜೆಯ ಮೃತದೇಹಗಳನ್ನೂ ಅವರವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಅವಘಡ ನಡೆದಾಗ ಆಸ್ಪತ್ರೆ ಸಂಕೀರ್ಣದಲ್ಲಿ ಮೃತಪಟ್ಟವರ ಪೈಕಿ 7 ಮಂದಿಯ ಮೃತದೇಹಗಳನ್ನೂ ಆಯಾ ಕುಟುಂಬದವರಿಗೆ ತಲುಪಿಸಲಾಗಿದೆ' ಎಂದಿದ್ದಾರೆ.

ಬ್ಲ್ಯಾಕ್‌ಬಾಕ್ಸ್ ವಿಶ್ಲೇಷಣೆ: ಶೀಘ್ರ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಏರ್ ಇಂಡಿಯಾ ವಿಮಾನ ದುರಂತದ ತನಿಖೆ ನಡೆಸುತ್ತಿರುವ ವಿಮಾನ ಅಪಘಾತ ತನಿಖಾ ಸಂಸ್ಥೆಯು (ಎಎಐಬಿ) ವಿಮಾನದ ಬ್ಲ್ಯಾಕ್ ಬಾಕ್ಸ್‌ಗಳನ್ನು ವಿಶ್ಲೇಷಣೆಗಾಗಿ ವಿದೇಶಕ್ಕೆ ಕಳುಹಿಸಬೇಕೆ ಅಥವಾ ಬೇಡವೆ ಎಂಬುದನ್ನು ಇನ್ನಷ್ಟು ಮೌಲ್ಯಮಾಪನದ ಬಳಿಕ ನಿರ್ಧರಿಸಲಿದೆ.

'ಸ್ಥಳೀಯ ಅಧಿಕಾರಿಗಳು ಮತ್ತು ಏಜೆನ್ಸಿಗಳ ಸಂಪೂರ್ಣ ಬೆಂಬಲದೊಂದಿಗೆ ಎಎಐಬಿ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಿದೆ. ಸ್ಥಳ ಪರಿಶೀಲನೆ ಮತ್ತು ಸಾಕ್ಷ್ಯ ಸಂಗ್ರಹ ಸೇರಿದಂತೆ ಪ್ರಮುಖ ಕೆಲಸಗಳು ಪೂರ್ಣಗೊಂಡಿದ್ದು, ಈಗ ಹೆಚ್ಚಿನ ವಿಶ್ಲೇಷಣೆ ನಡೆಯುತ್ತಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬ್ಲ್ಯಾಕ್‌ಬಾಕ್ಸ್‌ಗಳನ್ನು ವಿಶ್ಲೇಷಣೆಗಾಗಿ ವಿದೇಶಕ್ಕೆ ಕಳುಹಿಸಲಾಗುತ್ತಿದೆ ಎಂಬ ವರದಿಗಳನ್ನು ಉಲ್ಲೇಖಿಸಿ, 'ಎಲ್ಲಾ ತಾಂತ್ರಿಕ, ಸುರಕ್ಷತಾ ಮತ್ತು ಭದ್ರತೆಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸೂಕ್ತ ಮೌಲ್ಯಮಾಪನದ ನಂತರ ಬ್ಲ್ಯಾಕ್‌ಬಾಕ್ಸ್‌ಗಳ ವಿಶ್ಲೇಷಣೆ ಎಲ್ಲಿ ಮಾಡಬೇಕು ಎಂಬ ನಿರ್ಧಾರವನ್ನು ಎಎಐಬಿ ತೆಗೆದುಕೊಳ್ಳುತ್ತದೆ' ಎಂದಿದೆ. ಇಂತಹ 'ಸೂಕ್ಷ್ಮ' ವಿಷಯಕ್ಕೆ ಸಂಬಂಧಿಸಿದಂತೆ ಊಹಾಪೋಹಗಳಿಂದ ದೂರವಿರುವಂತೆ ಸಂಬಂಧಪಟ್ಟ ಭಾಗೀದಾರರಿಗೆ ಮನವಿ ಮಾಡಿದೆ.

'ಬ್ಲ್ಯಾಕ್ ಬಾಕ್ಸ್‌ಗಳು ಎಎಐಬಿ ಅಧಿಕಾರಿಗಳ ವಶದಲ್ಲಿವೆ' ಎಂದು ಸಚಿವ ರಾಮಮೋಹನ್ ನಾಯ್ಡು ಹೇಳಿದ್ದಾರೆ.

ತಾಂತ್ರಿಕ ದೋಷ: ಸ್ಪೈಸ್‌ಜೆಟ್ ವಾಪಸ್

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತಿರುಪತಿಗೆ ತೆರಳುತ್ತಿದ್ದ ಸ್ಪೈಸ್‌ಜೆಟ್ ಸಂಸ್ಥೆಯ ಎಸ್‌ಜಿ 2696 ವಿಮಾನವು ಗುರುವಾರ ತಾಂತ್ರಿಕ ದೋಷದಿಂದಾಗಿ ವಿಮಾನ ನಿಲ್ದಾಣಕ್ಕೆ ವಾಪಸ್ ಆಗಿದೆ. ಆದರೆ, ವಿಮಾನ ತುರ್ತು ಭೂ ಸ್ಪರ್ಶ ಮಾಡಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಈ ಲ್ಯಾಂಡಿಂಗ್ ಮಾಡಲಾಗಿದೆ. ಬೆಳಗ್ಗೆ 6.10ಕ್ಕೆ ಪ್ರಯಾಣ ಆರಂಭಿಸಬೇಕಿದ್ದ ವಿಮಾನವು 6.19ಕ್ಕೆ ಹಾರಾಟ ಆರಂಭಿಸಿತ್ತು. ತಿರುಪತಿಗೆ ತಲುಪಬೇಕಿದ್ದ ವಿಮಾನ ಮಾರ್ಗ ಮಧ್ಯೆಯೇ ತಾಂತ್ರಿಕ ದೋಷ ಎದುರಾಗಿ ಮರಳಿ ಬಂದಿದೆ.

ನಕ್ಸಲರಿಂದ ಬಾಲಕ ಸೇರಿ ಮೂವರ ಹತ್ಯೆ

ಬಿಜಾಪುರ್ (ಪಿಟಿಐ): ಪೊಲೀಸರಿಗೆ ಶರಣಾಗಿದ್ದ ಇಬ್ಬರು ಮಾವೋವಾದಿಗಳ ಸಂಬಂಧಿಕರು ಮತ್ತು 13 ವರ್ಷದ ಬಾಲಕನನ್ನು ಛತ್ತೀಸಗಢದ ಬಿಜಾಪುರ್ ಜಿಲ್ಲೆಯಲ್ಲಿ ನಕ್ಸಲರು ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದು ಗುರುವಾರ ಪೊಲೀಸರು ತಿಳಿಸಿದ್ದಾರೆ.

ಗಂಗಲೂರ್ ಪೊಲೀಸ್ ಠಾಣೆ ವ್ಯಾಪ್ತಿಯ ಪೆದ್ದಕೊರ್ಮಾ ಗ್ರಾಮದಲ್ಲಿ ಜುಗ್ಗು ಮೋಡಿಯಮ್ (45), ಸೋಮ ಮೋಡಿಯಮ್ (21) ಮತ್ತು ಅನಿಲ್ ಮಾಡ್ವಿ (13) ಎಂಬುವರ ಕುತ್ತಿಗೆ ಬಿಗಿದು ಕೊಲೆ ಮಾಡಲಾಗಿದೆ.

ಜುಗ್ಗು ಮತ್ತು ಸೋಮ ಇತ್ತೀಚೆಗಷ್ಟೇ ಶರಣಾಗಿದ್ದ ಹಿರಿಯ ಮಾವೋವಾದಿ ದಿನೇಶ್ ಮೋಡಿಯಮ್ ಅವರ ಸಂಬಂಧಿಕರು ಎಂದು ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ತಿಳಿಸಿದ್ದಾರೆ.

ಸೋಮ ಕಾಲೇಜಿಗೆ ಸೇರಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ ಹಾಗೂ ಕಾನ್‌ಸ್ಟೆಬಲ್ ಹುದ್ದೆಯ ಪರೀಕ್ಷೆಗೂ ಸಜ್ಜಾಗುತ್ತಿದ್ದ. ಅನಿಲ್ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ಆತನಿಗೆ ವೈದ್ಯನಾಗುವ ಆಸೆ ಇತ್ತು ಎಂದು ಗ್ರಾಮಸ್ಥರೊಬ್ಬರು ಹೇಳಿದ್ದಾರೆ.

ಸುಮಾರು 70–80 ಮಂದಿ ನಕ್ಸಲರು ಮಂಗಳವಾರ ಗ್ರಾಮಕ್ಕೆ ನುಗ್ಗಿ ಕೃತ್ಯ ಎಸಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಶುಕ್ರವಾರ, ಜೂನ್ 20, 2025| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರತೀಯರ ಕಂಪನಿಗಳ ಸಂಖ್ಯೆ ಏರಿಕೆ

ಬ್ರಿಟನ್‌ನಲ್ಲಿ ಭಾರತೀಯರ ಮಾಲೀಕತ್ವದ ಕಂಪನಿಗಳ ಸಂಖ್ಯೆಯು ಒಂದು ವರ್ಷದಲ್ಲಿ ಶೇಕಡ 23ರಷ್ಟು ಹೆಚ್ಚಾಗಿದೆ ಎಂದು ಗ್ರಾಂಟ್ ಥಾಂಟನ್ ಮತ್ತು ಸಿಐಐ ಸಿದ್ಧಪಡಿಸಿದ ವರದಿ ಹೇಳಿದೆ

ಗಿಲ್ ನಾಯಕತ್ವ ಇಂದಿನಿಂದ

ಲೀಡ್ಸ್‌ನಲ್ಲಿ ಶುಕ್ರವಾರ ಭಾರತ–ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ಪಂದ್ಯ ಆರಂಭವಾಗಲಿದೆ. ಶುಭಮನ್ ಗಿಲ್ ನಾಯಕತ್ವದಲ್ಲಿ ಭಾರತ ತಂಡವು ಆಡಲಿರುವ ಮೊದಲ ಪಂದ್ಯ ಇದಾಗಿದೆ

‘ರೇಟ್‌ಗಳ ಬೋರ್ಡ್ ಹಾಕಿಬಿಡಿ’

ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿ ಅಧಿಕಾರಿಗಳಿಗೆ ಕಂದಾಯ ಸಚಿವ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾಲ್ಲೂಕು ಕಚೇರಿಯಲ್ಲಿ ಯಾವ ಕೆಲಸಕ್ಕೆ ನಿಮಗೆಲ್ಲಾ ಎಷ್ಟೆಷ್ಟು ಹಣ ಕೊಡಬೇಕು ಎಂದು ರೇಟ್‌ಬೋರ್ಡ್ ಹಾಕಿಬಿಡಿ. ಎಷ್ಟು ಹಣ ಕೊಟ್ಟರೆ ಕೆಲಸ ವಾಗುತ್ತದೆ ಎಂಬುದು ಆಗ ಎಲ್ಲ ಜನರಿಗೂ ಗೊತ್ತಾಗುತ್ತದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಕಂದಾಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಸಚಿವರು ಹೀಗೆ ತೀವ್ರ ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ.

ನಗರದ ಕಂದಾಯ ಭವನದಲ್ಲಿರುವ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಗಳಿಗೆ ಗುರುವಾರ ಬೆಳಿಗ್ಗೆ ದಿಢೀರ್ ಭೇಟಿ ನೀಡಿದ ಸಚಿವರು, ಅಲ್ಲಿನ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಕಚೇರಿ ಅವಧಿ ಆರಂಭವಾಗಿ ಕೆಲ ಗಂಟೆ ಕಳೆದಿದ್ದರೂ ಹಲವು ಸಿಬ್ಬಂದಿ ಮತ್ತು ಅಧಿಕಾರಿಗಳು ಕಚೇರಿಗೆ ಬಂದಿರದೇ ಇರುವುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಕಚೇರಿ ಆರಂಭವಾಗಿ ಗಂಟೆ ಕಳೆದರೂ ಕಚೇರಿಗೆ ಬಾರದ ಸಿಬ್ಬಂದಿ
- ಸಚಿವರಿಗೆ ದೂರುಗಳ ಸಲ್ಲಿಕೆ
- ಡಿಜಿಟಲ್ ವ್ಯವಸ್ಥೆಯಿಂದ ಸಮಸ್ಯೆಗೆ ಪರಿಹಾರ; ಸಚಿವ

ಇದೇ ವೇಳೆ ಕಚೇರಿಯಲ್ಲಿ ನಿಂತಿದ್ದ ಸಾರ್ವಜನಿಕರೊಬ್ಬರು, ಹಲವು ಬಾರಿ ಅಲೆದರೂ ತಮ್ಮ ಕೆಲಸ ಆಗುತ್ತಿಲ್ಲ ಎಂದು ಸಚಿವರ ಕೈಗೆ ದಾಖಲೆ ಪತ್ರಗಳನ್ನು ಇರಿಸಿದರು. ಅದನ್ನು ಪರಿಶೀಲಿಸಿದ ಸಚಿವರು, ಸಂಬಂಧಿತ ಅಧಿಕಾರಿಗಳನ್ನು ಪ್ರಶ್ನಿಸಿದರು.

‘ಪಹಣಿ ತಿದ್ದುಪಡಿಗೆ ಜನವರಿಯಲ್ಲೇ ಆದೇಶವಾಗಿದೆ. ಆರು ತಿಂಗಳಾದರೂ ತಿದ್ದುಪಡಿ ಏಕೆ ಮಾಡಿಲ್ಲ’ ಎಂದು ಪ್ರಶ್ನಿಸಿದರು. ಸಂಬಂಧಿತ ಅಧಿಕಾರಿ, ‘ಕೇಸ್ ವರ್ಕರ್ ಕಡತವನ್ನು ನೀಡಿಲ್ಲ’ ಎಂದರು. ‘ಇವರು ಹತ್ತಾರು ಬಾರಿ ಬಂದಿದ್ದಾರೆ. ಕೇಸ್ ವರ್ಕರ್ ಕಡತ ರವಾನೆ ಮಾಡಿಲ್ಲ ಎಂದಾದರೆ, ನೀವೇ ಸೂಚಿಸಿ ಕಡತವನ್ನು ತರಿಸಿಕೊಳ್ಳಬಹುದಿತ್ತಲ್ಲವೇ’ ಎಂದು ಪ್ರಶ್ನಿಸಿದರು.

ಅದಕ್ಕೆ ಅಧಿಕಾರಿ, ‘ಅವರು ಕಡತ ನೀಡದಿದ್ದರೆ ಹೇಗೆ ಕೆಲಸ ಮಾಡುವುದು’ ಎಂದರು. ಆಗ ಅವರನ್ನು ತರಾಟೆಗೆ ತೆಗೆದುಕೊಂಡ ಸಚಿವರು, ‘ಕಡತ ಕೊಡಬೇಡಿ ಎಂದು ನೀವೇ ಹೇಳಿರುತ್ತೀರಿ. ಕೆಲಸ ಆಗಬೇಕು ಎಂದರೆ ಎಷ್ಟು ಹಣ ಕೊಡಬೇಕು ಮತ್ತು ರೇಟ್ ಕಾರ್ಡ್ ಎಷ್ಟು ಎಂಬುದನ್ನು ಹೇಳಿಬಿಡಿ. ಜನ ಹಣ ಕೊಟ್ಟು ಮಾಡಿಸಿಕೊಳ್ಳುತ್ತಾರೆ’ ಎಂದರು.

‘ಯಾವ ಕೆಲಸಕ್ಕೆ ಎಷ್ಟು ಕೊಡಬೇಕು ಎಂದು ಒಂದು ದೊಡ್ಡ ಬೋರ್ಡ್‌ನಲ್ಲಿ ಬರೆದು ಇಲ್ಲಿ ಹಾಕಿಬಿಡಿ. ಜನ ಬದುಕಬೇಕಲ್ಲ, ಇಲ್ಲಿಗೆ ಬಂದು ಅಲೆದಾಡುವ ಬದಲು ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಎಷ್ಟು ಕೊಡಬೇಕು ಎಂಬುದನ್ನು ನಾನಿಲ್ಲಿ ಹೇಳುವುದಿಲ್ಲ. ಅಲ್ಲಿ ನಿಂತಿರುವ ಜನರ ಬಳಿಗೆ ಹೋದರೆ ಅದನ್ನು ಹೇಳುತ್ತಾರೆ. ನಿಮ್ಮ ಎದುರೇ ಹೇಳಿಬಿಟ್ಟರೆ, ಅವರ ಕಡತಗಳನ್ನು ಏನು ಮಾಡಿಬಿಡುತ್ತೀರೋ ಎಂಬ ಭಯ ಜನರಿಗೆ’ ಎಂದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು

‘ಆನ್‌ಲೈನ್ ವ್ಯವಸ್ಥೆಯೇ ಪರಿಹಾರ’

‘ಎಂತಹ ಸೂಚನೆ ನೀಡಿದರೂ ಕೆಲ ಅಧಿಕಾರಿ ಮತ್ತು ಸಿಬ್ಬಂದಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಇದನ್ನು ಸರಿಪಡಿಸಬೇಕು ಎಂದಾದರೆ, ಇಲಾಖೆಯ ಕಾರ್ಯವೈಖರಿಯಲ್ಲೇ ಬದಲಾವಣೆ ತರಬೇಕು. ಎಲ್ಲ ಕೆಲಸವನ್ನೂ ಆನ್‌ಲೈನ್ ಮತ್ತು ಡಿಜಿಟಲ್ ರೂಪದಲ್ಲಿ ನಡೆಸುವುದೇ ಇದಕ್ಕೆ ಪರಿಹಾರ’ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಆನ್‌ಲೈನ್‌ನಲ್ಲಿ ಈ ಕೆಲಸ ಮಾಡುವಂತೆ ವ್ಯವಸ್ಥೆ ರೂಪಿಸಲಾಗುತ್ತಿದೆ. ಕಡತ ಯಾರ ಬಳಿ ಎಷ್ಟು ದಿನಗಳಿಂದ ಇದೆ ಎಂದು ಪಾರದರ್ಶಕತೆ ತರಲು ಇದರಿಂದ ಸಾಧ್ಯವಾಗುತ್ತದೆ. ಆಗಲಾದರೂ ಜನರಿಗೆ ಅನುಕೂಲವಾಗುತ್ತದೆ’ ಎಂದರು.

‘ಪಾದಪೂಜೆ ಮಾಡಬೇಕೇ’

ಕಚೇರಿಗೆ ತಡವಾಗಿ ಬಂದ ಮತ್ತು ಸಾರ್ವಜನಿಕರು ಕಾದಿದ್ದರೂ ಸ್ಪಂದಿಸದ ಅಧಿಕಾರಿಯೊಬ್ಬರನ್ನು ತರಾಟೆಗೆ ತೆಗೆದುಕೊಂಡ ಸಚಿವ ಕೃಷ್ಣಬೈರೇಗೌಡ ಅವರು, ‘ನೀವು ಪಾಳೇಗಾರರು. ನಿಮ್ಮ ಕಾಲಿಗೆ ಬೀಳಬೇಕು ಮತ್ತು ಪಾದಪೂಜೆ ಮಾಡಬೇಕು ಅಲ್ಲವೇ. ಕೆಲಸದಲ್ಲಿ ವಿಳಂಬ ಏಕೆ ಮಾಡುತ್ತೀರಿ’ ಎಂದು ಪ್ರಶ್ನಿಸಿದರು.

‘ಹಣ ನೀಡಿದವರಿಗಷ್ಟೇ ವಸತಿ ನಿಗಮದಲ್ಲಿ ಮನೆ ಹಂಚಿಕೆ’

ಬಿ.ಆರ್.ಪಾಟೀಲರದ್ದು ಎನ್ನಲಾದ ಆಡಿಯೊದಲ್ಲಿ ಆರೋಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಹಣ ನೀಡಿದವರಿಗಷ್ಟೇ ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ತಮ್ಮದೇ ಸರ್ಕಾರದ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾದ ಆಡಿಯೊವೊಂದು ಹರಿದಾಡುತ್ತಿದೆ.

ವಸತಿ ಸಚಿವ ಜಮೀರ್ ಅಹ್ಮದ್ ಅವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ಅವರ ಮೊಬೈಲ್‌ಗೆ ಕರೆ ಮಾಡಿ ಅಸಮಾಧಾನ ವ್ಯಕ್ತಪಡಿಸಿರುವ ಪಾಟೀಲ ಅವರು, ಹಣ ಪಡೆದು ಯಾವ ಗ್ರಾಮಕ್ಕೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ಎಂಬ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ‘ಈ ಮಾಹಿತಿಯನ್ನು ನಾನು ಬಹಿರಂಗಪಡಿಸಿದರೆ ಸರ್ಕಾರವೇ ಅಲ್ಲಾಡುತ್ತದೆ’ ಎಂದೂ ಶಾಸಕರು ಎಚ್ಚರಿಕೆ ನೀಡಿದ್ದಾರೆ.

> ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಕಂದಾಯ ಸಚಿವರು ಕಿಡಿಕಾರಿದ್ದರೆ, ರಾಜ್ಯ ಸರ್ಕಾರದ ಕಾರ್ಯವೈಖರಿ ವಿರುದ್ಧ ಯೋಜನಾ ಆಯೋಗದ ಉಪಾಧ್ಯಕ್ಷ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿದ್ದಾರೆ,

ಬಿ.ಆರ್. ಪಾಟೀಲ

ಬಿ.ಆರ್. ಪಾಟೀಲ ಅವರು ಸರ್ಫರಾಜ್ ಖಾನ್ ಅವರೊಂದಿಗೆ ಮಾತನಾಡಿರುವ ಮೊಬೈಲ್ ಕರೆಯ ಆಡಿಯೊ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಸಂಭಾಷಣೆಯಲ್ಲೇನಿದೆ?: ಸಚಿವ ಜಮೀರ್ ಅವರ ಆಪ್ತ ಕಾರ್ಯದರ್ಶಿಗೆ ಕರೆ ಮಾಡುವ ಬಿ.ಆರ್. ಪಾಟೀಲ, ‘ಹಣ ನೀಡಿದವರಿಗಷ್ಟೇ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ನಮ್ಮ ಸರ್ಕಾರವನ್ನೇ ದೂರಲು ಬೇಸರವಾಗುತ್ತಿದೆ’ ಎಂದು ಆರಂಭದಲ್ಲೇ ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಅದಕ್ಕೆ ಸರ್ಫರಾಜ್ ಖಾನ್ ಅವರು, ‘ಯಾವ ಕ್ಷೇತ್ರದಲ್ಲಿ ಹೀಗೆ ಆಗಿದೆ ಮಾಹಿತಿ ಕೊಡಿ. ಕೂಡಲೇ ಅವರನ್ನು ಜೈಲಿಗೆ ಕಳುಹಿಸುತ್ತೇವೆ’ ಎನ್ನುತ್ತಾರೆ.

ಇದಕ್ಕೆ ವ್ಯಂಗ್ಯವಾಗಿ ನಗುವ ಬಿ.ಆರ್. ಪಾಟೀಲರು, ‘ಆಳಂದ ಮತಕ್ಷೇತ್ರದ ಮುನ್ನಳ್ಳಿಯಲ್ಲಿ 200 ಮನೆ, ದರ್ಗಾ ಶಿರೂರ 100, ಧಂಗಾಪುರದಲ್ಲಿ 200, ಕವಲಗಾದಲ್ಲಿ 200, ಮಾಡಿಯಾಳದಲ್ಲಿ 200 ಮನೆ ಸೇರಿದಂತೆ ಒಟ್ಟು 950 ಮನೆಗಳನ್ನು ಲಂಚ ಪಡೆದು ಹಂಚಿಕೆ ಮಾಡಲಾಗಿದೆ. ಪಕ್ಕದ ಅಫಜಲಪುರ ಕ್ಷೇತ್ರದಲ್ಲಿಯೂ ಹಣ ಪಡೆದೇ ಮನೆಗಳನ್ನು ಹಂಚಿಕೆ ಮಾಡಲಾಗಿದೆ’ ಎಂದು ಗಂಭೀರ ಆರೋಪ ಮಾಡಿದ್ದಾರೆ.

‘ನಾನು ಕೊಟ್ಟ ಶಿಫಾರಸು ಪತ್ರಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಬದಲಾಗಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು ನೀಡಿದ ಪಟ್ಟಿಗೆ ಅನುಮೋದನೆ ನೀಡಿದ್ದೀರಿ. ಶಾಸಕ ನೀಡಿದ ಪತ್ರಕ್ಕೆ ಬೆಲೆಯೇ ಇಲ್ಲವೇ’ ಎಂದೂ ಖಾರವಾಗಿ ಪ್ರಶ್ನಿಸಿದ್ದಾರೆ.

ಶಾಸಕರನ್ನು ಸಮಾಧಾನ ಮಾಡಲು ಯತ್ನಿಸಿದ ಸರ್ಫರಾಜ್ ಅವರು, ‘ನೀವು ಯಾರ ಹೆಸರುಗಳನ್ನು ಶಿಫಾರಸು ಮಾಡಿದ್ದೀರೋ ಅವರ ಪಟ್ಟಿ ಕೊಡಿ ಸರ್. ಅವರಿಗೆ ಮಂಜೂರು ಮಾಡುತ್ತೇವೆ. ಹಣ ಪಡೆದು ಹಂಚಿಕೆ ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಭರವಸೆ ನೀಡುತ್ತಾರೆ.

ಮನೆ ಮಂಜೂರಾತಿ ಅವ್ಯವಹಾರದ ಕುರಿತು ಪ್ರತಿಕ್ರಿಯೆ ಪಡೆಯಲು ‘ಪ್ರಜಾವಾಣಿ’ಯು ಶಾಸಕ ಬಿ.ಆರ್. ಪಾಟೀಲರನ್ನು ಸಂಪರ್ಕಿಸಿದಾಗ, ಪ್ರತಿಕ್ರಿಯೆ ನೀಡಲು ಅವರು ನಿರಾಕರಿಸಿದರು.

ಕಮಲ್ ಹಾಸನ್ ಸಿನಿಮಾ: ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

‘ಥಗ್ ಲೈಫ್’ಗೆ ಅಡ್ಡಿಪಡಿಸಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ನವದೆಹಲಿ: ನಟ ಕಮಲ್ ಹಾಸನ್ ಅಭಿನಯದ ‘ಥಗ್ ಲೈಫ್’ ಚಿತ್ರ ಬಿಡುಗಡೆಗೆ ಅಡ್ಡಿಪಡಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿತು. ಯಾರದ್ದೋ ಭಾವನೆಗೆ ನೋವಾಗಿದೆ ಎಂಬ ಕಾರಣಕ್ಕೆ ಚಲನಚಿತ್ರ, ಸ್ಟ್ಯಾಂಡ್-ಅಪ್ ಕಾಮಿಡಿ ಅಥವಾ ಕವಿತೆಯ ವಾಚನ ನಿಲ್ಲಿಸಲು ಆಗದು ಎಂದು ನ್ಯಾಯಪೀಠ ತಿಳಿಸಿದೆ.

ಚಿತ್ರದ ಪ್ರದರ್ಶನಕ್ಕೆ ಅವಕಾಶ ನೀಡಲು ನಿರ್ದೇಶಿಸುವಂತೆ ಕೋರಿ ಎಂ. ಮಹೇಶ್ ರೆಡ್ಡಿ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಮನಮೋಹನ್ ಅವರ ಪೀಠವು, ‘ಭಾರತದಲ್ಲಿ ಭಾವನೆಗಳಿಗೆ ನೋವುಂಟು ಮಾಡುವುದಕ್ಕೆ ಕೊನೆ ಇಲ್ಲ. ಸ್ಟ್ಯಾಂಡ್-ಅಪ್ ಹಾಸ್ಯ ನಟ ಏನಾದರೂ ಹೇಳಿದರೆ, ಭಾವನೆಗಳಿಗೆ ನೋವುಂಟಾಗುತ್ತದೆ. ಅದಕ್ಕೆ ಪ್ರತಿಭಟನೆಗಳು ನಡೆಯುತ್ತವೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಪ್ರತಿಭಟನೆಗಳ ಕಾರಣಕ್ಕೆ ಚಲನಚಿತ್ರ ಪ್ರದರ್ಶನ ನಿಲ್ಲಿಸಬೇಕೇ ಅಥವಾ ಸ್ಟ್ಯಾಂಡ್-ಅಪ್ ಕಾಮಿಡಿಯನ್ನು ನಿಲ್ಲಿಸಬೇಕೇ ಅಥವಾ ಕವಿತೆಗಳ ವಾಚನ ನಿಲ್ಲಿಸಬೇಕೇ’ ಎಂದು ಪ್ರಶ್ನಿಸಿತು.

ರಾಜ್ಯದಲ್ಲಿ ಚಲನಚಿತ್ರ ಪ್ರದರ್ಶನಗೊಂಡರೆ ಅಗತ್ಯ ಭದ್ರತೆ ಒದಗಿಸುವುದಾಗಿ ರಾಜ್ಯ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತು. ಇದನ್ನು ಪೀಠವು ದಾಖಲಿಸಿಕೊಂಡಿತು.

‘ಚಲನಚಿತ್ರ ಬಿಡುಗಡೆಗೆ ಅವಕಾಶ ಮಾಡಿಕೊಡುವ ಬಗ್ಗೆ ರಾಜ್ಯವು ಪ್ರಮಾಣಪತ್ರ ಸಲ್ಲಿಸಿದೆ. ನ್ಯಾಯದ ಹಿತದಿಂದ ಈ ವಿಷಯ ಮುಕ್ತಾಯಗೊಳಿಸುವುದು ಸೂಕ್ತವೆಂದು ನಾವು ಭಾವಿಸಿದ್ದೇವೆ. ಯಾವುದೇ ವ್ಯಕ್ತಿ ಅಥವಾ ಗುಂಪು ಚಲನಚಿತ್ರ ಬಿಡುಗಡೆ ತಡೆದರೆ ಅಥವಾ ಹಿಂಸಾಚಾರ ನಡೆಸಿದರೆ, ರಾಜ್ಯವು ತಕ್ಷಣವೇ ಕ್ರಮ ಕೈಗೊಳ್ಳಬೇಕು’ ಎಂದು ಪೀಠ ನಿರ್ದೇಶನ ನೀಡಿತು.

‘ಥಗ್ ಲೈಫ್’ ಚಿತ್ರದಲ್ಲಿ ಕಮಲ್ ಹಾಸನ್

ಚಿತ್ರದ ನಿರ್ಮಾಪಕರಲ್ಲಿ ಒಬ್ಬರಾದ ಕಮಲ್ ಹಾಸನ್ ಅವರ ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರ ಹಾಜರಾದ ವಕೀಲರು, ‘ನಾವು ಇಲ್ಲಿಯವರೆಗೆ ₹30 ಕೋಟಿ ವರಮಾನ ಕಳೆದುಕೊಂಡಿದ್ದೇವೆ. ಚಿತ್ರದ ಪ್ರದರ್ಶನಕ್ಕೆ ಭದ್ರತೆ ಒದಗಿಸಲು ರಾಜ್ಯ ಸರ್ಕಾರ ಒಪ್ಪಿಕೊಂಡರೆ ಯಾವುದೇ ಸಮಸ್ಯೆ ಇಲ್ಲ’ ಎಂದರು.

ರೆಡ್ಡಿ ಪರ ವಕೀಲ ಎ. ವೇಲನ್, ‘ಚಿತ್ರ ಪ್ರದರ್ಶನಕ್ಕೆ ಬೆದರಿಕೆ ಹಾಕಿದವರ ವಿರುದ್ಧ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಅಫಿಡವಿಟ್‌ನಲ್ಲೂ ಉಲ್ಲೇಖವಿಲ್ಲ’ ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಪರ ಹಾಜರಿದ್ದ ವಕೀಲ ಸಂಜಯ್ ನುಲಿ, ‘ಕರ್ನಾಟಕದಲ್ಲಿ ಭಾಷೆ ಭಾವನಾತ್ಮಕ ವಿಷಯ. ಕಮಲ್ ಹೇಳಿಕೆಯಿಂದಾಗಿ ಜನರು ಆಕ್ರೋಶಗೊಂಡಿದ್ದಾರೆ’ ಎಂದರು.

‘ಚಲನಚಿತ್ರದ ಅನಧಿಕೃತ ನಿಷೇಧ ಮತ್ತು ಚಿತ್ರ ಮಂದಿರಗಳಿಗೆ ಬೆಂಕಿ ಹಚ್ಚುವುದನ್ನು ಪರಿಷತ್ ಬೆಂಬಲಿಸುತ್ತದೆಯೇ’ ಎಂದು ಪೀಠ ಪ್ರಶ್ನಿಸಿತು. ‘ನಟ ಕ್ಷಮೆಯಾಚಿಸಿದರೆ ಚಿತ್ರ ಪ್ರದರ್ಶಿಸಬಹುದು. ಇಲ್ಲದಿದ್ದರೆ, ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳಲಿದೆ’ ಎಂದು ನುಲಿ ಹೇಳಿದರು.

‘ಕ್ಷಮೆಯಾಚಿಸುವ ಪ್ರಶ್ನೆ ಎಲ್ಲಿದೆ? ನೀವು ಕಾನೂನನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಹೇಳಿಕೆಗಳಿಂದ ನಿಮಗೆ ನೋವಾಗಿದ್ದರೆ, ಮಾನನಷ್ಟ ದಾವೆ ಹೂಡಿ’ ಎಂದು ಪೀಠ ಹೇಳಿತು. ಹಿಂಸಾಚಾರವನ್ನು ಬೆಂಬಲಿಸುವುದಿಲ್ಲ ಎಂದು ನುಲಿ ಸ್ಪಷ್ಟಪಡಿಸಿದರು. ‘ಚಲನಚಿತ್ರದ ಬಿಡುಗಡೆಗೆ ನೀವು ತಡೆ ಒಡ್ಡುವಂತಿಲ್ಲ’ ಎಂದು ನ್ಯಾಯಮೂರ್ತಿ ಭುಯಾನ್ ಎಚ್ಚರಿಸಿದರು.

ಅಸಮಾಧಾನ

ಕನ್ನಡವು ತಮಿಳಿನಿಂದ ಹುಟ್ಟಿದೆ ಎಂಬ ಕಮಲ್ ಹಾಸನ್ ಹೇಳಿಕೆಗೆ ಕ್ಷಮೆಯಾಚಿಸುವಂತೆ ಒತ್ತಾಯಿಸಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನಡೆಗೆ ಪೀಠ ಅಸಮಾಧಾನ ವ್ಯಕ್ತಪಡಿಸಿತು. ‘ಇದಕ್ಕೆ ನಾವು ಅವಕಾಶ ನೀಡುವುದಿಲ್ಲ’ ಎಂದು ಪೀಠ ಹೇಳಿತು.

ಆದಾಗ್ಯೂ, ಮಂಡಳಿ ಪರ ವಕೀಲರು, ‘ನಾವು ಯಾವುದೇ ಬೆದರಿಕೆ ಹಾಕಿಲ್ಲ. ಕಮಲ್ ಹೇಳಿಕೆ ವಿರೋಧಿಸಿ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆ ನಡೆದಿವೆ. ಗುಂಪೊಂದು ನಮ್ಮ ಕಚೇರಿಗೆ ನುಗ್ಗಿ ಪತ್ರ ನೀಡಿತು. ಈ ಸಂಬಂಧ ಕಮಲ್‌ಗೆ ಪತ್ರ ಬರೆದಿದ್ದೇವೆ’ ಎಂದರು.

ಮಂಡಳಿಯು ಈ ಬಗ್ಗೆ ಪೊಲೀಸರಿಗೆ ದೂರು ನೀಡಿದೆಯೇ ಎಂದು ನ್ಯಾಯಮೂರ್ತಿ ಭುಯಾನ್ ಕೇಳಿದರು.

‘ನೀವು ನಿಜವಾಗಿಯೂ ಗುಂಪು ಒತ್ತಡಕ್ಕೆ ಮಣಿದಿದ್ದೀರಾ. ನೀವು ಪೊಲೀಸರ ಬಳಿ ಹೋಗಿದ್ದೀರಾ? ಇಲ್ಲ. ಅಂದರೆ ಅವರ ವಿರುದ್ಧ ನಿಮಗೆ ಯಾವುದೇ ದೂರುಗಳಿಲ್ಲ. ನೀವು ಅವರ ಹಿಂದೆ ಅಡಗಿಕೊಂಡಿದ್ದೀರಿ’ ಎಂದು ನ್ಯಾಯಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಯಾಲಯದ ಆದೇಶವನ್ನು ಪಾಲಿಸುವುದಾಗಿ ಮಂಡಳಿ ವಕೀಲರು ತಿಳಿಸಿದರು.

ಓದೋಣ ಬಾ...

ಪಿಟಿಐ ಚಿತ್ರ:

ರಾಷ್ಟ್ರೀಯ ಓದುವ ದಿನ ಅಂಗವಾಗಿ ಮಹಾರಾಷ್ಟ್ರ ದ ಠಾಣೆಯ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳು ಪುಸ್ತಕ ಓದುವುದರಲ್ಲಿ ಗುರುವಾರ ನಿರತರಾಗಿದ್ದರು -ಪಿಟಿಐ ಚಿತ್ರ

ಡಿಕೆಶಿ ಸಿಎಂ ಯಾಕೆ, ಪಿಎಂ ಆಗಲಿ– ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2028ರಲ್ಲಿ ಡಿ.ಕೆ. ಶಿವಕುಮಾರ್ ಅವರ ಸರ್ಕಾರ ಬರಲಿ. ಅವರು ಮುಖ್ಯಮಂತ್ರಿ ಯಾಕೆ ಪ್ರಧಾನ ಮಂತ್ರಿ ಬೇಕಾದರೂ ಆಗಲಿ. ಯಾರು ಬೇಡ ಅನ್ನುತ್ತಾರೆ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

‘2028ಕ್ಕೆ ಡಿಕೆ ಸರ್ಕಾರ ತನ್ನಿ’ ಎಂಬ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ರಾಜಣ್ಣ, ‘ಎಲ್ಲ ವಿಷಯದಲ್ಲೂ ಅಂತಿಮ ನಿರ್ಧಾರ ಹೈಕಮಾಂಡ್‌ದ್ದು’ ಎಂದರು.

‘ಅಧಿಕಾರಕ್ಕೆ ಬರಬೇಕಾದರೆ ಬಹುಮತ ಬೇಕು. ಸರ್ಕಾರ ರಚಿಸಲು ಬೇಕಿರುವಷ್ಟು ನಂಬರ್‌ಗಳು ಸಿಕ್ಕರೆ ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

ಐಐಟಿ ದೆಹಲಿಗೆ 123ನೇ ಸ್ಥಾನ

‘ಕ್ಯೂಎಸ್’ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿ ಪ್ರಕಟ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ 54 ಸಂಸ್ಥೆಗಳು

ನವದೆಹಲಿ (ಪಿಟಿಐ): ಲಂಡನ್ ಮೂಲದ ಕ್ವಾಕೆರಲಿ ಸೈಮಂಡ್ಸ್ (ಕ್ಯೂಎಸ್) ಬಿಡುಗಡೆಗೊಳಿಸಿದ 2026ರ ಶ್ರೇಯಾಂಕದಲ್ಲಿ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ)ಯು ಭಾರತದ ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಐಐಟಿ ದೆಹಲಿಯು 70 ಸ್ಥಾನಗಳಷ್ಟು ಮೇಲಕ್ಕೇರಿದೆ.

ಕ್ಯೂಎಸ್ ವಿಶ್ವದ ಅತ್ಯಂತ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ 2026ನೇ ಸಾಲಿನ ಶ್ರೇಯಾಂಕ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಪಟ್ಟಿಯಲ್ಲಿ ಭಾರತದ 8 ಸಂಸ್ಥೆಗಳು ಹೊಸದಾಗಿ ಸೇರ್ಪಡೆಯಾಗಿವೆ. ದೇಶದ ಒಟ್ಟು 54 ಸಂಸ್ಥೆಗಳು ಸೇರ್ಪಡೆಗೊಂಡಿವೆ. ಈ ಮೂಲಕ ಪಟ್ಟಿಯಲ್ಲಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ನಾಲ್ಕನೇ ದೇಶ ಎಂಬ ಗೌರವ ಭಾರತದ್ದಾಗಿದೆ. ಪಟ್ಟಿಯಲ್ಲಿ ಅಮೆರಿಕ (192 ಸಂಸ್ಥೆಗಳು) ಮೊದಲ ಸ್ಥಾನದಲ್ಲಿದ್ದು, ಬ್ರಿಟನ್ (90) ಹಾಗೂ ಚೀನಾ (72) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ.

ಭಾರತದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು

ಐಐಟಿ ದೆಹಲಿ	123
ಐಐಟಿ ಬಾಂಬೆ	129
ಐಐಟಿ ಮದ್ರಾಸ್	180
ಐಐಟಿ ಖರಗ್‌ಪುರ	215
ಐಐಎಸ್ಸಿ, ಬೆಂಗಳೂರು	219

ಐಐಟಿ ದೆಹಲಿ

ಭಾರತದ ಶಿಕ್ಷಣ ಕ್ಷೇತ್ರದ ಪಾಲಿಗೆ ಶುಭ ಸುದ್ದಿಯಾಗಿದೆ. ದೇಶದ ಯುವಕರ ಏಳ್ಗೆಗಾಗಿ ಸಂಶೋಧನೆ ಹಾಗೂ ನಾವೀನ್ಯ ವ್ಯವಸ್ಥೆ ರೂಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ
ನರೇಂದ್ರ ಮೋದಿ, ಪ್ರಧಾನಿ

ಶ್ರೇಯಾಂಕದಲ್ಲಿ ಭಾರತದ ಸಾಧನೆ ಗಮನಾರ್ಹ. ಈ ಸಾಧನೆಯೊಂದಿಗೆ ದೇಶದ ಶಿಕ್ಷಣ ಕ್ಷೇತ್ರವು ಹೊಸ ಎತ್ತರಕ್ಕೇರಿದಂತಾಗಿದೆ
ಧರ್ಮೇಂದ್ರ ಪ್ರಧಾನ್, ಕೇಂದ್ರ ಶಿಕ್ಷಣ ಸಚಿವ

ಭಾರತವು ಜಾಗತಿಕ ಉನ್ನತ ಶಿಕ್ಷಣ ನಕಾಶೆಯನ್ನು ಮತ್ತೆ ಬರೆಯುತ್ತಿದೆ. ಈ ವರ್ಷದ ಆವೃತ್ತಿಯಲ್ಲಿ ಬೇರೆ ಯಾವ ದೇಶವೂ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಶ್ರೇಯಾಂಕ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ
ಜೆಸ್ಸಿಕಾ ಟರ್ನರ್, ಸಿಇಒ ಕ್ಯೂಎಸ್

ವಿಶ್ವದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು

1	ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅಮೆರಿಕ
2	ಇಂಪೀರಿಯಲ್ ಕಾಲೇಜ್ ಆಫ್ ಲಂಡನ್, ಬ್ರಿಟನ್
3	ಸ್ಟ್ಯಾನ್‌ಫೋರ್ಡ್ ಯುನಿವರ್ಸಿಟಿ, ಅಮೆರಿಕ
4	ಯುನಿವರ್ಸಿಟಿ ಆಫ್ ಆಕ್ಸ್‌ಫರ್ಡ್, ಬ್ರಿಟನ್
5	ಹಾರ್ವರ್ಡ್ ಯುನಿವರ್ಸಿಟಿ, ಅಮೆರಿಕ

ಶ್ರೇಯಾಂಕಕ್ಕೆ ಮಾನದಂಡವೇನು?

ಲಂಡನ್ ಮೂಲದ ಉನ್ನತ ಶಿಕ್ಷಣ ಸಂಸ್ಥೆಗಳ ವಿಶ್ಲೇಷಣಾ ಸಂಸ್ಥೆ ಕ್ವಾಕೆರಲಿ ಸೈಮಂಡ್ಸ್ (ಕ್ಯೂಎಸ್) ಪ್ರತಿವರ್ಷವೂ ಶಿಕ್ಷಣ ಸಂಸ್ಥೆಯ ಹಿನ್ನೆಲೆ, ಬೋಧಕರು– ವಿದ್ಯಾರ್ಥಿಗಳ ಅನುಪಾತ, ಸಂಶೋಧನೆಯಿಂದಾದ ಪರಿಣಾಮ, ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ವೈವಿಧ್ಯ ಹಾಗೂ ಪದವೀಧರರಿಗೆ ಸಿಗುತ್ತಿರುವ ಉದ್ಯೋಗಾವಕಾಶ ಆಧರಿಸಿ ಶ್ರೇಯಾಂಕ ನೀಡುತ್ತದೆ.

‘ಕೋಮು ದಳ್ಳುರಿಗೆ ಧರ್ಮ ರಾಜಕೀಯ ಕಾರಣ’

ಕರಾವಳಿ ಘಟನೆ: ಮಧ್ಯಂತರ ವರದಿ ಸಲ್ಲಿಸಿದ ಕೆಪಿಸಿಸಿ ಸತ್ಯಶೋಧನಾ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಭಾಗದಲ್ಲಿ ಹೆಚ್ಚುತ್ತಿರುವ ಕೋಮು ಗಲಭೆ ಕುರಿತು ಅಧ್ಯಯನ ನಡೆಸಲು ಕೆಪಿಸಿಸಿ ನೇಮಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ನಾಸೀರ್ ಹುಸೇನ್ ನೇತೃತ್ವದ ಸತ್ಯಶೋಧನಾ ಸಮಿತಿಯು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಗುರುವಾರ ಮಧ್ಯಂತರ ವರದಿ ಸಲ್ಲಿಸಿದೆ.

ವರದಿ ಸ್ವೀಕರಿಸಿದ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಕರಾವಳಿ ಭಾಗದಲ್ಲಿ ನಡೆಯುವ ಕೆಲವು ಘಟನೆಗಳು ಆತಂಕ ಹುಟ್ಟುಹಾಕಿದೆ. ಕೋಮು ದ್ವೇಷದ ಪರಿಣಾಮ ಸರಣಿ ಹತ್ಯೆಗಳು ನಡೆದಿವೆ. ಇಂತಹ ಘಟನೆಗಳನ್ನು ತಡೆಯಲು ರಾಜ್ಯ ಸರ್ಕಾರ ಈಗಾಗಲೇ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಸ್ಥಳೀಯರ ಭಾವನೆ, ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ಅಲ್ಲಿಗೆ ಪಕ್ಷದಿಂದ ಸತ್ಯಶೋಧನಾ ಸಮಿತಿ ಕಳುಹಿಸಲಾಗಿತ್ತು’ ಎಂದರು.

ಮಧ್ಯಂತರ ವರದಿಯಲ್ಲಿ ಏನಿದೆ: ಕರಾವಳಿಯಲ್ಲಿ ನಡೆದ ಕೋಮು ಹತ್ಯೆಗಳಿಗೆ ಹಲವು ಕಾರಣಗಳನ್ನು ಮಧ್ಯಂತರ ವರದಿಯಲ್ಲಿ ಉಲ್ಲೇಖಿಸಲಾಗಿದೆ. ರಾಜಕೀಯ, ಧರ್ಮ, ಮಾಫಿಯಾ, ಹೊರಗಿನ ಬೆಂಬಲ, ಪೊಲೀಸ್ ನಿಷ್ಕ್ರಿಯತೆ, ವ್ಯಾಪಕ ಪ್ರಚಾರ ಕೋಮು ಘಟನೆಗಳಿಗೆ ಪ್ರಮುಖ ಕಾರಣ ಎಂದೂ ವರದಿಯಲ್ಲಿ ಪಟ್ಟಿ ಮಾಡಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

‘ರಾಜಕೀಯ ನಾಯಕರು ಧರ್ಮದ ಆಧಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅದರಲ್ಲೂ ಬಿಜೆಪಿ ಮತ್ತು ಸಂಘ ಪರಿವಾರದವರು ಧಾರ್ಮಿಕತೆ ಮೇಲೆ ರಾಜಕೀಯ ಮಾಡುತ್ತಿದ್ದಾರೆ. ಕಾಂಗ್ರೆಸ್ ಮತ್ತು ಇತರೆ ಜಾತ್ಯತೀತ ರಾಜಕೀಯ ನಾಯಕರು ಈ ವಿಚಾರದಲ್ಲಿ ಸ್ಪಷ್ಟ ನಿಲುವು ಹೊಂದಿಲ್ಲ. ಅಲ್ಲದೆ, ಬಿಜೆಪಿ ವಿರೋಧಿ ಬಣದ ರಾಜಕೀಯ ಗೊಂದಲವೂ ಈ ಬೆಳವಣಿಗೆಗಳಿಗೆ ಕಾರಣ ಎಂದು ವರದಿಯಲ್ಲಿದೆ’ ಎಂದು ಮೂಲಗಳು ಹೇಳಿವೆ.

‘ಕರಾವಳಿ ಭಾಗದಲ್ಲಿ ಧಾರ್ಮಿಕ ಪ್ರತ್ಯೇಕತೆಯ ಪ್ರಭಾವ ಹೆಚ್ಚಿದೆ. ಹಿಂದೂ–ಮುಸ್ಲಿಂ ಸಮುದಾಯದ ಯುವ ವರ್ಗ ಹಾಗೂ ಧಾರ್ಮಿಕ ಗುರುಗಳು ಇದಕ್ಕೆ ಬೆಂಬಲ ನೀಡುತ್ತಿದ್ದಾರೆ. ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಧರ್ಮದವರನ್ನು ಕೆರಳಿಸುವ ರೀತಿಯಲ್ಲಿ ಆಚರಣೆ ಮಾಡುವುದೂ ಕೆಲವು ಘಟನೆಗಳಿಗೆ ಕಾರಣ. ಧರ್ಮಾಂಧತೆಯ ಕಾರಣಕ್ಕೆ ಮತೀಯ ಗೂಂಡಾಗಿರಿ ಪದೇ ಪದೇ ನಡೆಯುತ್ತಿದೆ. ಇದರಿಂದ ಧಾರ್ಮಿಕ ಸಂಘರ್ಷ ಮತ್ತಷ್ಟು ಹೆಚ್ಚಿದೆ ಎಂದೂ ವರದಿಯಲ್ಲಿದೆ’ ಎಂದು ಗೊತ್ತಾಗಿದೆ.

ಕೆಲವು ಮಾಫಿಯಾಗಳು ಕರಾವಳಿಯನ್ನು ನಿಯಂತ್ರಿಸುತ್ತಿರುವುದೂ ಕೋಮು ದಳ್ಳುರಿ ಹೆಚ್ಚಲು ಕಾರಣವಾಗುತ್ತಿದೆ. ಡ್ರಗ್ಸ್, ಗಾಂಜಾ, ಮರಳು, ರೌಡಿಸಂ, ಜಾನುವಾರು ಸಾಗಣೆ ಮಾಫಿಯಾ ಕರಾವಳಿಯಲ್ಲಿ ಶಾಂತಿ ಕದಡಲು ಕಾರಣ. ಎರಡೂ ಧರ್ಮದವರಿಗೆ, ಸಂಘಟನೆಗಳಿಗೆ ಸ್ಥಳೀಯರ ಬೆಂಬಲದ ಜೊತೆ ಹೊರಗಿನ ಬೆಂಬಲವೂ ದೊರೆಯುತ್ತಿದೆ. ವಿದೇಶಗಳಿಂದಲೂ ಆರ್ಥಿಕ ನೆರವು ಸಿಗುತ್ತಿದೆ. ಪೊಲೀಸರ ನಿಷ್ಕ್ರಿಯತೆ ಕೂಡ ಘಟನೆ ಹೆಚ್ಚಲು ಕಾರಣವಾಗುತ್ತಿದೆ. ಜೊತೆಗೆ, ಕರಾವಳಿಯ ಘಟನೆ ಹಾಗೂ ಬೆಳವಣಿಗೆಗೆ ವ್ಯಾಪಕ ಪ್ರಚಾರ ಕೂಡ ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಸಮಿತಿಯ ಸದಸ್ಯರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಮಾಜಿ ಸಚಿವ ಕಿಮ್ಮನೆ ರತ್ನಾಕರ, ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಇದ್ದರು.

ವಿ.ಆರ್. ಸುದರ್ಶನ್, ಮಂಜುನಾಥ ಭಂಡಾರಿ, ಡಿ.ಕೆ. ಶಿವಕುಮಾರ್, ನಾಸೀರ್ ಹುಸೇನ್ ಇದ್ದರು

ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ ತಯಾರಿ– ಅರಣ್ಯ ನಾಶದ ಭೀತಿ

ಸವದತ್ತಿ: 65,000 ಮರಗಳಿಗೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಸವದತ್ತಿ ಪಂಪ್ಡ್‌ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ ಸುಮಾರು 65,000 ಮರಗಳನ್ನು ಕತ್ತರಿಸಬೇಕಾಗುತ್ತದೆ ಎಂದು ಯೋಜನೆಯ ಗುತ್ತಿಗೆ ಪಡೆದಿರುವ ಗ್ರೀನ್‌ಕೋ ಕಂಪನಿಯು ಕೇಂದ್ರ ಪರಿಸರ ಸಚಿವಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವದಲ್ಲಿ ವಿವರಿಸಿದೆ.

ಯೋಜನೆಗೆ ಆರಂಭಿಕ ಹಂತದಲ್ಲಿ 5,087 ಮರಗಳನ್ನು ತೆಗೆಯಬೇಕಾಗುತ್ತದೆ ಎಂದು ಹೇಳಲಾಗಿತ್ತು. ಈಗ ಕತ್ತರಿಸಬೇಕಾದ ಮರಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿದೆ.

ಬೆಳಗಾವಿಯ ರೇಣುಕಾಸಾಗರ ಜಲಾಶಯದ ಹಿನ್ನೀರಿನ ಸಮೀಪ ಈ ಘಟಕವನ್ನು ನಿರ್ಮಿಸುವ ಯೋಜನೆಯನ್ನು 2018ರಲ್ಲಿ ಮೊದಲ ಬಾರಿಗೆ ಪ್ರಸ್ತಾವಿಸಲಾಗಿತ್ತು. ಆರಂಭದಲ್ಲಿ 1,260 ಮೆಗಾವಾಟ್ ಸಾಮರ್ಥ್ಯದ ಜಲವಿದ್ಯುತ್ ಘಟಕ ಸ್ಥಾಪಿಸುವ ಗುರಿ ಇತ್ತು. ಈ ಯೋಜನೆಗೆ ಕೇಂದ್ರ ಪರಿಸರ ಸಚಿವಾಲಯವು 2022ರಲ್ಲಿ ಪರಿಸರ ಅನುಮತಿಯನ್ನೂ ನೀಡಿತ್ತು.

> ಪುನರ್ವಸತಿ ಉಪಕ್ರಮಗಳಿಗೆ ಅಂತಿಮ ಅನುಮೋದನೆ ನೀಡಿಲ್ಲ. ಕೂಲಂಕಷವಾಗಿ ಪರಿಶೀಲಿಸಿ, ಅಗತ್ಯ ಬದಲಾವಣೆಗಳನ್ನು ಸೂಚಿಸಲಾಗುತ್ತದೆ
> **ಶಿವಾನಂದ ನಾಯಕವಾಡಿ,** ಗೋಕಾಕ ಉಪ ಅರಣ್ಯಸಂರಕ್ಷಣಾಧಿಕಾರಿ

ರೇಣುಕಾಸಾಗರ ಜಲಾಶಯದ ಹಿನ್ನೀರಿನ ಸಮೀಪ ಎತ್ತರದ ಪ್ರದೇಶದಲ್ಲಿ ಒಂದು ಜಲಾಶಯ ಮತ್ತು ತಗ್ಗಿನ ಪ್ರದೇಶದಲ್ಲಿ ಮತ್ತೊಂದು ಜಲಾಶಯ ನಿರ್ಮಿಸುವುದು. ಎತ್ತರದಲ್ಲಿರುವ ಜಲಾಶಯದಲ್ಲಿನ ನೀರನ್ನು ಬೃಹತ್ ಕೊಳವೆಗಳ ಮೂಲಕ ಕಿರು ಜಲಾಶಯಕ್ಕೆ ಹಾಯಿಸುವುದು. ನೀರು ಹಾದು ಹೋಗುವ ಕೊಳವೆ ಮಾರ್ಗದಲ್ಲಿ ಟರ್ಬೈನ್‌ಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸುವುದು ಈ ಯೋಜನೆಯ ಸ್ವರೂಪ.

ಗ್ರೀನ್‌ಕೋ ಕಂಪನಿಯು ಮೊದಲ ಬಾರಿಗೆ ಪರಿಸರ ಅನುಮತಿಗೆ ಪ್ರಸ್ತಾವ ಸಲ್ಲಿಸಿದ್ದಾಗ, ಯೋಜನೆ ಅನುಷ್ಠಾನಕ್ಕೆ ಸುಮಾರು 510 ಎಕರೆ ಸ್ಥಳ ಬೇಕಾಗುತ್ತದೆ ಎಂದು ತಿಳಿಸಿತ್ತು. ಈಗ ಪರಿಷ್ಕೃತ ಯೋಜನೆಯಡಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 1,600 ಮೆಗಾವಾಟ್‌ಗೆ ಹೆಚ್ಚಿಸಲಾಗಿದ್ದು, 759 ಎಕರೆ ಪ್ರದೇಶ ಬೇಕಾಗುತ್ತದೆ ಎಂದು ನೂತನ ಪ್ರಸ್ತಾವದಲ್ಲಿ ವಿವರಿಸಿದೆ.

‘ಕಂಪನಿಯು ತನ್ನ ಪ್ರಸ್ತಾವದಲ್ಲಿ ಉಲ್ಲೇಖಿಸಿರುವ 759 ಎಕರೆಯಲ್ಲಿ 395 ಎಕರೆ–39 ಗುಂಟೆಯಷ್ಟು ಅರಣ್ಯ ಪ್ರದೇಶವೇ ಬರುತ್ತದೆ. ಈ ಪ್ರದೇಶದಲ್ಲಿ ಇರುವ 64,454 ಮರಗಳನ್ನು ಕತ್ತರಿಸಬೇಕಾಗುತ್ತದೆ ಎಂದು ಕಂಪನಿ ಹೇಳಿದೆ. ಹಿನ್ನೀರಿನ ಸಮೀಪದಲ್ಲಿ ಅರಣ್ಯೇತರ ಜಮೀನೂ ಇದ್ದು, ಅದನ್ನೇ ಯೋಜನೆಗೆ ನೀಡಬಹುದಿತ್ತು. ಅರಣ್ಯ ಪ್ರದೇಶವನ್ನೇ ಏಕೆ ನೀಡಲಾಗಿದೆ ಎಂಬುದು ಗೊತ್ತಾಗುತ್ತಿಲ್ಲ’ ಎಂಬುದು ಅರಣ್ಯ ಇಲಾಖೆಯ ಗೋಕಾಕ ವಲಯದ ಅಧಿಕಾರಿಗಳ ಕಳವಳ.

23 ಪ್ರಭೇದದ ಸಸ್ತನಿಗಳು

‘ಕಂಪನಿಯು ಪ್ರಸ್ತಾವದಲ್ಲಿ ಉಲ್ಲೇಖಿಸಿರುವ ಅರಣ್ಯ ಪ್ರದೇಶದಲ್ಲಿ 23 ಪ್ರಭೇದದ ಸಸ್ತನಿಗಳನ್ನು ಗುರುತಿಸಲಾಗಿದೆ. ನರಿ, ಕಾಡುಬೆಕ್ಕು, ಕೃಷ್ಣಮೃಗ, ಚುಕ್ಕೆಜಿಂಕೆಗಳು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಇಷ್ಟು ದೊಡ್ಡ ಮಟ್ಟದಲ್ಲಿ ಅರಣ್ಯ ನಾಶವಾದರೆ, ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗುತ್ತದೆ’ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದರು.

‘ವನ್ಯಜೀವಿಗಳ ಪುನರ್ವಸತಿಗೆ ಕೆಲವು ಉಪಕ್ರಮಗಳನ್ನು ವಿವರಿಸಿ ಕಂಪನಿ ಪ್ರಸ್ತಾವ ಸಲ್ಲಿಸಿದೆ. ಆದರೆ, ಆ ಯಾವ ಉಪಕ್ರಮದಿಂದಲೂ ವನ್ಯಜೀವಿಗಳ ಸಂರಕ್ಷಣೆ ಸಾಧ್ಯವಿಲ್ಲ’ ಎಂದು ಆ ಅಧಿಕಾರಿ ಹೇಳಿದರು.

ದ.ಕ ಪೊಲೀಸ್ ವ್ಯವಸ್ಥೆ ಸುಧಾರಣೆಗೆ ಎಸ್‌ಪಿ ಕ್ರಮ

ಕೆಳ ಹಂತದ 116 ಪೊಲೀಸರ ವರ್ಗ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ಅವರು ಕ್ರಮವಹಿಸಿದ್ದು, ಅನೇಕ ವರ್ಷಗಳಿಂದ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಹಾಗೂ ಕಾನ್‌ಸ್ಟೆಬಲ್‌ಗಳನ್ನು ವರ್ಗಾವಣೆ ಮಾಡಿದ್ದಾರೆ.

ಜಿಲ್ಲೆಯ ಬೇರೆ ಬೇರೆ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಒಟ್ಟು ಏಳು ಮಂದಿ ಎಎಸ್‌ಐ, 31 ಮಂದಿ ಹೆಡ್ ಕಾನ್‌ಸ್ಟೆಬಲ್‌ಗಳು ಹಾಗೂ 78 ಮಂದಿ ಕಾನ್‌ಸ್ಟೆಬಲ್‌ಗಳನ್ನು ಜಿಲ್ಲಾ ಪೊಲೀಸ್ ಘಟಕ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣೆಗಳಿಗೆ ಜೂನ್ 10ರಂದು ವರ್ಗಾವಣೆ ಮಾಡಲಾಗಿದೆ. ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಎಸ್‌ಪಿ ಕಚೇರಿಯ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು
- ಆಡಳಿತಾತ್ಮಕ ದೃಷ್ಟಿಯಿಂದ ಕ್ರಮ
- 7 ಮಂದಿ ಎಎಸ್‌ಐ, 31 ಹೆಡ್ ಕಾನ್‌ಸ್ಟೆಬಲ್, 78 ಕಾನ್‌ಸ್ಟೆಬಲ್‌ಗಳ ವರ್ಗ

ಕೆಲವು ಪೊಲೀಸ್ ಅಧಿಕಾರಿಗಳು ಹಾಗೂ ಕಾನ್‌ಸ್ಟೆಬಲ್‌ಗಳು ಐದು ವರ್ಷಗಳಿಗೂ ಹೆಚ್ಚು ಸಮಯದಿಂದ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ನಗರಕ್ಕೆ ಭೇಟಿ ನೀಡಿದ್ದ ಗೃಹ ಸಚಿವ ಜಿ.ಪರಮೇಶ್ವರ ಅವರು ಜಿಲ್ಲೆಯಲ್ಲಿ ಧರ್ಮಾಧರಿತ ಕೊಲೆಗಳು ನಡೆದ ಬಳಿಕ ಜಿಲ್ಲೆಯ ಶಾಂತಿ ಸುವ್ಯವಸ್ಥೆ ಕಾಪಾಡಲು ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಅನೇಕ ವರ್ಷಗಳಿಂದ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡುವಂತೆ ನಿರ್ದೇಶನ ನೀಡಿದ್ದರು. ಇದರ ಬೆನ್ನಲ್ಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಈ ಕ್ರಮ ಕೈಗೊಂಡಿದ್ದಾರೆ.

ಈ ಬಾರಿ 11 ದಿನಗಳ ‘ದಸರಾ’!

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವವು ಈ ಬಾರಿ 11 ದಿನ ನಡೆಯಲಿದೆ. ಹೀಗೆ, ಪಂಚಾಂಗದಲ್ಲಿ ಮುಹೂರ್ತ ಬಂದಿರುವುದು ಉತ್ಸವದ ಇತಿಹಾಸದಲ್ಲಿ ಇದೇ ಮೊದಲು.

‘ಸಂಪ್ರದಾಯದಂತೆ, ಹಿಂದಿನಿಂದಲೂ 10 ದಿನಗಳವರೆಗೆ ಉತ್ಸವ ನಡೆಸಲಾಗುತ್ತಿತ್ತು. ಈ ಬಾರಿ ‘ಪಂಚಮಿ’ಯು 2 ದಿನಗಳವರೆಗೆ ಬಂದಿದೆ. ಹೀಗಾಗಿ, ಸೆ.22ರಿಂದ ಅ.2ರವರೆಗೆ ದಸರಾ ನಿಗದಿಯಾಗಿದೆ. ಇದೇ 26ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ಸಭೆ ನಿಗದಿಯಾಗಿದ್ದು, ಅಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ’ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಶುಕ್ರವಾರ, ಜೂನ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 170 | ಪುಟ 20
prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮರುನಾಮಕರಣ

UPSC

ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಸಾರ್ವಜನಿಕ ಪ್ರಕಟಣಾ ಯೋಜನೆಗೆ (ಪಿಡಿಎಸ್) 'ಪ್ರತಿಭಾ ಸೇತು' ಯೋಜನೆ ಎಂದು ಮರುನಾಮಕರಣ ಮಾಡಿದೆ

ಸೇವಾ ಇ-ಬುಕ್

ಕೇಂದ್ರ ಸರ್ಕಾರದ ಇಲಾಖೆಗಳು ನೌಕರರ ಸೇವಾ ದಸ್ತಾಂಶಗಳನ್ನು ಭೌತಿಕ ಪುಸ್ತಕಕ್ಕೆ ಬದಲಾಗಿ 'ಇ-ಬುಕ್' ರೂಪದಲ್ಲಿ ನಿರ್ವಹಿಸಬೇಕು ಎಂದು ಸಿಬ್ಬಂದಿ ಸಚಿವಾಲಯವು ಜೂನ್ 17ರ ಆದೇಶದಲ್ಲಿ ತಿಳಿಸಿದೆ

ಸೆನ್ಸೆಕ್ಸ್ 81,361 | ನಿಫ್ಟಿ 24,793 | $/₹ 86.73 | ಚಿನ್ನ (Std. 10g) ₹1.04 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.16 ಲಕ್ಷ (ಬೆಂಗಳೂರು)

ಅಲ್ಪಸಂಖ್ಯಾತ ಮೀಸಲು ಶೇ 15ಕ್ಕೆ

ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ, ಪಾರ್ಸಿ ಸಮುದಾಯವರಿಗೂ ಅನ್ವಯ: ಎಚ್‌.ಕೆ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ನಿಗದಿ ಮಾಡಿರುವ ಮೀಸಲಾತಿ ಪ್ರಮಾಣವನ್ನು ಶೇ 10ರಿಂದ ಶೇ 15ಕ್ಕೆ ಹೆಚ್ಚಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಭೆಯ ಬಳಿಕ ಮಾಹಿತಿ ನೀಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, 'ಈ ಮೀಸಲಾತಿಯು ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಪಾರ್ಸಿಗಳಿಗೂ ಅನ್ವಯವಾಗುತ್ತದೆ' ಎಂದರು.

'ಅಲ್ಪಸಂಖ್ಯಾತರಲ್ಲಿ ವಸತಿಹೀನರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಕೇಂದ್ರ ಸರ್ಕಾರವೂ ಇದನ್ನು ಗಮನಿಸಿ ಸೂಚನೆ ನೀಡಿದೆ. ಸಾಚಾರ್ ಸಮಿತಿಯೂ ತನ್ನ ವರದಿಯಲ್ಲಿ ಈ ಅಂಶವನ್ನು ಗುರುತಿಸಿದೆ. ಈ ಸಮುದಾಯದ ವಸತಿ-ರಹಿತರನ್ನು ಗಮನದಲ್ಲಿಟ್ಟುಕೊಂಡು ಮತ್ತು ಸಾಮಾಜಿಕ ನ್ಯಾಯ ಒದಗಿಸಲು ಮೀಸಲಾತಿ ಪ್ರಮಾಣ ಹೆಚ್ಚಿಸಲು ತೀರ್ಮಾನಿಸಲಾಗಿದೆ' ಎಂದರು.

'ಮೀಸಲಾತಿ ಹೆಚ್ಚಳಕ್ಕೆ ಕಾಯ್ದೆಗೆ ತಿದ್ದುಪಡಿ ಅಗತ್ಯವಿಲ್ಲ. ಆದೇಶ ಹೊರಡಿಸಿದರೆ ಸಾಕು. ಶೇ 15 ಮೀಸಲಾತಿಯಲ್ಲಿ ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧರಿಗೆ ಇಂತಿಷ್ಟು ಪ್ರಮಾಣ ಎಂದು ಪ್ರತ್ಯೇಕಿಸುವ ಪ್ರಶ್ನೆಯೇ ಇಲ್ಲ. ಇದರಲ್ಲಿ ರಾಜಕೀಯ ಇಲ್ಲ' ಎಂದು ಪಾಟೀಲ ತಿಳಿಸಿದರು.

ಪ್ರಮುಖ ಮಸೂದೆಗಳ ಪ್ರಸ್ತಾಪ

- 'ಕರ್ನಾಟಕ ಜನಸಂದಣಿ ನಿರ್ವಹಣೆ ಮಸೂದೆ 2025
- ಕರ್ನಾಟಕ ರೋಹಿತ್ ವೇಮುಲಾ ಮಸೂದೆ 2025
- ಕರ್ನಾಟಕ ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿ ಹರಡುವಿಕೆ ನಿರ್ಬಂಧ ಮಸೂದೆ 2025,
- ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆ ಮಸೂದೆ 2025

ಈ ಮಸೂದೆಗಳ ಕುರಿತು ವಿಸ್ತೃತವಾದ ಚರ್ಚೆ ಆಗಬೇಕೆಂದು ತೀರ್ಮಾನಿಸಿ, ಮುಂದಿನ ಸಂಪುಟ ಸಭೆಗೆ ತರಲು ನಿರ್ಧರಿಸಲಾಯಿತು' ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.



ಸಂಗ್ರಹ ಚಿತ್ರ

ಖಾಲಿ ಮನೆಗೆ ಹೋಗಲು ಅಲ್ಪಸಂಖ್ಯಾತರು ಸಿದ್ಧ: ಡಿಕೆಶಿ

ವಸತಿ ಇಲಾಖೆ ನಿರ್ಮಿಸುವ ವಸತಿಗಳಿಗೆ ಇತರೆ ಸಮುದಾಯದವರು ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ. ಬೆಂಗಳೂರಿನಲ್ಲೂ ಅನೇಕ ವಸತಿ ಸಮುಚ್ಚಯಗಳಲ್ಲಿ ಮನೆಗಳು ಖಾಲಿ ಇವೆ. ಈ ಮನೆಗಳಿಗೆ ಯಾರೂ ಅರ್ಜಿ ಹಾಕದೇ ಇದ್ದಾಗ ನಾವು ಏನು ಮಾಡಬೇಕು? ಮನೆಯನ್ನು ಹಾಗೇ ಖಾಲಿ ಬಿಡಬೇಕೇ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಸಂಪುಟ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಸರ್ಕಾರದ ತೀರ್ಮಾನವನ್ನು ಬಲವಾಗಿ ಸಮರ್ಥಿಸಿಕೊಂಡರು. 'ಕೆಲವು ನಗರ ಪ್ರದೇಶಗಳಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಬಡವರ ಪ್ರಮಾಣ ಶೇ 20ರಿಂದ 30ರಷ್ಟಿದೆ. ಹೀಗಾಗಿ ಅವರಿಗೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಲು ಪ್ರಸ್ತಾವನೆ ಬಂದಿದೆ. ಈ ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ಸಹಾಯಧನ ತೀರಾ ಕಡಿಮೆ ಇದೆ. ಖಾಲಿ ಬಿದ್ದ ಮನೆಗಳನ್ನು ಯಾರಿಗೆ ನೀಡಬೇಕು' ಎಂದು ಪ್ರಶ್ನಿಸಿದರು. 'ಮಂಡ್ಯದಲ್ಲಿಯೂ ವಸತಿ ಸಮುಚ್ಚಯ ನಿರ್ಮಿಸಲಾಗಿದೆ. ಆದರೆ, ಅಲ್ಲಿಗೆ ಯಾರೂ ಹೋಗದೇ ಖಾಲಿ ಬಿದ್ದಿವೆ. ಈ ಮನೆಗಳಿಗೆ ಹೋಗಲು ಅಲ್ಪಸಂಖ್ಯಾತರು ಮುಂದಾಗಿದ್ದಾರೆ. ಹೀಗಾಗಿ ಸರ್ಕಾರ ಈ ತೀರ್ಮಾನ ಮಾಡಿದೆ' ಎಂದು ಅವರು ತಿಳಿಸಿದರು.

ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ 'ಆರೋಗ್ಯ'

ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಮತ್ತು ಗೌರವಧನದ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸುಮಾರು 3 ಲಕ್ಷ ಸಿಬ್ಬಂದಿ ಮತ್ತು ಅವರ ಅವಲಂಬಿತರಿಗೆ ನಗದು ರಹಿತ ಆರೋಗ್ಯ ಯೋಜನೆ ಕಲ್ಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಈ ಯೋಜನೆಯಡಿ ಇವರಿಗೆ ಚಿಕಿತ್ಸೆಗಾಗಿ ವರ್ಷಕ್ಕೆ ₹5 ಲಕ್ಷಗಳವರೆಗೆ ನೀಡಲಾಗುವುದು. ಸಿಬ್ಬಂದಿ ತಿಂಗಳಿಗೆ ₹100 ವಂತಿಗೆ ಪಾವತಿಸಬೇಕು. ಉಳಿದ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಲಿದೆ ಎಂದು ಹೇಳಿದರು.

ಮುಖ್ಯಾಂಶಗಳು

- ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ
- ಅಲ್ಪಸಂಖ್ಯಾತರಲ್ಲಿ ವಸತಿಹೀನರ ಸಂಖ್ಯೆ ಹೆಚ್ಚು; ಎಚ್‌.ಕೆ. ಪಾಟೀಲ

ಇದ್ಯಾವ ಸಾಮಾಜಿಕ ನ್ಯಾಯ?



ಸರ್ಕಾರಿ ಕಾಮಗಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಗೇ ಮಾನ್ಯತೆ ಸಿಕ್ಕಿಲ್ಲ. ಈಗ ಹೊಸ ರೀತಿಯ ಮೀಸಲಾತಿ ತರಲು ಹೊರಟಿದ್ದಾರೆ. ಆರ್‌ಸಿಬಿ ವಿಜಯೋತ್ಸವದಲ್ಲಿ ಕಾಲ್ತುಳಿತದಿಂದ ಜನರು ಸತ್ತ ದುರಂತವನ್ನು ಮರೆಮಾಚಲು ಸಿದ್ದರಾಮಯ್ಯ ಅವರು ಇಂತಹ ವಿವಾದ ಹುಟ್ಟುಹಾಕಿದ್ದಾರೆ. 'ಅಹಿಂದ'ದಲ್ಲಿ, 'ಹಿಂದ' ಮಾಯವಾಯಿತೇ? ಇದು ಯಾವ ರೀತಿಯ ಸಾಮಾಜಿಕ ನ್ಯಾಯ?

ಆರ್‌.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಬಡ ಜನರಿಗೆ ನೆರವು ನೀಡುತ್ತಿದ್ದೇವೆ



ವಸತಿ ಇಲಾಖೆಯಿಂದ ನಗರ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿರುವ ವಸತಿಗಳು ಹೆಚ್ಚಾಗಿ ಖಾಲಿ ಇದ್ದು, ಅಲ್ಪಸಂಖ್ಯಾತರು ಅಂತಹ ಮನೆಗಳಿಗೆ ಹೋಗಲು ಸಿದ್ಧರಿದ್ದಾರೆ. ಹೀಗಾಗಿ ಅವರಿಗೆ ನೀಡಲಾಗಿದ್ದ ವಸತಿ ಹಂಚಿಕೆ ಮೀಸಲಾತಿಯನ್ನು ಶೇ 15ಕ್ಕೆ ಏರಿಕೆ ಮಾಡಿದ್ದೇವೆ. ಯಾರು ಏನೇ ಟೀಕೆ ಮಾಡಲಿ. ನಾವು ಅಲ್ಪಸಂಖ್ಯಾತ ಸಮುದಾಯದ ಬಡ ಜನರಿಗೆ ನೆರವು ನೀಡುತ್ತಿದ್ದೇವೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಭಾರತ–ಪಾಕ್ ನಾಯಕರೇ ಸಂಘರ್ಷ ನಿಲ್ಲಿಸಿದ್ದು'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ 'ಬಹಳ ಬುದ್ಧಿವಂತ' ನಾಯಕರು ಸೇನಾ ಸಂಘರ್ಷ ಮುಂದುವರಿಸದಿರಲು 'ನಿರ್ಧಾರ' ಮಾಡಿದರು. ಇಲ್ಲದೇ ಹೋದಲ್ಲಿ, ಸಂಘರ್ಷದಲ್ಲಿ ಅಣ್ವಸ್ತ್ರಗಳ ಬಳಕೆಯಾಗಲಿತ್ತು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ತಾನೇ ಮಧ್ಯಸ್ಥಿಕೆ ವಹಿಸುವ ಮೂಲಕ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ನಿಲ್ಲಿಸಿದ್ದಾಗಿ ಇದುವರೆಗೆ ಹೇಳುತ್ತಲೇ ಬಂದಿದ್ದ ಟ್ರಂಪ್, ಇದೇ ಮೊದಲ ಬಾರಿಗೆ ಇದರ ಶ್ರೇಯ ತಮ್ಮದೆಂದು ಹೇಳಿಕೊಂಡಿಲ್ಲ.

ಪಾಕಿಸ್ತಾನ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರಿಗೆ ಶ್ವೇತಭವನದಲ್ಲಿ ಭೋಜನ ಕೂಟ ಏರ್ಪಡಿಸಿದ್ದ ಸಂದರ್ಭದಲ್ಲಿ ಟ್ರಂಪ್ ಅವರು ಓವಲ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಈ ಮಾತು ಹೇಳಿದ್ದಾರೆ.

'ಮುನೀರ್ ಅವರಿಗೆ ಆತಿಥ್ಯ ನೀಡುತ್ತಿರುವುದು ಹೆಮ್ಮೆಯ ವಿಚಾರ. ಸಂಘರ್ಷವನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿದ್ದಕ್ಕಾಗಿ ನಾನು ಮುನೀರ್ ಅವರಿಗೆ ಧನ್ಯವಾದ ಹೇಳಲು ಬಯಸಿದ್ದು, ಇದಕ್ಕಾಗಿಯೇ ಅವರನ್ನು ಆಹ್ವಾನಿಸಿರುವೆ. ಪ್ರಧಾನಿ ಮೋದಿ ಅವರಿಗೂ ಧನ್ಯವಾದ ಹೇಳಲು ಇಷ್ಟಪಡುತ್ತೇನೆ. ಭಾರತ ಮತ್ತು ಪಾಕಿಸ್ತಾನ ಜೊತೆ ವ್ಯಾಪಾರ ಒಪ್ಪಂದ ಕುದುರಿಸಲು ನಾವು ಕಾರ್ಯಪ್ರವೃತ್ತರಾಗಿದ್ದೇವೆ' ಎಂದು ಟ್ರಂಪ್ ಅವರು ಹೇಳಿದ್ದಾರೆ.

▶10

ಧನ್ಯವಾದ ಹೇಳಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರ ಅಮೆರಿಕ ಭೇಟಿ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಪಾಕ್ ಸೇನೆಯು, 'ಪಾಕಿಸ್ತಾನ–ಭಾರತ ನಡುವಿನ ಸಂಘರ್ಷ ಶಮನದಲ್ಲಿ ರಚನಾತ್ಮಕ ಮತ್ತು ಫಲಿತಾಂಶ ಸಾಧಿಸುವಂತಹ ಪಾತ್ರ ನಿರ್ವಹಿಸಿದ್ದಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪಾಕಿಸ್ತಾನ ಜನತೆ ಮತ್ತು ಸರ್ಕಾರದ ಪರವಾಗಿ ಸೇನಾ ಮುಖ್ಯಸ್ಥರು ಧನ್ಯವಾದ ತಿಳಿಸಿದ್ದಾರೆ' ಎಂದು ಹೇಳಿದೆ.

ಭಾರತ ಮತ್ತು ಪಾಕಿಸ್ತಾನ ಅಣ್ವಸ್ತ್ರ ಹೊಂದಿರುವ ದೇಶಗಳು. ಸಂಘರ್ಷ ನಿಲ್ಲಿಸುವ ನಿರ್ಧಾರದ ಮೂಲಕ ಅಣು ಯುದ್ಧವಾಗುವುದನ್ನು ಎರಡೂ ದೇಶಗಳು ತಪ್ಪಿಸಿವೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಖಮೇನಿ ಕೊಲ್ಲುವೆವು: ಇಸ್ರೇಲ್ ಗುಡುಗು

ಬೀರ್ಶೇಬಾ (ಇಸ್ರೇಲ್) (ಎಪಿ): ಇರಾನ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಇಸ್ರೇಲ್‌ನ ದಕ್ಷಿಣದಲ್ಲಿರುವ ಬೀರ್ಶೇಬಾ ನಗರದ ಪ್ರಮುಖ ಆಸ್ಪತ್ರೆಯೊಂದು ಹಾನಿಗೀಡಾಗಿದೆ. ಇದರ ಬೆನ್ನಲ್ಲೇ, ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ವಿರುದ್ಧ ಇಸ್ರೇಲ್ ಗುಡುಗಿದೆ.

'ಇಸ್ರೇಲ್ ತನ್ನೆಲ್ಲಾ ಗುರಿಗಳನ್ನು ಸಾಧಿಸಬೇಕಾದರೆ, ಈ ವ್ಯಕ್ತಿ (ಖಮೇನಿ) ಬದುಕಿರಬಾರದು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಮ್ಮ ಸೇನೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕ್ಯಾಟ್ಸ್ ಗುರುವಾರ ಹೇಳಿದ್ದಾರೆ. ▶10

'ಕ್ಷಿಪಣಿ, ಬಾಂಬ್ ದಾಳಿಯಿಂದ ಭೀತರಾಗಿದ್ದೆವು..'

ನವದೆಹಲಿ (ಪಿಟಿಐ): 'ವಾಸವಿದ್ದ ಕಟ್ಟಡದ ಸಮೀಪದ ಜಾಗದಲ್ಲಿ ಕ್ಷಿಪಣಿಗಳು ಅಪ್ಪಳಿಸುತ್ತಿದ್ದುದನ್ನು ನೋಡಿ ದಂಗಾಗಿದ್ದೆವು. ಬಾಂಬ್‌ಗಳು ಬಿದ್ದು ಭಾರಿ ಸ್ಫೋಟ ಕೇಳಿ ಬೆಚ್ಚಿ ಬೀಳುತ್ತಿದ್ದೆವು...'

ಸಂಘರ್ಷ ಪೀಡಿತ ಇರಾನ್‌ನಿಂದ ಭಾರತಕ್ಕೆ ಮರಳಿರುವ ಅನೇಕ ವೈದ್ಯಕೀಯ ವಿದ್ಯಾರ್ಥಿಗಳು, ಇಸ್ರೇಲ್‌ನ ದಾಳಿಯನ್ನು ಮೆಲುಕು ಹಾಕಿದ ಪರಿ ಇದು.

ಇರಾನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ಅರ್ಮೇನಿಯಾಕ್ಕೆ ಕರೆತಂದು ನಂತರ, ಭಾರತಕ್ಕೆ ಕರೆದುಕೊಂಡು ಬರಲಾಗುತ್ತಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ 'ಆಪರೇಷನ್ ಸಿಂಧೂ' ಹೆಸರಿನಲ್ಲಿ ರಕ್ಷಣಾ ಕಾರ್ಯ ಕೈಗೊಂಡಿದೆ. ಮೊದಲ ತಂಡ ಗುರುವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು. ▶10

ನೀರಜ್‌ಗೆ ವರ್ಷದ ಮೊದಲ ಪ್ರಶಸ್ತಿ ಗುರಿ

ಪ್ಯಾರಿಸ್ (ಪಿಟಿಐ): ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಶುಕ್ರವಾರ ನಡೆಯಲಿರುವ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಕಣಕ್ಕಿಳಿಯಲಿದ್ದು ಅಗ್ರಸ್ಥಾನದತ್ತ ಗುರಿನೆಟ್ಟಿದ್ದಾರೆ.

ಸುದ್ದಿ ▶11

ಚಿನಕುರುಳಿ ಪ್ರಕಾಶ್ ಶೆಟ್ಟಿ

ನ್ಯಾ.ವರ್ಮಾ ತಪ್ಪಿತಸ್ಥ: ಸಮಿತಿ

ನಗದು ಪತ್ತೆ ಪ್ರಕರಣ: ನ್ಯಾಯಮೂರ್ತಿ ವಜಾಕ್ಕೆ ಸಹಮತ

ನವದೆಹಲಿ (ಪಿಟಿಐ): ನಗದು ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಚಾರಣಾ ಸಮಿತಿಯು ತಿಳಿಸಿದೆ. ಅಲ್ಲದೇ, ವರ್ಮಾ ಅವರನ್ನು ಸೇವೆಯಿಂದ ತೆಗೆದುಹಾಕುವಂತೆ ವರದಿಯಲ್ಲಿ ಶಿಫಾರಸು ಮಾಡಿದೆ.

ನ್ಯಾ.ವರ್ಮಾ

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ದಿನಾಂಕ 20.06.2025ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ: 25.06.2025 ರಂದು ಬೆಳಿಗ್ಗೆ 11.30 ಗಂಟೆಗೆ. ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ: 25.06.2025 ರಂದು ಸಂಜೆ 5.30 ಗಂಟೆವರೆಗೆ. ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ https://kppp.karnataka.in ಇಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.
ಸಂಪರ್ಕಿಸಬೇಕಾದ ಸಂ. ಎಜಿಎಂ(ಪಿ&ಎ)–080–22258131/132/9845833566 ಮತ್ತು ಇ–ಮೇಲ್: murthy.ksiidc@gmail.com
ಸಹಿ/– ಪ್ರಧಾನ ವ್ಯವಸ್ಥಾಪಕರು,
ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ: ಕರಾಸಾ/ವಿನಿ/ಕೆಂಬನಿ/ವಾ/280/2025–26 ದಿನಾಂಕ: 17.06.2025
ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 02/2025–26
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ಮಳಿಗೆ ಸಂಖ್ಯೆ 07 (ನೂತನ ಮಳಿಗೆ), 48, 60, 05 (ನೂತನ ಮಳಿಗೆ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 02, 25, 31 & 03 (ನೂತನ ಮಳಿಗೆ, ತೆರೆದ ಸ್ಥಳ)ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 46, 114, ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3)ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟೀನ್ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ), ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 06, 11, 12, 11 & 12, 13 & 30 ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಎರಡನೇ ಮಹಡಿ ಮತ್ತು ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 20.06.2025 ರಿಂದ 09.07.2025 ರವರೆಗೆ ಇ–ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್‌ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ: 09240214000/09240214001
ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ಕೆಂ.ಬ.ನಿ. ವಿಭಾಗ, ಬೆಂಗಳೂರು.
DIPR/CP/YC/1358/2025-26

ಭಾರತೀಯ ರಿಸರ್ವ್ ಬ್ಯಾಂಕ್
ಮೇಲ್ವಿಚಾರಣಾ ಇಲಾಖೆ, ಪ್ರಾದೇಶಿಕ ಕಚೇರಿ, ಬೆಂಗಳೂರು
www.rbi.org.in
ಸೂಚನೆ
ಮೆ। ಕಲ್ಲರಕ್ಕಲ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್
(ಈ ಹಿಂದೆ ‘ಎಚ್ ಎಂ ಎಫ್ ಫೈನಾನ್ಷಿಯಲ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್’ ಎಂದು ಕರೆಯಲಾಗುತ್ತಿತ್ತು)
#1101, ಕ್ಯಾಬಿನ್ ಸಂಖ್ಯೆ 311 / ಬಿ, ಮೂರನೇ ಮಹಡಿ, 24ನೇ ಮೇನ್,
ಜೆ ಪಿ ನಗರ 1ನೇ ಹಂತ, ಬೆಂಗಳೂರು– 560 078
ಭಾರತೀಯ ರಿಸರ್ವ್ ಬ್ಯಾಂಕ್, ದಿನಾಂಕ ಮೇ 7, 2025 ರಂದು ಮೆ। ಕಲ್ಲರಕ್ಕಲ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಕಲಂ 45–ಐಎ ಅಡಿಯಲ್ಲಿ ನೀಡಲಾಗಿದ್ದ ನೋಂದಣಿ ಪ್ರಮಾಣಪತ್ರವನ್ನು ಏಕೆ ರದ್ದು ಪಡಿಸಬಾರದು ಎಂಬುದಕ್ಕೆ ಕಾರಣ ಕೇಳಿ ಲಿಖಿತ ರೂಪದಲ್ಲಿ ಮೇ 28,2025 ಅಥವಾ ಅದಕ್ಕೂ ಮೊದಲು ಉತ್ತರ ಸಲ್ಲಿಸುವಂತೆ ಷೋಕಾಸ್ ನೋಟೀಸ್ ಅನ್ನು ಜಾರಿ ಮಾಡಿತ್ತು. ಕಂಪನಿಗೆ ಜಾರಿ ಮಾಡಿದ್ದ ಷೋಕಾಸ್ ನೋಟೀಸ್ ವಿತರಣೆಯಾಗದೆ ವಾಪಸ್ಸು ಬಂದಿದೆ ಮತ್ತು ಇಂದಿನವರೆಗೆ ಕಂಪನಿಯು ಯಾವುದೇ ಉತ್ತರವನ್ನು ಸಲ್ಲಿಸಿಲ್ಲ.
ಈ ಸೂಚನೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗೆ ಮೆ। ಕಲ್ಲರಕ್ಕಲ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಯಾವುದೇ ಉತ್ತರವನ್ನು ಸಲ್ಲಿಸಲು ವಿಫಲವಾದಲ್ಲಿ, ಆ ಸಂಸ್ಥೆಗೆ ಈ ವಿಷಯದಲ್ಲಿ ಯಾವುದೇ ಹೆಚ್ಚುವರಿ ಸೂಚನೆ ನೀಡದೆ, ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಕಲಂ 45–ಐಎ (6)ರ ಅಡಿಯಲ್ಲಿ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸುವುದು ಅನಿವಾರ್ಯವಾಗಲಿದೆ ಎಂಬುದನ್ನು ದಯವಿಟ್ಟು ಗಮನಿಸಿ.
ದಿನಾಂಕ: ಜೂನ್ 20, 2025 ಸಹಿ/–
ಸ್ಥಳ: ಬೆಂಗಳೂರು ಮಹಾ ವ್ಯವಸ್ಥಾಪಕರು

भारतीय रिज़र्व बैंक
पर्यवेक्षण विभाग, क्षेत्रीय कार्यालय, बेंगलूरु
www.rbi.org.in
सूचना
मैसर्स कल्लरक्कल फिनकॉर्प प्राइवेट लिमिटेड
(जिसे पूर्व में एचएमएफ फाइनेंसियल सर्विसेज प्राइवेट लिमिटेड के रूप में जाना जाता था)
#1101, कैबिन नं 311/बी, 3री मंजिल, 24वां मुख्य, जे पी नगर, 1ला फेज, बेंगलोर–560 078
भारतीय रिज़र्व बैंक ने दिनांक 07 मई 2025 को कारण बताओ नोटिस जारी किया है, जिसमें मैसर्स कल्लरक्कल फिनकॉर्प प्राइवेट लिमिटेड से 28 मई 2025 तक लिखित रूप में इस बात का कारण बताए जाने की अपेक्षा की गई थी कि भारतीय रिज़र्व बैंक अधिनियम, 1934 की धारा 45–IअA के तहत उन्हें जारी किया गया पंजीकरण प्रमाण–पत्र क्यों न रद्द कर दिया जाए। कंपनी को जारी की गई कारण बताओ नोटिस बिना सुपुर्द के हमें वापस लौटा दी गई है और कंपनी ने आज तक कारण बताओ नोटिस का कोई उत्तर प्रस्तुत नहीं किया है।
इस बात पर ध्यान दिया जाए कि इस सूचना के प्रकाशन की तिथि से 15 दिनों के अंदर यदि मैसर्स कल्लरक्कल फिनकॉर्प प्राइवेट लिमिटेड कारण बताओ नोटिस का कोई उत्तर प्रस्तुत नहीं कर पाता है तो भारतीय रिज़र्व बैंक द्वारा उनको भारतीय रिज़र्व बैंक अधिनियम, 1934 की धारा 45–I अ (6) के तहत उन्हें जारी किया गया पंजीकरण प्रमाण–पत्र रद्द कर दिया जाएगा।
तिथि: जून 20, 2025 हस्ता/–
स्थान: बेंगलूरु महाप्रबंधक

ಅಫ್ಗನ್ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಷುವಾ ಜೆ. ಅವರ ಆಟದ ನೆರವಿನಿಂದ ಅಫ್ಗನ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 3–1 ಗೋಲುಗಳಿಂದ ಗೌತಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಜೋಷುವಾ (24ನೇ ಮತ್ತು 50ನೇ ನಿಮಿಷ) ಎರಡು ಗೋಲು ಗಳಿಸಿದರು. ಅಜಿತ್ ಕುಮಾರ್ ಎಸ್. (41ನೇ ನಿ.) ಅಫ್ಗನ್ ಪರ ಮತ್ತೊಂದು ಗೋಲು ಗಳಿಸಿದರು. ಹರೀಶ್ (26ನೇ) ಅವರು ಗೌತಮ ತಂಡದ ಪರ ಏಕೈಕ ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಮಿಸ್ಕಾ ಯುನೈಟೆಡ್ ಎಫ್‌ಸಿ 2–0ಯಿಂದ ಮಹಾರಾಜ ಸೋಷಿಯಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಮಿಸ್ಕಾ ತಂಡದ ದಿಲ್ಶಾದ್ ರೆಹಮಾನ್ ಕೆ. (4ನೇ) ಮತ್ತು ಜೈಶಾದ್ ಪಿ. (56ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

‘ಪ್ಯಾಕೇಜ್ ಸಮಸ್ಯೆ ಇದೆಯೇ’

ಬಿಎಸ್‌ಡಬ್ಲ್ಯುಎಂಎಲ್: ಘನತ್ಯಾಜ್ಯ ವಿಲೇವಾರಿ ಮರು ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಘನ ತ್ಯಾಜ್ಯ ವಿಲೇವಾರಿ ಮಾಡುವುದಕ್ಕಿಂತಲೂ ಟೆಂಡರ್ ಕರೆಯುವ ಬಗ್ಗೆಯೇ ನಿಮಗೆ ಹೆಚ್ಚು ಆಸಕ್ತಿ ಇದ್ದಂತಿದೆ’ ಎಂದು ರಾಜ್ಯ ಸರ್ಕಾರದ ಕ್ರಮವನ್ನು ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ‘ಕಸ ವಿಲೇವಾರಿಯ ಪ್ಯಾಕೇಜ್ ಸಮಸ್ಯೆಯನ್ನು ಏನಾದರೂ ಎದುರಿಸುತ್ತಿದ್ದೀರಾ’ ಎಂದು ಕಟುವಾಗಿ ಪ್ರಶ್ನಿಸಿದೆ.

ಸರ್ಕಾರ ಹೊರಡಿಸಿರುವ ಮರು ಟೆಂಡರ್ ಆದೇಶ ಪ್ರಶ್ನಿಸಿದ ಮತ್ತು ಇದೇ ಪೀಠ ನೀಡಿರುವ ಈ ಮೊದಲಿನ ಆದೇಶಕ್ಕೆ ಸಂಬಂಧಿಸಿದ, ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಸರ್ಕಾರ ಈ ಮೊದಲು ಇದೇ ನ್ಯಾಯಪೀಠಕ್ಕೆ ನೀಡಿದ್ದ ಮುಚ್ಚಳಿಕೆಯನ್ನು ಉಲ್ಲಂಘಿಸಿದೆ ಮತ್ತು ಹೊಸ ಟೆಂಡರ್ ಕರೆಯುವ ಮೂಲಕ ನ್ಯಾಯಾಂಗ ನಿಂದನೆಗೆ ಈಡಾಗಿದೆ’ ಎಂದು ಆರೋಪಿಸಿದರು.

ಇದನ್ನು ಬಲವಾಗಿ ಅಲ್ಲಗಳೆದ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಅರ್ಜಿದಾರರು ನ್ಯಾಯಾಲಯದ ದಿಕ್ಕು ತಪ್ಪಿಸುತ್ತಿದ್ದಾರೆ ಮತ್ತು ಈ ಹಿಂದಿನ ಹಾಗೂ 2025ರ ಮೇ 28ರಂದು ಕರೆದಿರುವ ಟೆಂಡರ್‌ಗಳು ಒಂದಕ್ಕೊಂದು ಭಿನ್ನವಾಗಿವೆ. ಇವೆರಡನ್ನೂ ತುಲನೆ ಮಾಡುವುದು ಸರಿಯಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸರ್ಕಾರಕ್ಕೆ ಬೆಂಗಳೂರಿನ ಕಸ ವಿಲೇವಾರಿಗಿಂತಲೂ ಹೆಚ್ಚಾಗಿ ಟೆಂಡರ್ ಕರೆಯುವ ಬಗ್ಗೆಯೇ ಉತ್ಸುಕತೆ ಇದ್ದಂತಿದೆ. ಅಷ್ಟೇ ಅಲ್ಲ, ಟೆಂಡರ್ ಕರೆದ ನಂತರ ಕಸ ವಿಲೇವಾರಿಗೆ ಜಾಗ ಹುಡುಕುತ್ತಿರುವಂತಿದೆ’ ಎಂದು ಕುಟುಕಿತು.

‘ಟೆಂಡರ್ ಕರೆದಿರುವ ಪ್ರಕ್ರಿಯೆ ಹೈಕೋರ್ಟ್ ಈ ಮೊದಲು ನೀಡಿರುವ ಆದೇಶ ಮತ್ತು ಸರ್ಕಾರ ತಾನು ನೀಡಿರುವ ಮುಚ್ಚಳಿಕೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಗಮ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಹೊರಡಿಸಿರುವ ಹೊಸ ಟೆಂಡರ್ ಆದೇಶದಲ್ಲಿ ಸರ್ಕಾರ ತನ್ನ ಮಾತನ್ನು ಮೀರಿ ನಡೆದಿರುವುದು ಮೇಲ್ನೋಟಕ್ಕೆ ವೇದ್ಯವಾಗುತ್ತಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ, ‘ಈ ಕುರಿತಂತೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿ’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರಿಗೆ ಆದೇಶಿಸಿತು.

ಪ್ರತಿವಾದಿಗಳಾದ, ಬಿಎಸ್‌ಡಬ್ಲ್ಯುಎಂಎಲ್ ತಾಂತ್ರಿಕ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ಹಾಗೂ ಘನತ್ಯಾಜ್ಯ ನಿರ್ವಹಣೆಯ ಕಾರ್ಯ ನಿರ್ವಾಹಕ ಎಂಜಿನಿಯರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

2025ರ ಏಪ್ರಿಲ್ 22ರಂದು ನೀಡಿರುವ ಆದೇಶದ ಮರು ಪರಿಶೀಲನೆಗೆ ಕೋರಿ, ‘ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಸಂಘ ಹಾಗೂ ಗುತ್ತಿಗೆದಾರರ ಸಂಘ’ದ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಹ್ಮಣ್ಯಂ ಈ ಅರ್ಜಿ ಸಲ್ಲಿಸಿದ್ದಾರೆ.

‘ಎಷ್ಟು ಸಮರ್ಥನೀಯ?’

‘ಸರ್ಕಾರ ನೀಡಿರುವ ಮುಚ್ಚಳಿಕೆಯ ಬಗ್ಗೆ ಇನ್ನೂ ಯಾವುದೇ ತಾರ್ಕಿಕ ಅಂತ್ಯ ಕಾಣದಿರುವಾಗ ಮರು ಟೆಂಡರ್‌ಗೆ ಅಧಿಸೂಚನೆ ಹೊರಡಿಸಿ ಸರ್ಕಾರ ಕೈಗೊಂಡಿರುವ ನಿಲುವು ಎಷ್ಟು ಸಮರ್ಥನೀಯ’ ಎಂದು ನ್ಯಾಯಪೀಠ ಪ್ರಶ್ನಿಸಿತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 89 ಪ್ಯಾಕೇಜ್‌ಗಳ ಬದಲು 33 ವಿಭಾಗವಾರು ಪ್ಯಾಕೇಜ್‌ನ ಮರು ಟೆಂಡರ್ ಅನ್ನು ಬಿಎಸ್‌ಡಬ್ಲ್ಯುಎಂಎಲ್ ಮೇ 28ರಂದು ಆಹ್ವಾನಿಸಿತ್ತು.

ಜೂನ್ 9ರಂದು ನಡೆದ ಪ್ರೀ–ಬಿಡ್ ಸಭೆಯಲ್ಲಿ ಚರ್ಚಿಸಲಾಗದಂತಹ ವಿನಾಯಿತಿ, ಷರತ್ತುಗಳನ್ನು ವಿಧಿಸಿ ಹೊಸ ಅನುಬಂಧವನ್ನು ಎಂಜಿನಿಯರ್‌ಗಳು ಸೇರಿಸಿದ್ದಾರೆ ಎಂದು ಗುತ್ತಿಗೆದಾರರು ಆರೋಪಿಸಿದ್ದರು.

ಸುದ್ದಿ 2 ನಿಮಿಷ

‘ಯಲಹಂಕ ಮೇಲ್ಸೇತುವೆ ವರ್ಷಾಂತ್ಯಕ್ಕೆ ಮುಗಿಸಿ’

ಬೆಂಗಳೂರು: ಯಲಹಂಕ ಉಪ ನಗರ–ದೊಡ್ಡಬಳ್ಳಾಪುರ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕ ಉಪನಗರ ವ್ಯಾಪ್ತಿಯಲ್ಲಿ ಮೇಜರ್ ಸಂದೀಪ್ ಉಣ್ಣಿಕೃಷ್ಣನ್ ಮುಖ್ಯರಸ್ತೆ ಬಳಿ ಪರಿಶೀಲಿಸಿ ಮಾತನಾಡಿದ ಅವರು, ‘ಪಾದಚಾರಿ ಮಾರ್ಗದಲ್ಲಿ ಕೆಲವೆಡೆ ಕುಸಿತವಾಗಿದ್ದು, ಅದರಿಂದ ನಾಗರಿಕರ ಓಡಾಟಕ್ಕೆ ಸಮಸ್ಯೆ ಆಗಲಿದೆ. ದುರಸ್ತಿ ಕಾರ್ಯ ಕೈಗೊಂಡು ಕೂಡಲೇ ಸರಿಪಡಿಸಬೇಕು’ ಎಂದು ಹೇಳಿದರು.

ಯಲಹಂಕ ಉಪನಗರ 16ನೇ ಬಿ ಅಡ್ಡರಸ್ತೆಯಲ್ಲಿ ಕೆಲವು ಅಂಗಡಿ ಮಾಲೀಕರು ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯ ಬಿಸಾಡಿರುವುದನ್ನು ಗಮನಿಸಿ, ಅಂಗಡಿ ಮಾಲೀಕರಿಗೆ ದಂಡ ವಿಧಿಸುವಂತೆ ಮಾರ್ಷಲ್‌ಗಳಿಗೆ ನಿರ್ದೇಶನ ನೀಡಿದರು.

ಯಲಹಂಕ ಉಪನಗರ ಎ- ಸೆಕ್ಟರ್‌ನಲ್ಲಿರುವ 1ನೇ ಮುಖ್ಯರಸ್ತೆಯಲ್ಲಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸಲಾಗುತ್ತಿದ್ದು, ಕಟ್ಟಡ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



ಯಲಹಂಕ ಉಪನಗರದಲ್ಲಿ ನಿರ್ಮಿಸಿರುವ ವಾಚ್ ಟವರ್, ಸೈಕಲ್ ಟ್ರ್ಯಾಕ್, ಕಾರ್ ಟವರ್, ಕನ್ನಡ ಅಕ್ಷರ ಮಾಲೆ ಹಾಗೂ ಇತರೆ ಅಲಂಕಾರಿಕ ದೀಪಗಳಿಗೆ ಸಂಬಂಧಿಸಿದಂತೆ ವಾರ್ಷಿಕ ನಿರ್ವಹಣೆಗೆ ಅಗತ್ಯವಿರುವ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸುವಂತೆ ಅಧಿಕಾರಿಗಳಿಗೆ ಹೇಳಿದರು.

ಜುಲೈ: ‘ನಂದಿ’ಯಲ್ಲಿ ಸಂಪುಟ ಸಭೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಗಿರಿಧಾಮದಲ್ಲಿ ಜೂ.19ರಂದು ನಿಗದಿಯಾಗಿದ್ದ ಸಚಿವ ಸಂಪುಟ ಸಭೆ ವಿಧಾನಸೌಧಕ್ಕೆ ಸ್ಥಳಾಂತರವಾಗಿತ್ತು. ಇದಕ್ಕೆ ಜಿಲ್ಲೆಯಲ್ಲಿ ನಾಗರಿಕ ವಲಯದಿಂದ ಆಕ್ರೋಶ ವ್ಯಕ್ತವಾಗಿತ್ತು.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ನಂದಿಬೆಟ್ಟದಲ್ಲಿ ಜುಲೈ 16 ಅಥವಾ 17 ರಂದು ಸಂಪುಟ ಸಭೆ ನಡೆಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಹಲವು ಇಲಾಖೆಯಿಂದ ಪ್ರಸ್ತಾವಗಳು ಬಾರದೇ ಇದ್ದ ಕಾರಣ, ಬೆಂಗಳೂರಿನಲ್ಲಿ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಯಿತು. ಆ ಪ್ರದೇಶಕ್ಕೆ ಪರಿಣಾಮಕಾರಿ ಕೆಲಸಗಳು ಆಗಬೇಕು ಎಂಬ ಉದ್ದೇಶದಿಂದ ಮತ್ತು ಕೆಲವು ಸಚಿವರ ಕೋರಿಕೆ ಮೇರೆಗೆ ಮುಂದೂಡಲಾಯಿತು ಎಂದೂ ಸರ್ಕಾರ ತಿಳಿಸಿದೆ.

ಈಗ ಜುಲೈ ತಿಂಗಳಲ್ಲಿ ನಡೆಯುವ ಸಚಿವ ಸಂಪುಟದತ್ತ ಜಿಲ್ಲೆಯ ಜನರ ಚಿತ್ತ ಹರಿದಿದೆ. ಜಿಲ್ಲೆಯ ಶಾಸಕರು ಈ ಭಾಗದ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತಿದ್ದಾರೆ. ಮುಂದಿನ ತಿಂಗಳು ನಂದಿಯಲ್ಲಿ ಸಚಿವ ಸಂಪುಟ ಸಭೆ ನಡೆದರೆ ಯಾವ ವಿಚಾರಗಳು ಕಾರ್ಯಸೂಚಿ ಪಟ್ಟಿಯಲ್ಲಿ ಇರಲಿವೆ ಎನ್ನುವ ಕುತೂಹಲ ಸಹ ಶಾಶ್ವತ ನೀರಾವರಿ ಹೋರಾಟಗಾರರು, ರೈತ ಮುಖಂಡರದ್ದಾಗಿದೆ.

ಚಿಕ್ಕಬಳ್ಳಾಪುರ ಸೇರಿದಂತೆ ಬಯಲು ಸೀಮೆಯ ಜಿಲ್ಲೆಗಳ ಅಭಿವೃದ್ಧಿ ವಿಚಾರವಾಗಿ ನಂದಿಯಲ್ಲಿ ನಡೆಯುವ ಸಚಿವ ಸಂಪುಟ ಸಭೆಯು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಬೇಕು ಎನ್ನುವ ಒತ್ತಾಯ ಜನಪ್ರತಿನಿಧಿಗಳದ್ದೂ ಆಗಿದೆ.

ನಾಳೆ ‘ಭೂಮಿಕಾ ಕ್ಲಬ್’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆ ವತಿಯಿಂದ ಜೂನ್ 21ರಂದು ಮಧ್ಯಾಹ್ನ 2.30ಕ್ಕೆ ಕೋರಮಂಗಲ ಕ್ಲಬ್‌ನಲ್ಲಿ 28ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

‘ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್’, ‘ಮಣಿಪಾಲ್ ಆಸ್ಪತ್ರೆಗಳ ಸಮೂಹ’, ‘ಇಕೊ ಕ್ರಿಸ್ಟಲ್’ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಚಂದನವನದ ನಟಿ ಅಂಕಿತಾ ಅಮರ್ ಉದ್ಘಾಟಿಸಲಿದ್ದಾರೆ. ವಿಚಾರಸಂಕಿರಣ ಹಾಗೂ ಸಂಗೀತ ಕಾರ್ಯಕ್ರಮ ಸೇರಿ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರಲಿದೆ.

ಈ ಬಾರಿ ಪ್ರಮುಖ ಆಕರ್ಷಣೆಯಾಗಿ ‘ಚಂದನವನ’ ರಸಪ್ರಶ್ನೆಯಲ್ಲಿ ಪಾಲ್ಗೊಂಡು ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮದಲ್ಲಿ ಭಾಗವಹಿಸುವ ಪಾಸ್‌ಗಳನ್ನು ಗೆಲ್ಲುವ ಅವಕಾಶವನ್ನು ಕಲ್ಪಿಸಲಾಗಿದೆ.

ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರ ಅವರು ಅಡುಗೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಮಣಿಪಾಲ್ ಆಸ್ಪತ್ರೆಯ ಹೃದಯತಜ್ಞೆ ಡಾ. ಅನುಷಾ ಎ. ರಾವ್ ಅವರು ಆರೋಗ್ಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಿನಿ ಸಮ್ಮಾನ ಪುರಸ್ಕಾರ ಸಮಾರಂಭಕ್ಕೆ ಸಿದ್ಧರಾಗುವ ಕುರಿತು ಶೋಭಾ ಬಿ.ಜಿ. ಮಾಹಿತಿ ನೀಡಲಿದ್ದಾರೆ. ದಿವ್ಯಾ ರಾಮಚಂದ್ರ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಮೋಜಿನ ಆಟಗಳು, ಹೈ-ಟೀ ಮತ್ತು ನೆಟ್‌ವರ್ಕಿಂಗ್ ಹೊಂದಿರುವ ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾಂಕ್ರೀಟ್, ಕಲ್ಲು ತೆರವಿಗೆ ಆದೇಶ

‘ಮರದ ಸುತ್ತ 1 ಮೀ. ಸುತ್ತಳತೆಯಲ್ಲಿ ಏನೂ ಹಾಕಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಬದಿ ನೆಡಲಾಗಿರುವ ಮರಗಳ ಸುತ್ತ ಕನಿಷ್ಠ ಒಂದು ಮೀಟರ್ ಸುತ್ತಳತೆಯಲ್ಲಿ ಹಾಕಲಾಗಿರುವ ಕಾಂಕ್ರೀಟ್, ಕಲ್ಲು ಮತ್ತು ಸಿಮೆಂಟ್ ಬ್ಲಾಕ್‌ಗಳನ್ನು ತೆರವುಗೊಳಿಸಲು ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಆದೇಶಿಸಿದ್ದಾರೆ.

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಆದೇಶದ ಅನ್ವಯ ಅವರು ಈ ಆದೇಶ ಹೊರಡಿಸಿದ್ದಾರೆ.

‘ಪ್ರಸ್ತುತ ರಸ್ತೆಗಳಲ್ಲಿರುವ ಮರಗಳ ಬುಡಗಳಿಗೆ ಕಾಂಕ್ರೀಟ್, ಡಾಂಬರು ಅಥವಾ ಇಂಟರ್‌ಲಾಕ್ ಪೇವರ್‌ಗಳಿಂದ ಮುಚ್ಚಲಾಗುತ್ತಿದೆ. ಇದರಿಂದ ಮರಗಳ ಆರೋಗ್ಯಕರ ಬೆಳವಣಿಗೆ, ಬದುಕುಳಿಯುವಿಕೆ ಮೇಲೆ ದುಷ್ಪರಿಣಾಮ ಬೀರಿದ್ದು, ಗಾಳಿಗೆ ತಡೆ, ನೀರಿನ ಒಳಹರಿವು ಬೇರುಗಳ ಪೋಷಣೆ ಮೇಲೆ ಪರಿಣಾಮ ಬೀರುತ್ತಿದೆ.

‘ರಸ್ತೆ ಬದಿಯ ಮರಗಳ ಸುತ್ತ ಜಾಗವಿಲ್ಲದೆ, ಬೇರು ಆಳಕ್ಕೆ ಇಳಿಯದೆ, ಮಳೆ, ಗಾಳಿಗೆ ಬಿದ್ದು ಪ್ರಾಣ ಹಾನಿ, ಆಸ್ತಿ ಹಾನಿಯಾವುದನ್ನು ತಪ್ಪಿಸಬೇಕು. ಜತೆಗೆ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) 2025ರ ಮೇ 21ರಂದು ನೀಡಿರುವ ನಿರ್ದೇಶನಗಳನ್ವಯ ಮರಗಳ ಸುತ್ತ ಕನಿಷ್ಠ ಒಂದು ಮೀಟರ್ ಜಾಗ ಬಿಡಬೇಕು. ಆದ್ದರಿಂದ ಎಲ್ಲ ರೀತಿಯ ನಿರ್ಮಾಣಗಳನ್ನು ತೆರವುಗೊಳಿಸಬೇಕು.

ಚರ್ಚ್ ಸ್ಟ್ರೀಟ್‌ನಲ್ಲಿ ಮರ ಬುಡದ ಸುತ್ತಲೂ ಕಾಂಕ್ರೀಟ್ ಹಾಕಲಾಗಿದೆ

‘ಪಾಲಿಕೆ ವ್ಯಾಪ್ತಿಯಲ್ಲಿ ಮರಗಳ ಬೇರಿನ ವ್ಯವಸ್ಥೆಗೆ ಹಾನಿಯಾಗದಂತೆ ತಡೆಯಲು, ಪಾದಚಾರಿ ಮಾರ್ಗಗಳು ಅಥವಾ ರಸ್ತೆಗಳನ್ನು ನಿರ್ಮಿಸುವಾಗ, ಬೇರುಗಳಿಗೆ ನೀರು ಹೋಗುವಂತೆ ಮಾಡಲು ಮರಗಳ ಬುಡದ ಸುತ್ತಲೂ ಸಾಧ್ಯವಾದಲ್ಲೆಲ್ಲಾ ಒಂದು ಮೀಟರ್ ಪ್ರದೇಶವನ್ನು ಬಿಡಬೇಕು. ಆ ಪ್ರದೇಶವನ್ನು ಮಣ್ಣಿನಿಂದ ಸಮತಟ್ಟು ಮಾಡಬೇಕು ಮತ್ತು ಸಾಧ್ಯವಾದಲ್ಲೆಲ್ಲಾ ಹುಲ್ಲನ್ನು ಬೆಳೆಸಬಹುದು. ರಸ್ತೆಗಳು ಅಥವಾ ಮಾರ್ಗಗಳ ಮಧ್ಯದ ಅಂಚಿನಲ್ಲಿ ಕಾಂಕ್ರೀಟ್ ಹಾಕುವುದನ್ನು ತಕ್ಷಣದಿಂದ ನಿಲ್ಲಿಸಬೇಕು’ ಎಂದು ಪ್ರೀತಿ ಗೆಹ್ಲೋಟ್ ಆದೇಶದಲ್ಲಿ ಸೂಚಿಸಿದ್ದಾರೆ.

ಮುಖ್ಯಾಂಶಗಳು

- ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಆದೇಶ
- ‘ರಸ್ತೆಗಳ ಮಧ್ಯದ ಅಂಚಿನಲ್ಲಿ ಕಾಂಕ್ರೀಟ್ ಹಾಕುವಂತಿಲ್ಲ’

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್

ಕಂಟೋನ್ಮೆಂಟ್: ಶೇ 72 ಸೌರವಿದ್ಯುತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಂಟೋನ್ಮೆಂಟ್ ನಿಲ್ದಾಣಕ್ಕೆ ಅವಶ್ಯ ಇರುವ ವಿದ್ಯುತ್‌ನಲ್ಲಿ ಶೇಕಡ 72ರಷ್ಟನ್ನು ಸೌರವಿದ್ಯುತ್ ಮೂಲಕ ಪಡೆಯಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ತಿಳಿಸಿದರು.

ಬೆಂಗಳೂರು ವಿಭಾಗದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಂಟೋನ್ಮೆಂಟ್ ನಿಲ್ದಾಣಕ್ಕೆ ತಿಂಗಳಿಗೆ 3.11 ಲಕ್ಷ ಯೂನಿಟ್ ವಿದ್ಯುತ್ ಬೇಕಾಗುತ್ತದೆ. ಇದರಲ್ಲಿ ಮಹಡಿ ಮೇಲೆ 1.852 ಕಿಲೊವಾಟ್ ಸಾಮರ್ಥ್ಯದ ಸೌರ ಫಲಕಗಳನ್ನು ಅಳವಡಿಸಲಾಗಿದ್ದು, ತಿಂಗಳಿಗೆ 2.25 ಲಕ್ಷ ಯೂನಿಟ್ ಉತ್ಪಾದಿಸಲಾಗುತ್ತಿದೆ ಎಂದು ಹೇಳಿದರು.

ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು ₹ 484 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ಯಶವಂತಪುರ ರೈಲು ನಿಲ್ದಾಣವನ್ನು ₹ 377.86 ಕೋಟಿ ವೆಚ್ಚದಲ್ಲಿ ಪುನರ್‌ನಿರ್ಮಿಸಲಾಗುತ್ತಿದೆ. ಅಲ್ಲಿ ಇವಿ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್ ಅಳವಡಿಸಲಾಗುತ್ತಿದ್ದು, ಐದು ಚಾರ್ಜಿಂಗ್ ಪಾಯಿಂಟ್‌ಗಳಿರಲಿವೆ. ಎರಡೂ ನಿಲ್ದಾಣಗಳ ಕಾಮಗಾರಿಗಳು ವೇಗವಾಗಿ ನಡೆಯುತ್ತಿದೆ. ಮಳೆನೀರಿನ ಚರಂಡಿ, ಅಗ್ನಿಶಾಮಕ ಸುರಕ್ಷತಾ ಮಾರ್ಗ ಸೇರಿದಂತೆ ಕಾಮಗಾರಿಗಳು ಶೇ 97ರಷ್ಟು ಪೂರ್ಣಗೊಂಡಿವೆ ಎಂದರು.

ಮೆಜೆಸ್ಟಿಕ್‌ನ ಕೆಎಸ್‌ಆರ್ ನಿಲ್ದಾಣದಲ್ಲಿ ಅಂದಾಜು ₹ 222 ಕೋಟಿ ವೆಚ್ಚದಲ್ಲಿ ಎರಡು ಹೆಚ್ಚುವರಿ ಪ್ಲಾಟ್‌ಫಾರ್ಮ್‌ಗಳನ್ನು ನಿರ್ಮಿಸಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ ಕಟ್ಟಡಗಳ ಪುನರ್‌ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು. ಹಂತಹಂತವಾಗಿ ಕೆಎಸ್‌ಆರ್ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲಾಗುವುದು ಎಂದರು.

ಯಶವಂತಪುರ–ಚನ್ನಸಂದ್ರ ದ್ವಿಪಥ ಯೋಜನೆಯು ₹ 683.57 ಕೋಟಿ ವೆಚ್ಚದಲ್ಲಿ, ಬೈಯ್ಯಪ್ಪನಹಳ್ಳಿ–ಹೊಸೂರು ದ್ವಿಪಥ ಯೋಜನೆಯು ₹ 1,148 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳ್ಳುತ್ತಿದೆ. ಎರಡೂ ಕಾಮಗಾರಿಗಳನ್ನು ಕೆ–ರೈಡ್ ಕೈಗೊಳ್ಳುತ್ತಿದೆ. ಮಾರಿಕುಪ್ಪಂ– ಕುಪ್ಪಂ 23.7 ಕಿ.ಮೀ. ಹೊಸಮಾರ್ಗವನ್ನು ಅಂದಾಜು ₹515 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಬೆಟ್ಟಹಲಸೂರು– ರಾಜಾನುಕುಂಟೆ ಬೈಪಾಸ್ ಮಾರ್ಗ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕರಾದ ಅಶುತೋಷ್ ಮಾಥುರ್, ಪರೀಕ್ಷಿತ್ ಮೋಹನ್ ಪುರಿಯಾ, ಮುಖ್ಯ ಎಂಜಿನಿಯರ್ (ನಿರ್ಮಾಣ) ಪ್ರೇಮ್ ನಾರಾಯಣ್, ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಆಗಸ್ಟ್‌ನಲ್ಲಿ ಡಿಪಿಆರ್ ಸಲ್ಲಿಕೆ

ನಗರದ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ವೃತ್ತ ರೈಲು ಸಂಪರ್ಕ ಜಾಲವನ್ನು (ಸರ್ಕ್ಯುಲರ್ ರೈಲ್ವೆ) 7 ಹಂತಗಳಲ್ಲಿ ನಿರ್ಮಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಲಾಗುತ್ತಿದ್ದು, ಆಗಸ್ಟ್‌ನಲ್ಲಿ ರೈಲ್ವೆ ಮಂಡಳಿಗೆ ಸಲ್ಲಿಸಲಾಗುವುದು ಎಂದು ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ನಿಡವಂದ–ವಡ್ಡರಹಳ್ಳಿ (42 ಕಿ.ಮೀ.), ವಡ್ಡರಹಳ್ಳಿ–ದೇವನಹಳ್ಳಿ (25 ಕಿ.ಮೀ.), ದೇವನಹಳ್ಳಿ–ಮಾಲೂರು (50 ಕಿ.ಮೀ.), ಮಾಲೂರು–ಹೀಲಲಿಗೆ (52 ಕಿ.ಮೀ.), ಹೆಜ್ಜಾಲ–ಸೋಲೂರು (43 ಕಿ.ಮೀ.), ಸೋಲೂರು–ನಿಡವಂದ (34 ಕಿ.ಮೀ.) ಹಂತಗಳಲ್ಲಿ ಕಾಮಗಾರಿ ನಡೆಯಲಿದೆ ಎಂದು ಹೇಳಿದರು.

ಮಂಜೂರಾದ ಯೋಜನೆಗಳು

- ಯಲಹಂಕ–ದೇವನಹಳ್ಳಿ 23.7 ಕಿ.ಮೀ. ದ್ವಿಪಥ
- ದೇವನಹಳ್ಳಿ–ಕೋಲಾರ–ಬಂಗಾರಪೇಟೆ 125 ಕಿ.ಮೀ. ದ್ವಿಪಥ
- ವೈಟ್‌ಫೀಲ್ಡ್–ಬಂಗಾರಪೇಟೆ 47 ಕಿ.ಮೀ. ಚತುಷ್ಪಥ
- ಬೈಯ್ಯಪ್ಪನಹಳ್ಳಿ–ಹೊಸೂರು 48.5 ಕಿ.ಮೀ. ಚತುಷ್ಪಥ
- ಬೆಂಗಳೂರು–ತುಮಕೂರು 70 ಕಿ.ಮೀ. ಚತುಷ್ಪಥ
- ಚಿಕ್ಕಬಾಣಾವರ–ಕುಣಿಗಲ್–ಹಾಸನ 166 ಕಿ.ಮೀ. ದ್ವಿಪಥ
- ಬೆಂಗಳೂರು–ಮೈಸೂರು 137 ಕಿ.ಮೀ. ಚತುಷ್ಪಥ
- ಬಂಗಾರಪೇಟೆ–ಜೋಲಾರಪೇಟೆ 72 ಕಿ.ಮೀ. ಚತುಷ್ಪಥ

ಆರಂಭಿಕ ಠೇವಣಿ ಶುಲ್ಕ ಶೇ 50 ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಬಡಾವಣೆಗಳ ನಿವೇಶನಗಳು, ವಸತಿ ಗೃಹ (ಫ್ಲ್ಯಾಟ್) ಮತ್ತು ವಿಲ್ಲಾಗಳ ಪ್ರಾರಂಭಿಕ ಠೇವಣಿ ಶುಲ್ಕವನ್ನು ಶೇಕಡ 50ರಷ್ಟು ಕಡಿಮೆ ಮಾಡಿದೆ.

ಸಾಮಾನ್ಯ ವರ್ಗದವರಿಗೆ ಶೇಕಡ 12.5 ಮತ್ತು ಪರಿಶಿಷ್ಟ ಜಾತಿ, ಪಂಗಡದವರಿಗೆ ಶೇಕಡ 5ರಷ್ಟು ಶುಲ್ಕ ನಿಗದಿಪಡಿಸಲಾಗಿದೆ.

ಈ ಹಿಂದೆ ಬಿಡಿಎನಲ್ಲಿ ಯಾವುದೇ ಫ್ಲ್ಯಾಟ್, ನಿವೇಶನ, ವಿಲ್ಲಾ ಖರೀದಿಸಬೇಕೆಂದರೆ ಪ್ರಾರಂಭಿಕ ಠೇವಣಿಯಾಗಿ ಆಸ್ತಿಯ ಒಟ್ಟಾರೆ ಮೌಲ್ಯದಲ್ಲಿ ಸಾಮಾನ್ಯ ವರ್ಗದವರಿಗೆ ಶೇ 25ರಷ್ಟು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 10ರಷ್ಟು ನಿಗದಿಪಡಿಸಲಾಗಿತ್ತು.

ಫ್ಲ್ಯಾಟ್, ಮನೆಗಳಿಗೆ ಹೆಚ್ಚು ಬೇಡಿಕೆ ಸೃಷ್ಟಿಯಾಗಿತ್ತು. ಹಾಗಾಗಿ ಮೇ 1 ರಿಂದ ಆರಂಭಿಕ ಮೊತ್ತವನ್ನು ಹೆಚ್ಚಿಸಲಾಗಿತ್ತು. ನಿತ್ಯ ಆನ್‌ಲೈನ್‌ನಲ್ಲಿ 5ರಿಂದ 6 ಫ್ಲ್ಯಾಟ್‌ಗಳು ಬುಕ್ ಆಗುತ್ತಿದ್ದು, ದರ ಹೆಚ್ಚಾದ ಬಳಿಕ ಆನ್‌ಲೈನ್‌ನಲ್ಲಿ ಬೇಡಿಕೆ ಕುಗ್ಗಿತ್ತು. ಶೇ 25ರಷ್ಟು ಮೊತ್ತ ಪಾವತಿಸುವುದು ದುಬಾರಿ ಎಂದು ಗ್ರಾಹಕರಿಂದ ಆಕ್ಷೇಪ ವ್ಯಕ್ತವಾಗಿತ್ತು. ಅಲ್ಲದೆ, ಶೇ 25ರಷ್ಟು ಹಣ ಪಾವತಿಸಿ, ನಂತರ ಬ್ಯಾಂಕ್‌ಗಳಿಂದ ಸಾಲ ಪಡೆಯುವುದು ಕಷ್ಟಕರವಾಗಿತ್ತು ಎಂಬುದು ಗ್ರಾಹಕರ ಆರೋಪ.

‘ಫ್ಲ್ಯಾಟ್ ಮತ್ತು ಮನೆಗಳಿಗೆ ಹೆಚ್ಚು ಬೇಡಿಕೆ ಬಂದಿದ್ದರಿಂದ ಮೇ 1ರಿಂದ ಆರಂಭಿಕ ಠೇವಣಿ ಶುಲ್ಕವನ್ನು ಹೆಚ್ಚಿಸಲಾಗಿತ್ತು. ಇದರಿಂದ ಗ್ರಾಹಕರಿಗೆ ಹೆಚ್ಚು ಹೊರೆಯಾಗುತ್ತಿತ್ತು ಮತ್ತು ತಾಂತ್ರಿಕ ಸಮಸ್ಯೆಯೂ ಆಗಿತ್ತು. ಗ್ರಾಹಕರ ಒತ್ತಾಯದ ಮೇರೆಗೆ ಏರಿಕೆ ಮಾಡಿದ್ದ ದರವನ್ನು ಇಳಿಸಿ, ಹಳೆಯ ದರವನ್ನೇ ಮುಂದುವರಿಸಲಾಗಿದೆ’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯ ಎ.ಲೋಕೇಶ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಜೂನ್ 21ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಕಣಿಮಿಣಿಕೆ ವಸತಿ ಸಮುಚ್ಚಯದಲ್ಲಿ ಫ್ಲ್ಯಾಟ್ ಮೇಳ ಆಯೋಜಿಸಲಾಗಿದೆ. ಕಣಿಮಿಣಿಕೆ, ಕೊಮ್ಮಘಟ್ಟ, ಆಲೂರು, ಗುಂಜೂರು ಫ್ಲ್ಯಾಟ್‌ಗಳು ಹಾಗೂ ಹುಣ್ಣಿಗೆರೆಯ ವಿಲ್ಲಾ ಖರೀದಿಸಬಹುದು. ರಾಷ್ಟ್ರೀಯ ಬ್ಯಾಂಕ್‌ಗಳ ಪ್ರತಿನಿಧಿಗಳು ಮೇಳದಲ್ಲಿ ಭಾಗವಹಿಸಲಿದ್ದು, ಗ್ರಾಹಕರಿಗೆ ಮನೆ ಖರೀದಿಗೆ ಸಾಲದ ನೆರವು ನೀಡಲಿವೆ’ ಎಂದು ಹೇಳಿದರು.

ಯೋಜನೆ	ಅಳತೆ	ದರ (ಲಕ್ಷಗಳಲ್ಲಿ)	ಒಟ್ಟು ಫ್ಲ್ಯಾಟ್	ಹಂಚಿಕೆಯಾದ ಫ್ಲ್ಯಾಟ್	ಉಳಿಕೆ ಫ್ಲ್ಯಾಟ್
ಕಣಿಮಿಣಿಕೆ ಫೇಸ್2	2 ಬಿಎಚ್‌ಕೆ	25	672	406	266
ಕಣಿಮಿಣಿಕೆ ಫೇಸ್3	2 ಬಿಎಚ್‌ಕೆ	30	288	255	33
ಕಣಿಮಿಣಿಕೆ ಫೇಸ್5	3 ಬಿಎಚ್‌ಕೆ	65.20	432	39	393
ಕೋನದಾಸಪುರ ಫೇಸ್ 2	2 ಬಿಎಚ್‌ಕೆ	52-54.72	672	670	2
ಆಲೂರು ಫೇಸ್2	1 ಬಿಎಚ್‌ಕೆ	13.20	1504	865	639
ವಳಗೇರಹಳ್ಳಿ ಫೇಸ್1	1 ಬಿಚ್‌ಕೆ	13.20	640	620	20
ವಳಗೇರಹಳ್ಳಿ ಫೇಸ್2	1 ಬಿಎಚ್‌ಕೆ	13.20	608	601	7
ಗುಂಜೂರು	1 ಬಿಎಚ್‌ಕೆ	13.20	364	232	132
ತಿಪ್ಪಸಂದ್ರ	1 ಬಿಎಚ್‌ಕೆ	14.50	312	249	63
ಹುಣ್ಣಿಗೆರೆ	1 ಬಿಎಚ್‌ಕೆ	14	320	6	314
ಹುಣ್ಣಿಗೆರೆ	3 ಬಿಎಚ್‌ಕೆ	90-1.15 (ಕೋಟಿ)	152	26	126
ಹುಣ್ಣಿಗೆರೆ	4 ಬಿಎಚ್‌ಕೆ	1.26 (ಕೋಟಿ)	170	31	139
ಕೊಮ್ಮಘಟ್ಟ ಎನ್‌ಪಿಕೆಎಲ್ ಪಿಎಚ್1	3 ಬಿಎಚ್‌ಕೆ	65.70	420	18	402
ಕೊಮ್ಮಘಟ್ಟ ಎನ್‌ಪಿಕೆಎಲ್ ಪಿಎಚ್2	2 ಬಿಎಚ್‌ಕೆ	54.30	288	22	266
ಕೊಮ್ಮಘಟ್ಟ ಎನ್‌ಪಿಕೆಎಲ್ ಪಿಎಚ್3:	2 ಬಿಎಚ್‌ಕೆ	49.15	336	335 (ಹಂಚಿಕೆ ಇನ್ನೂ ಆಗಿಲ್ಲ)	
ಒಟ್ಟು	0	0	12421	9283	3138

ನಗರದಲ್ಲೇ ದೂರದ ಊರಿಗೆ ಇದೇ ಮೊದಲ ಬಾರಿಗೆ ಸಂಚರಿಸಲಿದೆ ವೇಗದೂತ

ಬಿಎಂಟಿಸಿ: ಇನ್ನು ಸೀಮಿತ ನಿಲುಗಡೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿ ಬಸ್‌ಗಳು ಇಲ್ಲಿವರೆಗೆ ಎಲ್ಲ ತಂಗುದಾಣಗಳಲ್ಲಿ ನಿಲುಗಡೆಗಳನ್ನು ಹೊಂದಿದ್ದವು. ದೂರ ಪ್ರಯಾಣದ ಬಸ್‌ಗಳು ಇನ್ನು ಮುಂದೆ ಸೀಮಿತ ನಿಲುಗಡೆ ವ್ಯವಸ್ಥೆಯಲ್ಲಿ ಸಂಚರಿಸಲಿವೆ.

ಕೆಎಸ್‌ಆರ್‌ಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಯಲ್ಲಿ ಮಾತ್ರ ಈ ರೀತಿಯ ಸೀಮಿತ ನಿಲುಗಡೆ ಹೊಂದಿರುವ ವೇಗದೂತ ಬಸ್‌ಗಳಿದ್ದವು. ಬೆಂಗಳೂರು ನಗರದ ಪ್ರಮುಖ ಸಾರಿಗೆಯಾಗಿರುವ ಬಿಎಂಟಿಸಿಯಲ್ಲಿ ಇದೇ ಮೊದಲ ಬಾರಿಗೆ ಈ ವ್ಯವಸ್ಥೆ ಜಾರಿಗೆ ಬರುತ್ತಿದೆ.

ಸಾಮಾನ್ಯ ಬಸ್‌ಗಳಲ್ಲಿ ಸಂಚರಿಸಲು ಪ್ರಯಾಣಿಕರಿಗೆ ರಿಯಾಯಿತಿ ದರದಲ್ಲಿ ₹ 1,500ಕ್ಕೆ ತಿಂಗಳ ಪಾಸ್ ನೀಡಲಾಗುತ್ತಿದೆ. ಈ ಪಾಸ್ ಹೊಂದಿರುವವರು ಪ್ರತಿ ಟ್ರಿಪ್‌ಗೆ ₹ 30 ಹಾಗೂ ಅನ್ವಯವಾಗುವ ಟೋಲ್ ದರಗಳನ್ನು ಪಾವತಿಸಿ ವಜ್ರ ಹಾಗೂ ವೇಗದೂತ ವಜ್ರ ಬಸ್‌ಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಶುಕ್ರವಾರ ಐದು ಮಾರ್ಗಗಳಲ್ಲಿ ಸೀಮಿತ ನಿಲುಗಡೆಯ ವೇಗದೂತ ಬಸ್‌ಗಳ ಸಂಚಾರ ಆರಂಭಗೊಳ್ಳಲಿದೆ. ಕ್ರಮೇಣ ಹೆಚ್ಚು ಮಾರ್ಗಗಳಿಗೆ ವಿಸ್ತರಿಸಲಾಗುವುದು. ವೇಗದೂತ ಬಸ್‌ಗಳು ಸಂಚರಿಸುವ ಮಾರ್ಗಗಳಲ್ಲಿ ಎಲ್ಲ ಕಡೆ ನಿಲುಗಡೆ ಇರುವ ಸಾಮಾನ್ಯ ಬಸ್‌ಗಳು ಎಂದಿನಂತೆ ಇರಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಮುಖ ಕಾರಿಡಾರ್‌ಗಳಲ್ಲಿ ದೂರ ಪ್ರಯಾಣ ಮಾಡುವವರಿಗೆ ಸೀಮಿತ ನಿಲುಗಡೆಯ ವೇಗದೂತ ಬಸ್‌ಗಳು ಅನುಕೂಲವಾಗಲಿವೆ. ಆರಂಭದಿಂದ ಕೊನೇ ತುದಿಯವರೆಗೆ ಸಂಚರಿಸುವ ಈ ಬಸ್‌ಗಳು ಬೆರಳೆಣಿಕೆಯ ನಿಲುಗಡೆಗಳನ್ನಷ್ಟೇ ಹೊಂದಿರುತ್ತವೆ. ಪ್ರಯಾಣದ ಸಮಯ ಕಡಿಮೆಯಾಗುವುದರಿಂದ ಉದ್ಯೋಗಿಗಳಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಘಾಟಿ–ಈಶ ಫೌಂಡೇಶನ್ ಪ್ಯಾಕೇಜ್: ಇದೇ ಸಂದರ್ಭದಲ್ಲಿ ಘಾಟಿ– ಈಶ ಫೌಂಡೇಶನ್ ಪ್ಯಾಕೇಜ್ ಕೂಡ ಆರಂಭಗೊಳ್ಳಲಿದೆ.

ಈಗಾಗಲೇ ಬಿಎಂಟಿಸಿ ನಡೆಸುತ್ತಿರುವ ಈಶ ಫೌಂಡೇಶನ್ ಪ್ಯಾಕೇಜ್, ಬೆಂಗಳೂರು ದಿವ್ಯ ದರ್ಶನಗಳು ಯಶಸ್ವಿಯಾಗಿರುವುದರಿಂದ ಹೊಸ ಪ್ಯಾಕೇಜ್ ಆರಂಭಿಸಲಾಗುತ್ತಿದೆ. ನೆಲದಾಂಜನೇಯ ಸ್ವಾಮಿ ದೇವಸ್ಥಾನ, ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಮುದ್ದೇನಹಳ್ಳಿ ಜ್ಞಾನತೀರ್ಥ ಲಿಂಗ, ಸ್ಕಂದಗಿರಿ ದಕ್ಷಿಣ ಕಾಶಿ ಪಂಚನಂದಿ ಕ್ಷೇತ್ರ ಪಾಪಾಗ್ನಿ ಮಠ, ಕಲ್ಯಾಣಿ, ಈಶ ಫೌಂಡೇಶನ್‌ಗೆ ಭೇಟಿ ನೀಡುವ ಪ್ಯಾಕೇಜ್ ಇದಾಗಿದೆ.

ಶನಿವಾರ, ಭಾನುವಾರ ಮತ್ತು ಸಾರ್ವತ್ರಿಕ ರಜಾ ದಿನಗಳಲ್ಲಿ ಈ ಪ್ಯಾಕೇಜ್ ಪ್ರವಾಸ ಇರಲಿದೆ. ಬೆಳಿಗ್ಗೆ 9ಕ್ಕೆ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರವಾಸ ಆರಂಭವಾಗಿ ರಾತ್ರಿ 7ಕ್ಕೆ ಮತ್ತೆ ಕೆಂಪೇಗೌಡ ಬಸ್ ನಿಲ್ದಾಣ ತಲುಪಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸೀಮಿತ ನಿಲುಗಡೆ ಬಸ್ ಅಗತ್ಯ

ಚಂದಾಪುರದಿಂದ ವೈಟ್‌ಫೀಲ್ಡ್‌ಗೆ ಬಿಎಂಟಿಸಿ ಬಸ್ ತೆರಳಲು ಕನಿಷ್ಠ 2 ತಾಸು ಬೇಕಾಗುತ್ತದೆ. ಇದೇ ರೀತಿ ಹೆಚ್ಚು ದೂರ ಕ್ರಮಿಸಬೇಕಾದ ಹಲವು ಪ್ರದೇಶಗಳಿವೆ. ಹತ್ತು ಕಡೆ ನಿಲ್ಲಿಸುವ ಬದಲು ಎರಡು ಕಡೆ ನಿಲುಗಡೆಯಂತೆ ಸೀಮಿತಗೊಳಿಸುತ್ತಾ ಹೋದರೆ ಕನಿಷ್ಠ ಅರ್ಧ ಗಂಟೆ ಬೇಗ ತಲುಪಲು ಸಾಧ್ಯ. ಪ್ರಸ್ತುತ ಪರಿಸ್ಥಿತಿಯಲ್ಲಿ ನಗರ ಸಾರಿಗೆಯಲ್ಲಿಯೂ ಸೀಮಿತ ನಿಲುಗಡೆಯ ಬಸ್‌ಗಳು ಅಗತ್ಯವಾಗಿರುವುದರಿಂದ ಅವುಗಳನ್ನು ಪರಿಚಯಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅಂಕಿ ಅಂಶಗಳು

5 ವೇಗದೂತ ಬಿಎಂಟಿಸಿ ಬಸ್ ಸಂಚರಿಸುವ ಮಾರ್ಗಗಳು

48 ವೇಗದೂತ ಬಸ್‌ಗಳು

348 ಪ್ರತಿದಿನ ನಡೆಸಲಿರುವ ಟ್ರಿಪ್‌ಗಳು

ಜ್ಞಾನಭಾರತಿ ಆವರಣದಲ್ಲಿ ‘ಅಂಬೇಡ್ಕರ್ ಥೀಂ ಪಾರ್ಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ‘ಅಂಬೇಡ್ಕರ್ ಥೀಂ ಪಾರ್ಕ್’ ನಿರ್ಮಿಸುವ ಸಂಬಂಧ ಸಮಾಜ ಕಲ್ಯಾಣ ಇಲಾಖೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಿದೆ.

ಮುಖ್ಯಮಂತ್ರಿಯ ನೇತೃತ್ವದಲ್ಲಿ ಗುರುವಾರ ನಡೆದ ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ಈ ಪ್ರಸ್ತಾವದ ಬಗ್ಗೆ ಚರ್ಚಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಮಹಾದ್ವಾರ (ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿರುವ ಪ್ರವೇಶದ್ವಾರ) ಮತ್ತು ಜ್ಞಾನಭಾರತಿ ಆವರಣದ ಎನ್‌ಎಸ್‌ಎಸ್ ಭವನದ ನಡುವೆ ಥೀಂ ಪಾರ್ಕ್ ನಿರ್ಮಿಸಲು 25 ಎಕರೆ ಜಾಗವನ್ನು ಗುರುತಿಸಲಾಗಿದೆ.

ಈ ಜಾಗವು ವಿಶ್ವವಿದ್ಯಾಲಯದ ಆವರಣದಲ್ಲಿ ಇರುವುದರಿಂದ ಉನ್ನತ ಶಿಕ್ಷಣ ಇಲಾಖೆಯ ಸುಪರ್ದಿಗೆ ಬರುತ್ತದೆ. ಹೀಗಾಗಿ ಉನ್ನತ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿ, 25 ಎಕರೆ ಜಾಗವನ್ನು ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳಬೇಕು. ಅಂಬೇಡ್ಕರ್ ಥೀಂ ಪಾರ್ಕ್ ಸ್ಥಾಪನೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲೇ ₹200 ಕೋಟಿ ಮೀಸಲಿಡಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯು ಕೋರಿದೆ.

ಏನೇನಿರಲಿದೆ...

- ಅಂಬೇಡ್ಕರ್ ಅವರ 200 ಅಡಿ ಎತ್ತರದ ಪ್ರತಿಮೆ
- ಅಂಬೇಡ್ಕರ್ ಅವರ ಬದುಕು, ಬರಹ, ಸಾಧನೆ ಹಾಗೂ ಭಾರತ ಸಂವಿಧಾನ ರಚನೆಯ ಇತಿಹಾಸದ ವಸ್ತು ಸಂಗ್ರಹಾಲಯ
- ಅಂಬೇಡ್ಕರ್ ಸ್ಮಾರಕ ಬೃಹತ್ ಗ್ರಂಥಾಲಯ
- ಬೌದ್ಧ ಸ್ತೂಪ ಮತ್ತು ವಿವಿಧ ಶಿಲ್ಪ ಕಲಾಕೃತಿಗಳು
- ಸಮ್ಮೇಳನ ಸಭಾಂಗಣ, ಕಿರು ಚಿತ್ರಮಂದಿರ
- ಉದ್ಯಾನವನ, ಸಂಗೀತ ಕಾರಂಜಿ

ಡಿ.ಕೆ.ಸುರೇಶ್ ಬಮೂಲ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷರಾಗಿ ಮಾಜಿ ಸಂಸದ ಡಿ.ಕೆ. ಸುರೇಶ್ ಹಾಗೂ ಉಪಾಧ್ಯಕ್ಷರಾಗಿ ಕುದೂರು ರಾಜಣ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಮೂಲ್ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಡಿ ಕೆ ಸುರೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಾಗಡಿ ತಾಲ್ಲೂಕಿನ ಕುದೂರು ರಾಜಣ್ಣ ಅವರು ಗುರುವಾರ ನಾಮಪತ್ರ ಸಲ್ಲಿಸಿದ್ದರು. ಈ ಎರಡು ಸ್ಥಾನಗಳಿಗೆ ಬೇರೆ ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಇಬ್ಬರೂ ಅವಿರೋಧವಾಗಿ ಆಯ್ಕೆಯಾದಂತಾಗಿದೆ. ಅಧಿಕೃತವಾಗಿ ಘೋಷಣೆಯೊಂದೇ ಬಾಕಿ ಇದೆ.

ಚುನಾವಣಾ ಪ್ರಕ್ರಿಯೆ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸುರೇಶ್, ‘ಬಮೂಲ್‌ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿ, ಮಾಗಡಿ ತಾಲೂಕಿನ ಕುದೂರು ರಾಜಣ್ಣ ಅವರನ್ನು ಉಪಾಧ್ಯಕ್ಷರನ್ನಾಗಿ ಎಲ್ಲ ನಿರ್ದೇಶಕರು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ’ ಎಂದು ತಿಳಿಸಿದರು.

ಡಿ.ಕೆ. ಸುರೇಶ್

ಪರಿಸರ ಸ್ನೇಹಿ ಹಾಲಿನ ಪ್ಯಾಕೆಟ್ : ‘ಕನಕಪುರ ಹಾಲಿನ ಒಕ್ಕೂಟದಲ್ಲಿ ಪರಿಚಯಿಸಿದ ಪರಿಸರಸ್ನೇಹಿ ಹಾಲಿನ ಪ್ಯಾಕೆಟ್ ಅನ್ನು ರಾಜ್ಯದಾದ್ಯಂತ ಪರಿಚಯಿಸುವ ಚಿಂತನೆ ಇದೆ. ಪ್ರಾಯೋಗಿಕವಾಗಿ ಒಂದು ಪಂಚಾಯಿತಿ ಮಟ್ಟದಲ್ಲಿ ಇದನ್ನು ವಿತರಿಸಿದ್ದೇವೆ. ಆಡಳಿತ ಮಂಡಳಿಯ ಸದಸ್ಯರೊಂದಿಗೆ ಇದರ ಸಾಧಕ ಬಾಧಕಗಳನ್ನು ವಿಸ್ತೃತವಾಗಿ ಚರ್ಚಿಸಿ ನಿರ್ಧರಿಸಲಾಗುವುದು’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಮಂಚನಬೆಲೆ ಡ್ಯಾಂನಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಮಾಗಡಿ: ಸ್ನೇಹಿತರೊಂದಿಗೆ ಮಂಜನಬೆಲೆ ಡ್ಯಾಂಗೆ ಹೋಗಿದ್ದ ಡಿಪ್ಲೊಮಾ ವಿದ್ಯಾರ್ಥಿ ಡ್ಯಾಂನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಬುಧವಾರ ನಡೆದಿದೆ.

ಮೃತರು ಬೆಂಗಳೂರಿನ ಸಿ.ವಿ.ರಾಮನ್ ನಗರದ ಮುರುಗೇಶ ಪಾಳ್ಯದ ನಿವಾಸಿ ವಿಕಾಸ್ (19) ಎಂದು ಗುರುತಿಸಲಾಗಿದೆ.

ಬುಧವಾರ ಮಧ್ಯಾಹ್ನ ವಿಕಾಸ್, ತನ್ನ ಸ್ನೇಹಿತರಾದ ಸೃಜನ್ ಮತ್ತು ಲೋಕೇಶ್ ಗೌಡ ಅವರೊಂದಿಗೆ ಮಂಚನಬೆಲೆ ಡ್ಯಾಂಗೆ ಹೋಗಿದ್ದು, ನಂತರ ನೀರಿಗಿಳಿದು ಈಜಾಡುವಾಗ ಕೆಲವೇ ನಿಮಿಷಗಳಲ್ಲಿ ವಿಕಾಸ್ ಮುಳುಗಲು ಆರಂಭಿಸಿದ್ದಾನೆ. ಕೂಡಲೇ ಸ್ನೇಹಿತರು ರಕ್ಷಣೆಗೆ ಮುಂದಾಗಿ ವಿಫಲರಾಗಿದ್ದು, ನಂತರ ಪೊಲೀಸರು ಹಾಗೂ ಅಗ್ನಿಶಾಮಕ ದಳ ಮತ್ತು ತುರ್ತು ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ತಡ ರಾತ್ರಿವರೆಗೂ ಹುಡುಕಾಟ ನಡೆಸಿದ್ದು, ನಂತರ ವಿಕಾಸ್ ಮೃತದೇಹ ಪತ್ತೆಯಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಸಾಗಿಸಲಾಗಿದೆ. ತಾವರೆಕೆರೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ವೇಶ್ಯಾವಾಟಿಕೆ: ಹೊರ ರಾಜ್ಯದ ಇಬ್ಬರು ಸೆರೆ

ಬೆಂಗಳೂರು: ಕೆ.ಆರ್.ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಹೊರ ರಾಜ್ಯದ ಇಬ್ಬರು ಆರೋಪಿಗಳನ್ನು ಸಿಸಿಬಿಯ ಮಹಿಳಾ ರಕ್ಷಣಾ ದಳದ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ದೇಬ್‌ಕುಮಾರ್ ದಾಸ್ ಹಾಗೂ ಅಸ್ಸಾಂನ ಅಜೀತ್‌ಕುಮಾರ್ ಝಾ ಬಂಧಿತರು.

ಕೆ.ಆರ್.ಪುರದ ಬಸವನಪುರ ಚೆಲ್ಲಪತಿರಾಜು ಲೇಔಟ್‌ನ ಬಾಡಿಗೆ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರು. ಉದ್ಯೋಗ ಆಮಿಷವೊಡ್ಡಿ ಹೊರ ರಾಜ್ಯದ ಯುವತಿಯರನ್ನು ಬೆಂಗಳೂರಿಗೆ ಕರೆತಂದು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು.

ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ, ಮನೆಯಲ್ಲಿದ್ದ ಇಬ್ಬರು ಯುವತಿಯರನ್ನು ರಕ್ಷಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ.

28–29ಕ್ಕೆ ಉದ್ಯೋಗ ಮೇಳ

ಬೆಂಗಳೂರು: ರೋಟರಾಕ್ಟ್‌ನ ಡಿಸ್ಟ್ರಿಕ್ಟ್ 3192 ಘಟಕವು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಇದೇ 28 ಮತ್ತು 29ರಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಉದ್ಯೋಗ ಮೇಳ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಪ್ರತಿನಿಧಿ ನವೀನ್ ಸೆನ್ನಾ, 'ಈ ಮೇಳಕ್ಕೆ ಉಚಿತ ಪ್ರವೇಶ ಇರಲಿದೆ. 50ಕ್ಕೂ ಅಧಿಕ ವಿದ್ಯಾಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳು ಹಾಗೂ 100ಕ್ಕೂ ಅಧಿಕ ಕಂಪನಿಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ' ಎಂದು ಮಾಹಿತಿ ನೀಡಿದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಪರಿಕರಗಳು ಮೇಳದಲ್ಲಿ ಇರಲಿದ್ದು, ಅಣಕು ಸಂದರ್ಶನ ನಡೆಯಲಿದೆ. ತಜ್ಞರ ಸಮಿತಿಗಳಿಂದ ವೈಯಕ್ತಿಕ ಸಮಾಲೋಚನೆ ಮತ್ತು ವೃತ್ತಿ ಕಾರ್ಯಾಗಾರಗಳನ್ನು ಈ ಮೇಳ ಒಳಗೊಂಡಿರುತ್ತದೆ' ಎಂದು ಹೇಳಿದರು.

ನಿಧನ ವಾರ್ತೆ

ಎಂ.ವಿ.ಮೂರ್ತಿ

ಬೆಂಗಳೂರು: ನಗರದ ಎಚ್‌ಎಸ್‌ಆರ್ ಲೇಔಟ್‌ನ ನಿವಾಸಿ, ನಿವೃತ್ತ ಐಜಿಪಿ ಎಂ.ವಿ.ಮೂರ್ತಿ (76) ಅವರು ಅನಾರೋಗ್ಯದಿಂದಾಗಿ ಗುರುವಾರ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.



ಎಚ್‌ಎಸ್‌ಆರ್ ಲೇಔಟ್‌ನಲ್ಲಿನ ಅವರ ನಿವಾಸದಲ್ಲಿ ಶುಕ್ರವಾರ ಮಧ್ಯಾಹ್ನ 12ರವರೆಗೂ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಸ್ವಂತ ಊರು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಮಧ್ಯಾಹ್ನ 3 ಗಂಟೆಗೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ನಾಮದೇವ ದಿವಟೆ

ಬೆಂಗಳೂರು: ನಗರದ ವಿದ್ಯಾರಣ್ಯಪುರ ನಿವಾಸಿ, ಸಂಯುಕ್ತ ಸ್ವಕುಳಸಾಳಿ ಸಂಘದ ಉಪಾಧ್ಯಕ್ಷ ಇಳಕಲ್‌ನ ನಾಮದೇವ ದಿವಟೆ (80) ಅವರು ಬುಧವಾರ ತಡ ರಾತ್ರಿ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ. ನಗರದ ಲಕ್ಷ್ಮೀಪುರ ಚಿತಾಗಾರದಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಚಾರ ನಿಯಮ: ₹52 ಕೋಟಿ ದಂಡ

ನಗರದಲ್ಲಿ ಐದು ತಿಂಗಳಲ್ಲಿ 23.68 ಲಕ್ಷ ಪ್ರಕರಣ ದಾಖಲು
ಜನರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ

• ಖಲೀಲ ಅಹ್ಮದ ಶೇಖ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರೂ ಇದಕ್ಕೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಐದು ತಿಂಗಳಲ್ಲಿ 23.68 ಲಕ್ಷ ಪ್ರಕರಣಗಳು ದಾಖಲಾಗಿದ್ದು, ಒಟ್ಟು ₹52.62 ಕೋಟಿ ದಂಡ ವಿಧಿಸಲಾಗಿದೆ.

'ಸಿಲಿಕಾನ್ ಸಿಟಿ'ಯಲ್ಲಿ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದರ ಜೊತೆಗೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹಾಗೂ ದಂಡ ವಿಧಿಸುವ ಪ್ರಮಾಣದಲ್ಲೂ ಏರಿಕೆ ಕಂಡು ಬಂದಿದೆ. ನಗರದಲ್ಲಿ ಸಂಚಾರ ನಿರ್ವಹಣೆಯ ಹೊಣೆ ಹೊತ್ತಿರುವ ಸಂಚಾರ ವಿಭಾಗದ ಪೊಲೀಸರು, ಪರಿಸ್ಥಿತಿಯನ್ನು ನಿಭಾಯಿಸಲು ನಿತ್ಯವೂ ಹೆಣಗಾಡುತ್ತಿದ್ದಾರೆ.

2024ರ ಜನವರಿಯಿಂದ ಮೇ ವರೆಗೆ ಒಟ್ಟು 39.10 ಲಕ್ಷ ಪ್ರಕರಣಗಳು ದಾಖಲಾಗಿದ್ದವು. 2025ರ ಜನವರಿಯಿಂದ ಮೇವರೆಗೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಆದರೆ, ಈ ಅವಧಿಯಲ್ಲಿ ದಂಡದ ರೂಪದಲ್ಲಿ ಸಂಗ್ರಹಿಸಿದ ಮೊತ್ತ ಹೆಚ್ಚಾಗಿದೆ. ದಂಡದ ಪ್ರಮಾಣ ಹೆಚ್ಚಾಗಿರುವುದು ಇದಕ್ಕೆ ಕಾರಣ.

'ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದಿರುವುದು, ಸಿಗ್ನಲ್ ಜಂಪ್, ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ, ನಿರ್ಲಕ್ಷ್ಯದ ಚಾಲನೆ, ಅಡ್ಡಾದಿಡ್ಡಿ ಚಾಲನೆ, ಸಾರ್ವಜನಿಕ ಸೇವೆ ಒದಗಿಸುವ ವಾಹನ ಚಾಲಕರು ಸಮವಸ್ತ್ರ ಧರಿಸದಿರುವುದು, ವಿಮೆ ಮಾಡಿಸದಿರುವುದು, ವಾಹನಗಳ ನೋಂದಣಿ ಪತ್ರ ಹೊಂದಿಲ್ಲದಿರುವುದು, ಚಾಲನಾ ಪರವಾನಗಿ ಇಲ್ಲದಿರುವುದು, ಪಾದಚಾರಿ ಮಾರ್ಗದಲ್ಲಿ ವಾಹನಗಳ ನಿಲುಗಡೆ ಮಾಡುವುದು ಸೇರಿದಂತೆ ಮೋಟಾರು ವಾಹನಗಳ ಕಾಯ್ದೆ ವ್ಯಾಪ್ತಿಗೆ ಬರುವ ಉಲ್ಲಂಘನೆ ಪ್ರಕರಣಗಳು ಅಧಿಕವಾಗಿವೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಸಂಚಾರ ನಿಯಮ ಉಲ್ಲಂಘನೆ ಮಾಡುವುದರಿಂದ ನಗರದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಶಾಲೆ, ಕಾಲೇಜು, ಕಚೇರಿ, ಬಡಾವಣೆಗಳಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದರು.

'ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ ನಗರದ ಹಲವು ಕಡೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇವು ಕ್ಲಿಕ್ಕಿಸುವ ಫೋಟೊ ಆಧರಿಸಿ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ಹಲವರ ಮೊಬೈಲ್‌ಗೆ ಸಂದೇಶ ಕಳುಹಿಸಿ, ದಂಡ ಪಾವತಿಸುವಂತೆ ಸೂಚನೆ ನೀಡಲಾಗುತ್ತಿದೆ. ಸಂಚಾರ ನಿಯಮ ಉಲ್ಲಂಘಿಸಿದರೂ ದಂಡ ಪಾವತಿಸದಿರುವವರನ್ನು ಪತ್ತೆ ಹಚ್ಚಿ, ಅವರ ಮನೆಗೆ ಹೋಗಿ ದಂಡ ವಸೂಲಿ ಮಾಡಲಾಗುತ್ತಿದೆ' ಎಂದು ವಿವರಿಸಿದರು.

ಐದು ವರ್ಷದ ಪ್ರಕರಣಗಳ ವಿವರ

ವರ್ಷ	ಒಟ್ಟು ಪ್ರಕರಣ (ಲಕ್ಷಗಳಲ್ಲಿ)	ದಂಡ (ಕೋಟಿಗಳಲ್ಲಿ)
2021	93.58	₹140.32
2022	104.66	₹179.76
2023	90.00	₹185.14
2024	80.90	₹84,91
2025 (ಮೇ 31ರವರೆಗೆ)	23.68	₹52.62

ಅಂಕಿ ಅಂಶಗಳು

2.87 ಲಕ್ಷ ಮೋಟಾರು ವಾಹನಗಳ ಕಾಯ್ದೆಯಡಿ ದಾಖಲಾದ ಪ್ರಕರಣ

20.81 ಲಕ್ಷ ಕ್ಯಾಮೆರಾ ಸಹಾಯದಿಂದ ದಾಖಲಾದ ಪ್ರಕರಣಗಳು

₹41.03 ಕೋಟಿ ಮೋಟಾರು ವಾಹನಗಳ ಕಾಯ್ದೆಯಡಿ ವಿಧಿಸಿದ ದಂಡ

₹11.57 ಕೋಟಿ ಕ್ಯಾಮೆರಾ ಸಹಾಯದಿಂದ ದಾಖಲಾದ ಪ್ರಕರಣಗಳಿಗೆ ವಿಧಿಸಿದ ದಂಡ

ಸಂಗ್ರಹ ಚಿತ್ರ

ಹೆಬ್ಬಾಳ ಮೇಲ್ಸೇತುವೆ ರಾತ್ರಿ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೆಬ್ಬಾಳ ಮೇಲ್ಸೇತುವೆ ಮೇಲೆ ಶುಕ್ರವಾರ ಮತ್ತು ಶನಿವಾರ ರಾತ್ರಿ ಸಂಚಾರ ಬಂದ್ ಮಾಡಲಿದ್ದು, ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

ಬಿಬಿಎಂಪಿ ವತಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲಾಗಿದೆ. ಹಾಗಾಗಿ ಜೂನ್ 20 ಮತ್ತು 21 ರಂದು ರಾತ್ರಿ 11.30ರಿಂದ ಬೆಳಿಗ್ಗೆ 5ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಯಲಹಂಕ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬರುವ ಪ್ರಯಾಣಿಕರು ಮೇಲ್ಸೇತುವೆಯ ಕೆಳಗಿನ ಸರ್ವಿಸ್ ರಸ್ತೆಯನ್ನು ಬಳಸಬಹುದು.

ಹೆಬ್ಬಾಳ ಮೇಲ್ಸೇತುವೆ

ಹೆಬ್ಬಾಳ ಸರ್ಕಲ್‌ನಲ್ಲಿ ಬಲ ತಿರುವು ಪಡೆದು ತುಮಕೂರು ಕಡೆ ಹೊರ ವರ್ತುಲ ರಸ್ತೆ ಮೂಲಕ ಸಾಗಿ ಕುವೆಂಪು ಸರ್ಕಲ್‌ನಲ್ಲಿ ಎಡ ತಿರುವು ಪಡೆದುಕೊಳ್ಳಬೇಕು. ನ್ಯೂ ಬಿಇಎಲ್ ರಸ್ತೆ ಮೂಲಕ ಸಾಗಿ ಸದಾಶಿವನಗರ ಪೊಲೀಸ್ ಠಾಣೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮೇಖ್ರಿ ಸರ್ಕಲ್ ತಲುಪಿ ನಗರ ತಲುಪಬಹುದು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಚಾಲಕನಿಗೆ 1 ವರ್ಷ ಜೈಲು

ಬೆಂಗಳೂರು: ಗೂಡ್ಸ್ ವಾಹನ ಡಿಕ್ಕಿಯಿಂದ ಟಿಟಿ ವಾಹನ ಚಾಲಕ ಮೃತಪಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗೂಡ್ಸ್ ವಾಹನ ಚಾಲಕನಿಗೆ ನಗರದ ಎಸಿಜೆಎಂ ನ್ಯಾಯಾಲಯ 1 ವರ್ಷ 3 ತಿಂಗಳು ಜೈಲು ಶಿಕ್ಷೆ ಹಾಗೂ ₹9 ಸಾವಿರ ದಂಡ ವಿಧಿಸಿ ಆದೇಶ ಹೊರಡಿಸಿದೆ. 2023ರಲ್ಲಿ ವೈಟ್‌ಫೀಲ್ಡ್‌ನ ಕೆ.ಆರ್. ಎಂಟರ್‌ಪ್ರೈಸಸ್ ಬಳಿ ರಸ್ತೆ ಅಪಘಾತ ನಡೆದಿತ್ತು. ಈ ವೇಳೆ ಟಿಟಿ ವಾಹನ ಚಾಲಕ ಪಂಚಾಕ್ಷರಿ (27) ಮೃತಪಟ್ಟಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯ, ಗೂಡ್ಸ್ ವಾಹನ ಚಾಲಕ ಎಂ.ಕುಮಾರ್‌ಗೆ ಶಿಕ್ಷೆ ವಿಧಿಸಿದೆ. ದಂಡ ಪಾವತಿಸಲು ವಿಫಲವಾದಲ್ಲಿ 3 ತಿಂಗಳು 10 ದಿನ ಹೆಚ್ಚುವರಿ ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಸೇವಾ ಭದ್ರತೆ ಒದಗಿಸಿ

ಪ್ರಜಾವಾಣಿ ಚಿತ್ರ
ಪ್ರಶಾಂತ್ ಎಚ್.ಜಿ.

ಗ್ರಾಮ ಸಹಾಯಕರ ಹುದ್ದೆಯನ್ನು 'ಡಿ' ದರ್ಜೆಗೇರಿಸಿ ಸೇವಾ ಭದ್ರತೆ ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು

ಮರದ ಕೊಂಬೆ ಬಿದ್ದು ಅವಘಡ • ನೇತ್ರದಾನ: ಸಾವಿನಲ್ಲೂ ಸಾರ್ಥಕತೆ

ಗಾಯಗೊಂಡಿದ್ದ ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರದ ಕೊಂಬೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಅಕ್ಷಯ್ (29) ಅವರು ಗುರುವಾರ ಮಧ್ಯಾಹ್ನ ಹೃದಯ ಸ್ತಂಭನದಿಂದ ಮೃತಪಟ್ಟಿದ್ದಾರೆ ಎಂದು ಜಯನಗರ ಅಪೊಲೊ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಜೂನ್ 15ರಂದು ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಶ್ರೀನಿವಾಸ್ ನಗರದ ಬ್ರಹ್ಮಮಂದಿರದ ಬಳಿ ಮರದ ಕೊಂಬೆ ಮುರಿದು ಅಕ್ಷಯ್ ತಲೆ ಮೇಲೆ ಬಿದ್ದು, ಗಂಭೀರ ಗಾಯಗೊಂಡಿದ್ದರು. ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು.

ಅಕ್ಷಯ್

ತಲೆಯಲ್ಲಿ ಹತ್ತಕ್ಕೂ ಅಧಿಕ ಕಡೆ ಗಾಯವಾಗಿತ್ತು. ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿದ್ದರು. ಆದರೆ, ಶಸ್ತ್ರ ಚಿಕಿತ್ಸೆ ನಡೆದು 60 ತಾಸು ಕಳೆದ ಬಳಿಕವೂ ಮಿದುಳು ಸ್ಪಂದಿಸದ ಕಾರಣ, ಮಿದುಳು ನಿಷ್ಕ್ರಿಯ-ಗೊಂಡಿದೆ ಎಂದು ಪರಿಗಣಿಸಿರುವುದಾಗಿ ವೈದ್ಯರು ಬುಧವಾರ ತಿಳಿಸಿದ್ದರು.

ಐದು ದಿನಗಳಿಂದ ಆಸ್ಪತ್ರೆಯಲ್ಲಿ ಸಾವು -ಬದುಕಿನ ಮಧ್ಯೆ ಹೋರಾಟ ನಡೆಸಿ ಗುರುವಾರ ಮಧ್ಯಾಹ್ನ 1.15ಕ್ಕೆ ಕೊನೆಯುಸಿರೆಳೆದರು. ಕಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಮೃತದೇಹ ಹಸ್ತಾಂತರಿಸಲಾಯಿತು. ಅಕ್ಷಯ್ ಅವರ ಎರಡು ಕಣ್ಣುಗಳನ್ನು ಕಿಮ್ಸ್ ಆಸ್ಪತ್ರೆಗೆ ದಾನ ಮಾಡುವ ಮೂಲಕ ಕುಟುಂಬಸ್ಥರು ಸಾವಿನಲ್ಲೂ ಸಾರ್ಥಕತೆ ಮೆರೆದರು.

ಬನಶಂಕರಿಯ ಕತ್ರಿಗುಪ್ಪೆಯ ಶ್ರೀನಗರದ ನಿವಾಸಿಯಾದ ಅಕ್ಷಯ್, ರಾಜಾಜಿನಗರದ ಖಾಸಗಿ ಕಂಪನಿವೊಂದರಲ್ಲಿ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬದ ಆಧಾರ ಸ್ತಂಭವಾಗಿದ್ದರು. ಕಳೆದ ವರ್ಷ ಅಕ್ಷಯ್ ತಾಯಿ ಕ್ಯಾನ್ಸರ್‌ನಿಂದ ನಿಧನರಾಗಿದ್ದರು.

ಅಕ್ಷಯ್ ಸಾವಿಗೆ ಬಿಬಿಎಂಪಿ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿ-ದರು. ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆ ಮುಂದೆ ಭದ್ರತೆ ಒದಗಿಸಲಾಗಿತ್ತು.

ಮೂತ್ರಪಿಂಡ ಸಮಸ್ಯೆಯಿಂದ ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿರುವ ತಂದೆಯನ್ನು ಆಸ್ಪತ್ರೆಗೆ ಗಾಲಿ ಕುರ್ಚಿಯಲ್ಲೇ ಕರೆತರಲಾಯಿತು. ಮಗನ ಶವ ಕಂಡು ಗೋಳಾಡಿದರು. ಆಸ್ಪತ್ರೆ ಆವರಣದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

'ನನ್ನ ನಾಲ್ಕು ಮಕ್ಕಳನ್ನು ಕಳೆದುಕೊಂಡೆ. ದೇವರು ಮೊಮ್ಮಗನನ್ನು ಕಾಪಾಡಲಿಲ್ಲ' ಎಂದು ಅಜ್ಜಿ ಸಾವಿತ್ರಮ್ಮ ಕಣ್ಣೀರಿಟ್ಟರು. ನೆರೆದಿದ್ದವರು ಅವರಿಗೆ ಸಾಂತ್ವನ ಹೇಳಿದರು.

ಆಸ್ಪತ್ರೆ ಆವರಣದಲ್ಲಿ ಮೃತ ಅಕ್ಷಯ್ ಅವರ ಅಜ್ಜಿಯನ್ನು ಸಂತೈಸುತ್ತಿರುವ ದೃಶ್ಯ

ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರ

'ಚಿಕಿತ್ಸಾ ವೆಚ್ಚದ ಬಿಲ್ ₹5.22 ಲಕ್ಷ ಆಗಿದ್ದು, ಈಗಾಗಲೇ ₹4.6 ಲಕ್ಷವನ್ನು ಪಾವತಿ ಮಾಡಲಾಗಿದೆ. ಉಳಿದ ಮೊತ್ತವನ್ನು ಪಾವತಿ ಮಾಡಲಾಗುವುದು. ಮೃತರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ನೀಡಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಅಕ್ಷಯ್ ಸಾವಿಗೆ ಸಂಬಂಧಿಸಿದಂತೆ ಬಿಬಿಎಂಪಿ ಅರಣ್ಯ ಘಟಕದ ಅಧಿಕಾರಿಗಳ ವಿರುದ್ಧ ಹನುಮಂತನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ಷಯ್ ಅವರ ಸಹೋದರ ಬೆನಕರಾಜ್ ಅವರ ದೂರು ಆಧರಿಸಿ, ಉಪ ಅರಣ್ಯ ಸಂಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ.

ವರದಕ್ಷಿಣೆ ಸಾವು: ಪತಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ (ರಾಮನಗರ): ವರದಕ್ಷಿಣೆಗಾಗಿ ಪತ್ನಿಯನ್ನು ಹೊಡೆದು ಸಾಯಿಸಿ ಆತ್ಮಹತ್ಯೆಯ ಬಣ್ಣ ಕಟ್ಟಲು ಯತ್ನಿಸಿದ್ದ ಪತಿಗೆ ರಾಮನಗರದ (ಕನಕಪುರ) ಎರಡನೇ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ₹3.50 ಲಕ್ಷ ದಂಡ ವಿಧಿಸಿದೆ.

ಅನಿಲ್ ಕುಮಾರ್ ಶಿಕ್ಷೆಗೊಳಗಾದ ಅಪರಾಧಿ. ಆತನ ಪತ್ನಿ ಅಶ್ವಿನಿ (23) ವರದಕ್ಷಿಣೆ ಕಾರಣಕ್ಕೆ ಪತಿಯಿಂದ ಹಲ್ಲೆಗೊಳಗಾಗಿ ಜೀವ ಕಳೆದುಕೊಂಡವರು. ಚಾಲಕನಾಗಿ ಕೆಲಸ ಮಾಡುತ್ತಿದ್ದ ಅನಿಲ್‌ನನ್ನು ಅಶ್ವಿನಿ ಅವರು ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರಿದ್ದರು. 2020ರ ಮೇ 14ರಂದು ಅಶ್ವಿನಿ ಅವರ ಕೊಲೆಯಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಎಚ್.ಎನ್. ಕುಮಾರ್ ಅವರು, ಅನಿಲ್ ಅಪರಾಧಿ ಎಂದು ಸಾರಿದರು. ಆತನಿಗೆ ಜೀವಾವಧಿ ಶಿಕ್ಷೆ ಮತ್ತು ₹3.50 ಲಕ್ಷ ದಂಡ ವಿಧಿಸಿ ಆದೇಶ ಹೊರಡಿಸಿದರು. ಪ್ರಕರಣದಲ್ಲಿ ಆತನ ಕುಟುಂಬದ ಮೂವರು ಆರೋಪಿಗಳು ಖುಲಾಸೆಯಾಗಿದ್ದಾರೆ.

ಕ್ರಿಮಿನಲ್ ಪ್ರಕರಣ ತನಿಖೆಗೆ 10 ಅಂಶ ಪಾಲನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಪ್ರಕರಣಗಳನ್ನು ಸಿಐಡಿಗೆ ತನಿಖೆಗಾಗಿ ವರ್ಗಾಯಿಸಿದಾಗ ಅನುಸರಿಸಬೇಕಾದ ಪ್ರಮುಖ 10 ಅಂಶಗಳನ್ನು ಅಧಿಕಾರಿಗಳು ಪಾಲಿಸಬೇಕೆಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಆದೇಶ ಹೊರಡಿಸಿದ್ದಾರೆ.

ಎಂ.ಎ.ಸಲೀಂ

ಪೊಲೀಸ್ ಇಲಾಖೆಯಲ್ಲಿ ಸಿಐಡಿಯು ಪ್ರಮುಖ ಅಪರಾಧ ತನಿಖಾ ಸಂಸ್ಥೆಯಾಗಿದೆ. ರಾಜ್ಯ ಸರ್ಕಾರ, ಸುಪ್ರೀಂ ಕೋರ್ಟ್, ಹೈಕೋರ್ಟ್ ಹಾಗೂ ಡಿಜಿ ಮತ್ತು ಐಜಿಪಿ ಕಚೇರಿಯಿಂದ ಆದೇಶವಾದ ಪರಿಣಾಮವಾಗಿ ಸಿಐಡಿಯ ತನಿಖಾಧಿಕಾರಿಗಳು ತಪ್ಪದೇ ಕೆಲವು ನಿಯಮಗಳನ್ನು ಅನುಸರಿಸಬೇಕಾಗಿದೆ ಎಂದು ಆದೇಶದಲ್ಲಿ ಹೇಳಿದ್ದಾರೆ.

ಪಾಲಿಸಬೇಕಾದ ಕಾರ್ಯವಿಧಾನಗಳು

- ತನಿಖೆಯಲ್ಲಿರುವ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಿದ್ದರ ಬಗ್ಗೆ ಘಟಕದ ಮುಖ್ಯಸ್ಥರಿಗೆ ಮಾಹಿತಿ ನೀಡಿ, ತನಿಖಾಧಿಕಾರಿಗೆ ಸಂಗ್ರಹಿಸಿದ ಸಾಕ್ಷ್ಯಾಧಾರ-ಗಳನ್ನು ಹಾಗೂ ಕಂಡುಕೊಂಡ ಸಂಗತಿಗಳನ್ನು ಕ್ರಮ ಪಟ್ಟಿಗೊಳಿಸಿ ಮೂರು ದಿನದೊಳಗೆ ಸಲ್ಲಿಸಬೇಕು.
- ಮೇಲಾಧಿಕಾರಿಗಳ ಸೂಚನೆ ಹಾಗೂ ಆದೇಶಗಳನ್ನು ಸ್ವೀಕರಿಸಿದ ತಕ್ಷಣ ಪ್ರಕರಣದ ಕೇಸ್ ಡೈರಿಯನ್ನು ಆಯಾ ದಿನಾಂಕದಂದು ಅಪ್‌ಡೇಟ್ ಮಾಡುವುದು ಹಾಗೂ ಐಟಿ ತನಿಖೆಯ ಕ್ರಮಗಳನ್ನು ಪಾಲಿಸಬೇಕು. ಬಾಕಿ ಇರುವ ತನಿಖಾ ಕ್ರಮ ಮತ್ತು ವಿಷಯಗಳನ್ನು ಪಟ್ಟಿ ಮಾಡಬೇಕು.
- ಸ್ಥಳೀಯ ತನಿಖಾಧಿಕಾರಿಗಳು ತನಿಖಾ ಕಡತವನ್ನು ಪರಿವಿಡಿಯೊಂದಿಗೆ ಕ್ರಮಬದ್ಧವಾಗಿ ಪುಟಸಂಖ್ಯೆ ನೀಡಿ ಕಡತ ಸಿದ್ಧಪಡಿಸತಕ್ಕದ್ದು.
- ಹಿಂದಿನ ತನಿಖಾಧಿಕಾರಿ ಹಾಗೂ ತಾನು ಕೈಗೊಂಡ ತನಿಖೆ ಕುರಿತು ಬಾಕಿ ಇರುವ ತನಿಖೆ ಹಂತದ ಕ್ರಮ ಮತ್ತು ವಿಷಯಗಳ ವರದಿ ಸಿದ್ಧಪಡಿಸಿಕೊಂಡು ಸಿಐಡಿ ಕಚೇರಿ ಮುಖ್ಯಸ್ಥರಿಗೆ ಪರಿಶೀಲನೆಗೆ ಸಲ್ಲಿಸಬೇಕು.
- ಕಚೇರಿ ಮುಖ್ಯಸ್ಥರು ಆ ವರದಿಯನ್ನು ಸ್ವೀಕರಿಸಿದ ಎರಡು ದಿನದೊಳಗೆ ಸಿಐಡಿ ಘಟಕದ ಪೊಲೀಸ್ ಅಧೀಕ್ಷಕರು ಆಡಳಿತ ಇವರನ್ನು ಸಂಪರ್ಕಿಸಿ, ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಿದ ಬಗ್ಗೆ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲು ದಿನಾಂಕವನ್ನು ನಿಗದಿಪಡಿಸುವ ಕುರಿತು ಕೋರಿಕೆ ಸಲ್ಲಿಸಬೇಕು.
- ಪೂರ್ವಭಾವಿ ಸಭೆಯಲ್ಲಿ ಹಾಜರಿರುವ ಸಿಐಡಿ ಪೊಲೀಸ್ ಅಧಿಕಾರಿಗಳಿಗೆ ತನಿಖೆಯಲ್ಲಿ ಕಡ್ಡಾಯವಾಗಿ ಹಾಜರಿರುವುದು ಸೇರಿದಂತೆ ಕಾನೂನು ಪಾಲಿಸದೇ ಇರುವುದು ಕಂಡು ಬಂದಲ್ಲಿ, ನ್ಯಾಯಾಲಯ ತಡೆಯಾಜ್ಞೆ ಆದೇಶವಾಗಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಕಡ್ಡಾಯ ಕಾನೂನು ಪಾಲಿಸುವವರೆಗೆ ಅಥವಾ ತಡೆಯಾಜ್ಞೆ ರದ್ದಾಗುವವರೆಗೆ ಪ್ರಕರಣ ಸಿಐಡಿಗೆ ಹಸ್ತಾಂತರಿಸಲು ಸೂಚನೆ ನೀಡುವವರೆಗೆ ಹಸ್ತಾಂತರ ಪ್ರಕ್ರಿಯೆಯನ್ನು ಮುಂದೂಡಬೇಕು.

ಬೆಂಗಳೂರಿನ ವಿಧಾನಸೌಧದ ಆವರಣದ ತೋಟದಲ್ಲಿ ಅರಳಿದ ಬೋಗನ್‌ವಿಲ್ಲಾ ಹೂವುಗಳು –ಚಿತ್ರ: ಪ್ರಶಾಂತ್ ಎಚ್‌.ಜಿ.

ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಒಂದೇ ವಾರದಲ್ಲಿ ಎರಡನೇ ಬಾರಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿದೆ.

ಶೌಚಾಲಯದ ಪೈಪ್‌ಲೈನ್‌ನಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಹಾಕಿದ್ದು, ವಿಮಾನ ನಿಲ್ದಾಣದ ಭದ್ರತಾ ಪಡೆ ಪ್ರಕರಣ ದಾಖಲಿಸಿಕೊಂಡು ತಪಾಸಣೆ ನಡೆಸಿತು. ಪರಿಶೀಲನೆ ಬಳಿಕ ಹುಸಿ ಬೆದರಿಕೆ ಎಂದು ತಿಳಿದು ಬಂದಿದೆ.

ಮೂಲಗಳ ಪ್ರಕಾರ, 'ಬುಧವಾರ ರಾತ್ರಿ ಭಯೋತ್ಪಾದಕರ ಹೆಸರಿನಲ್ಲಿ ಕಳುಹಿಸಲಾದ ಇ-ಮೇಲ್‌ನಲ್ಲಿ ಎರಡು ಬಾಂಬ್‌ಗಳನ್ನು ಇಟ್ಟಿರುವ ಬಗ್ಗೆ ಎಚ್ಚರಿಕೆ ನೀಡಲಾಗಿತ್ತು. ವಿಮಾನ ನಿಲ್ದಾಣದ ಶೌಚಾಲಯದ ಪೈಪ್‌ಲೈನ್‌ನೊಳಗೆ ಸ್ಫೋಟಕ ಸಾಧನ ಇರಿಸಲಾಗಿದೆ. ಉಗ್ರ ಅಜ್ಮಲ್ ಕಸಬ್‌ನನ್ನು ಗಲ್ಲಿಗೇರಿಸಿರುವುದು ಸರಿಯಲ್ಲ ಹಾಗೂ ಐಪಿಎಸ್ ಅಧಿಕಾರಿ ಪಲ್ಲನ್ ಎ. ಅರುಣ್ ಅವರು ಸವುಕ್ಕು ಶಂಕರ್ ಅವರನ್ನು ಅಕ್ರಮವಾಗಿ ಬಂಧಿಸಿರುವುದು ತಪ್ಪು. 'ಪ್ಲಾನ್ ಎ' ವಿಫಲವಾದರೆ 'ಪ್ಲಾನ್ ಬಿ' ಸಿದ್ಧವಾಗಿದೆ ಎಂದು ಇ-ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು'. ಸಂದೇಶದಲ್ಲಿ ತಮಿಳುನಾಡಿನ ಅರ್ಥಶಾಸ್ತ್ರಜ್ಞ ಜೆ.ಜಯರಂಜನ್ ಅವರ ಮನೆಯನ್ನು ಸ್ಫೋಟಿಸುವುದಾಗಿ ಉಲ್ಲೇಖಿಸಲಾಗಿದೆ. ಹೀಗಾಗಿ ತಮಿಳು ನಾಡು ಪೊಲೀಸರಿಗೂ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಭದ್ರತಾ ಸಂಸ್ಥೆಗಳು ಆವರಣದ ಸಮಗ್ರ ತಪಾಸಣೆ ನಡೆಸಿದಾಗ, ಯಾವುದೇ ಸ್ಫೋಟಕ ವಸ್ತುಗಳು ಕಂಡು ಬಂದಿಲ್ಲ ಮತ್ತು ಬೆದರಿಕೆ ಸಂದೇಶದಲ್ಲಿರುವ ಮಾಹಿತಿ ಸುಳ್ಳು ಎಂಬುದು ಖಚಿತವಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ವಿಮಾನ ನಿಲ್ದಾಣದ ಟರ್ಮಿನಲ್ -2 ವ್ಯವಸ್ಥಾಪಕ ಪಿ.ಸಿ.ತಿಮ್ಮಣ್ಣ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ.

ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣ: ಹೈಕೋರ್ಟ್ ಮಧ್ಯಂತರ ಆದೇಶ

ಐಪಿಎಸ್ ಅಧಿಕಾರಿ ಜೋಶಿ ನೋಟಿಸ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ದಂಧೆಯಲ್ಲಿ ಭಾಗಿಯಾದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆ ಹಾಜರಾಗುವಂತೆ ಸೂಚಿಸಿ ಐಪಿಎಸ್ ಅಧಿಕಾರಿ ಶ್ರೀನಾಥ್ ಎಂ.ಜೋಶಿ ಅವರಿಗೆ ಜಾರಿ ಮಾಡಿದ್ದ ನೋಟಿಸ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ತನಿಖೆಗೆ ಹಾಜರಾಗುವಂತೆ ಜೂನ್ 15ರಂದು ಜಾರಿ ಮಾಡಿರುವ ನೋಟಿಸ್‌ಗೆ ತಡೆ ನೀಡಬೇಕು' ಎಂದು ಕೋರಿ ಶ್ರೀನಾಥ್ ಎಂ.ಜೋಶಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಜೋಶಿ ಪರ ಹೈಕೋರ್ಟ್ ವಕೀಲ ಸಿ.ಎನ್.ಮಹದೇಶ್ವರನ್, 'ಜೋಶಿ ಮತ್ತು ಪ್ರಕರಣದ ಆರೋಪಿ ನಿಂಗಪ್ಪ ಸಾವಂತ್ ಅವರಿಗೂ ಯಾವುದೇ ಸಂಪರ್ಕವಿಲ್ಲ. ಜೋಶಿ ಅವರ ಸೇವಾ ದಾಖಲೆಗಳಿಗೆ ಸಮಸ್ಯೆ ತಂದೊಡ್ಡುವ ಸಲುವಾಗಿ ಅವರನ್ನು ತಪ್ಪಾಗಿ ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ' ಎಂದು ದೂರಿದರು. ಇದಕ್ಕೆ ಪ್ರತಿಯಾಗಿ ಲೋಕಾಯುಕ್ತದ ವಿಶೇಷ ಪ್ರಾಸಿಕ್ಯೂಟರ್ ವೆಂಕಟೇಶ ಅರಬಟ್ಟಿ, 'ನಿಂಗಪ್ಪ ಸಾವಂತ್ ಒಟ್ಟು 35 ಅಧಿಕಾರಿಗಳ ಹೆಸರನ್ನು ಉಲ್ಲೇಖಿಸಿದ್ದು, ಶ್ರೀನಾಥ್ ಜೋಶಿ ಅವರಿಗೆ ನೀಡಿರುವ ನೋಟಿಸ್‌ಗೆ ತಡೆ ನೀಡಿದರೆ ತನಿಖೆಗೆ ಸಮಸ್ಯೆ ಉಂಟಾಗಲಿದೆ. ಹೀಗಾಗಿ, ತನಿಖೆಗೆ ಅನುಮತಿಸಬೇಕು' ಎಂದು ಕೋರಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಪ್ರಕರಣದಲ್ಲಿ ನಿಂಗಪ್ಪ ಸಾವಂತ್ ಉಲ್ಲೇಖಿಸಿರುವ ಇತರೆ 35 ಅಧಿಕಾರಿಗಳ ವಿರುದ್ಧದ ತನಿಖೆ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿ, ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿದೆ.

ಮುಖ್ಯಾಂಶಗಳು

- ವಿಚಾರಣೆ ಇದೇ 30ಕ್ಕೆ ಮುಂದೂಡಿದ ಹೈಕೋರ್ಟ್
- ಜೂನ್ 15ರಂದು ಜಾರಿ ಮಾಡಿದ್ದ ನೋಟಿಸ್

ಆಕ್ಷೇಪ: 'ಜೂನ್ 15ರಂದು ಜೋಶಿ ಅವರ ಮನೆಯಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ–2023ರ ಕಲಂ 35(ಎ) ಅಡಿಯಲ್ಲಿ ನೋಟಿಸ್ ಜಾರಿ ಮಾಡಿ, ಜೂನ್ 16ಕ್ಕೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಆದರೆ, ಕಾರಣವನ್ನು ಬಹಿರಂಗಪಡಿಸಿಲ್ಲ. ನೋಟಿಸ್ ಜೊತೆಗೆ ದೂರು ಅಥವಾ ಎಫ್‌ಐಆರ್ ಪ್ರತಿಯನ್ನು ಲಗತ್ತಿಸಿಲ್ಲ. ಎಫ್‌ಐಆರ್ ಅಥವಾ ದೂರಿನಲ್ಲಿ ಜೋಶಿ ಅವರ ಹೆಸರನ್ನೂ ಉಲ್ಲೇಖಿಸಿಲ್ಲ' ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಪ್ರಕರಣದಲ್ಲಿ ಜೂನ್ 2ರಂದು ಮಾಜಿ ಹೆಡ್ ಕಾನ್‌ಸ್ಟೆಬಲ್ ಹೊಳಲ್ಕೆರೆ ತಾಲ್ಲೂಕು ತಾಳಿಕಟ್ಟೆಯ ನಿಂಗಪ್ಪ ಜಿ.ಅಲಿಯಾಸ್ ನಿಂಗಪ್ಪ ಸಾವಂತ್ (45) ಅವರನ್ನು ಬಂಧಿಸಲಾಗಿತ್ತು. ಇದರ ಬೆನ್ನಲ್ಲೇ ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ -1 ಎಸ್‌ಪಿಯಾಗಿದ್ದ ಶ್ರೀನಾಥ್ ಎಂ.ಜೋಶಿ ಅವರನ್ನು ಲೋಕಾಯುಕ್ತ ಪೊಲೀಸ್ ಸೇವೆಯಿಂದ ಬಿಡುಗಡೆ ಮಾಡಲಾಗಿತ್ತು.

ಜಾಮೀನು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ದಂಧೆಯಲ್ಲಿ ಭಾಗಿಯಾದ ಆರೋಪದಡಿ ಬಂಧನಕ್ಕೊಳಗಾಗಿರುವ ಲೋಕಾಯುಕ್ತದ ನಿಂಗಪ್ಪ ಸಾವಂತ್ ಅವರಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ನಿಂಗಪ್ಪ ಅವರ ಪತ್ನಿ ಜಿ.ಕೆ. ಚಂದ್ರಕಲಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ಅರ್ಜಿದಾರರು, ನ್ಯಾಯಾಲಯದ ವ್ಯಾಪ್ತಿ ಪ್ರದೇಶವನ್ನು ತೊರೆಯುವಂತಿಲ್ಲ. ತನಿಖೆಗೆ ಸಹಕರಿಸಬೇಕು. ಈ ಮಧ್ಯಂತರ ಜಾಮೀನು, ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಸ್ಪಷ್ಟಪಡಿಸಿದೆ. 'ಪ್ರಕರಣಕ್ಕೆ ಸಂಬಂಧಿಸಿದಂತೆ ನಿಂಗಪ್ಪ ಮತ್ತು ಲೋಕಾಯುಕ್ತ ಪೊಲೀಸರು ಮಾಧ್ಯಮಗಳ ಜೊತೆ ಮಾತನಾಡು-ವಂತಿಲ್ಲ' ಎಂಬ ಕಟ್ಟುನಿಟ್ಟಿನ ಷರತ್ತನ್ನೂ ವಿಧಿಸಿದೆ.

ಭಾರತೀಯ ವಿದ್ಯಾರ್ಥಿನಿ ಸಾವು

ಒಟ್ಟಾವ (ಕೆನಡಾ) (ಪಿಟಿಐ): ಕೆನಡಾದ ಕ್ಯಾಲ್ಗರಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿನಿಯೊಬ್ಬರು ಮೃತಪಟ್ಟಿದ್ದಾರೆ ಎಂದು ವ್ಯಾಂಕೋವರ್‌ನಲ್ಲಿರುವ ಭಾರತೀಯ ಕಾನ್ಸಲೇಟ್ ಜನರಲ್ ಕಚೇರಿ ಗುರುವಾರ ತಿಳಿಸಿದೆ. 'ವಿದ್ಯಾರ್ಥಿನಿ ತಾನ್ಯಾ ತ್ಯಾಗಿ ಅವರ ಹಠಾತ್ ನಿಧನದಿಂದ ನಾವು ದುಃಖಿತರಾಗಿದ್ದೇವೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಹಣಕಾಸು ಸಚಿವಾಲಯ

ಹಣಕಾಸು ಸೇವೆಗಳ ಇಲಾಖೆ

ಸಂಸದ ಮಾರ್ಗ, ನವದೆಹಲಿ–110001

ಕಾಲ ಕಾಲಕ್ಕೆ ತಿದ್ದುಪಡಿಗೊಂಡಿರುವ ನ್ಯಾಯಾಧಿಕರಣ ಸುಧಾರಣೆಗಳ ಕಾಯ್ದೆ, 2021 ಮತ್ತು ನ್ಯಾಯಾಧಿಕರಣ (ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮಾವಳಿಗಳ ಅಡಿಯಲ್ಲಿ, ಸಾಲಗಳ ವಸೂಲಾತಿ ಮೇಲ್ಮನವಿ ನ್ಯಾಯಾಧಿಕರಣ, ದೆಹಲಿ ಇಲ್ಲಿ ರಿಕ್ತಗೊಳ್ಳುವ ನಿರೀಕ್ಷೆಯಲ್ಲಿರುವ ಅಧ್ಯಕ್ಷ ಹುದ್ದೆಗಾಗಿ, ಅರ್ಹ ಮತ್ತು ಸಮರ್ಥ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು, ಇಲಾಖೆಯ ವೆಬ್‌ಸೈಟ್‌ನಲ್ಲಿರುವ https://financialservices.gov.in/beta/en/vacancies ಲಿಂಕ್‌ಗೆ ಭೇಟಿ ಕೊಡಬಹುದು. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 04/08/2025.

ನವದೆಹಲಿ

CBC 15415/11/0005/2526 ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ಪೂರ್ವ

ಹಳೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸರ್ಕಾರಿ ಶಾಲೆ ಹತ್ತಿರ, ತ್ರಿವೇಣಿನಗರ. ಕೆ.ಆರ್.ಪುರಂ–560036, ದೂ: 080–29904132, ಇ–ಮೇಲ್: dcpoblreast2022@gmail.com

ಸಂಖ್ಯೆ: ಜಿ.ಮ.ರ.ಘ/ಬೆಂ(ಪೂ)/ಮ.ಸ.ಹೆ.ಡೆ/ಇ–ಟೆಂಡರ್/2025–26 ದಿನಾಂಕ: 17.06.2025

ಪ್ರಕಟಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಂಗಳೂರು ಪೂರ್ವ(ಕೆ.ಆರ್.ಪುರಂ) ವ್ಯಾಪ್ತಿಯಲ್ಲಿ ಹೊಸದಾಗಿ 4 ಮಕ್ಕಳ ಸಹಾಯವಾಣಿ ಹೆಲ್ಪ್ ಡೆಸ್ಕ್‌ಗಳನ್ನು ಪ್ರಾರಂಭಿಸಿದ್ದು, ಪ್ರತಿ ಡೆಸ್ಕ್‌ಗಳಿಗೆ 06 ಹುದ್ದೆಗಳಂತೆ ಒಟ್ಟು 24 ಹುದ್ದೆಗಳನ್ನು ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಇ–ಪ್ರೊಕ್ಯೂರಮೆಂಟ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಪದ್ಧತಿಯಂತೆ http/kppp.karnataka.gov.in ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ಪೂರ್ವ.

ವಾಸಾಸಂಇ/ವಾಪ್ರ/1285/ಎಸ್‌ಎಸ್‌ಸಿ/2025–26

ಒಂದೇ ಹುದ್ದೆಗೆ ಇಬ್ಬರು ಅಧಿಕಾರಿ

ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆ ಆಯುಷ್ ಅಧಿಕಾರಿ ಹುದ್ದೆಗೆ ಸಂಘರ್ಷ

• ವರುಣ ಹೆಗಡೆ

ಬೆಂಗಳೂರು: ಆಯುಷ್ ಇಲಾಖೆಯಲ್ಲಿ ಅಧಿಕಾರ ಸಂಘರ್ಷ ಏರ್ಪಟ್ಟಿದ್ದು, ಒಂದೇ ಹುದ್ದೆಯನ್ನು ಇಬ್ಬರು ಅಧಿಕಾರಿಗಳು ಅಲಂಕರಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆಯುಷ್ ಅಧಿಕಾರಿಯಾಗಿ ಡಾ. ಶಾಂತಲಾ ಎನ್. ಮತ್ತು ಡಾ. ಶಹಾಬುದ್ದೀನ್ ಸದ್ಯ ಕಾರ್ಯನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳ ಈ ನಡೆಯಿಂದ ಕೆಳ ಹಂತದ ಅಧಿಕಾರಿಗಳು, ವೈದ್ಯರು ಹಾಗೂ ಸಿಬ್ಬಂದಿ ಗೊಂದಲಕ್ಕೆ ಒಳಗಾಗಿದ್ದು, ಯಾರ ಸೂಚನೆಗಳನ್ನು ಪಾಲಿಸಬೇಕೆಂದು ತಿಳಿಯದೆ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದ ಡಾ. ಶಹಾಬುದ್ದೀನ್ ಅವರನ್ನು ಇದೇ 6ರಂದು ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆಯುಷ್ ಅಧಿಕಾರಿ ಹುದ್ದೆಯಿಂದ ಬಿಡುಗಡೆ ಮಾಡಿ ಆಯುಷ್ ಇಲಾಖೆ ಆದೇಶ ಹೊರಡಿಸಿತ್ತು. ಅವರ ಸ್ಥಾನಕ್ಕೆ ಹೆಬ್ಬಾಳದ ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ. ಶಾಂತಲಾ ಅವರನ್ನು ಪ್ರಭಾರಿಯಾಗಿ ನೇಮಿಸಲಾಗಿತ್ತು. ಇದೇ 9ರಂದು ಅವರು ಹುದ್ದೆ ಅಲಂಕರಿಸಿದ್ದರು. ಇದೇ 13ರಂದು ಶಾಂತಲಾ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಆಯುಷ್ ಅಧಿಕಾರಿಯಾಗಿಯೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಇಲಾಖೆ ಆಯುಕ್ತರು ಸೂಚಿಸಿದ್ದರು.

ಶಹಾಬುದ್ದೀನ್ ಅವರು ತಮ್ಮ ಬಿಡುಗಡೆ ಪ್ರಶ್ನಿಸಿ, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯ ಮಂಡಳಿ (ಕೆ.ಎ.ಟಿ) ಮೆಟ್ಟಿಲೇರಿದ್ದರು. ಈ ಪ್ರಕರಣದಲ್ಲಿ ಹುದ್ದೆಯಿಂದ ಅವರ ಬಿಡುಗಡೆಗೆ ಕೆ.ಎ.ಟಿ. ತಡೆಯಾಜ್ಞೆ ನೀಡಿದ್ದರಿಂದ ಅವರು ಮತ್ತೆ ಕರ್ತವ್ಯಕ್ಕೆ ಹಾಜರಾಗಿ, ಈ ಮೊದಲಿನ ಹುದ್ದೆ ಅಲಂಕರಿಸಿದ್ದಾರೆ.

ಒಂದೇ ಕಚೇರಿ: ಡಾ. ಶಹಬುದ್ದೀನ್ ಅವರನ್ನು ಹುದ್ದೆಯಿಂದ ಬಿಡುಗಡೆಗೊಳಿಸಿ ಹೊರಡಿಸಲಾದ ಆದೇಶದಲ್ಲಿ, ಮುಂದಿನ ಸ್ಥಳ ನಿಯುಕ್ತಿಗಾಗಿ ಆಯುಷ್ ಇಲಾಖೆ ಆಯುಕ್ತರ ಬಳಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು. ಆದರೆ, ಆದೇಶಕ್ಕೆ ಕೆ.ಎ.ಟಿ. ತಡೆಯಾಜ್ಞೆ ನೀಡಿದ್ದರಿಂದ ಡಾ. ಶಹಬುದ್ದೀನ್ ಅವರು ಬೆಂಗಳೂರು ನಗರ ಜಿಲ್ಲೆ ಆಯುಷ್ ಕಚೇರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಒಂದೇ ಕಚೇರಿ, ಖುರ್ಚಿಯನ್ನು ಇಬ್ಬರು ಅಲಂಕರಿಸುತ್ತಿದ್ದಾರೆ. ಇದು ಆಡಳಿತಾತ್ಮಕ ಚಟುವಟಿಕೆಗಳಿಗೆ ತೊಡಕಾಗುತ್ತಿದೆ ಎಂದು ಸಿಬ್ಬಂದಿ ದೂರಿದ್ದಾರೆ.

'ಒಂದೇ ಹುದ್ದೆಯಲ್ಲಿ ಇಬ್ಬರು ಕಾರ್ಯನಿರ್ವಹಿಸುತ್ತಿರುವುದರಿಂದ ಗೊಂದಲಕ್ಕೆ ಒಳಗಾಗಿದ್ದೇವೆ. ಶಹಬುದ್ದೀನ್ ಅವರು ಸಹ ಸಭೆ ನಡೆಸಿ, ವಿವಿಧ ಸೂಚನೆಗಳನ್ನು ನೀಡುತ್ತಿದ್ದಾರೆ. ಯಾರ ಆದೇಶ ಪಾಲಿಸಬೇಕು ಎಂಬುದು ತಿಳಿಯದಾಗಿದೆ. ಈ ಸಂಗತಿಯನ್ನು ಮೇಲಾಧಿಕಾರಿಗಳ ಗಮನಕ್ಕೂ ತರಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವೈದ್ಯಾಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಶಹಾಬುದ್ದೀನ್ ಅವರು ದೂರವಾಣಿ ಕರೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಯೋಗ ದಿನಾಚರಣೆ ಗೊಂದಲ

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯುಷ್ ಇಲಾಖೆಯು ಇದೇ 21ರಂದು ವಿವಿಧೆಡೆ ಯೋಗಾಭ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯೋಗ ದಿನ ಆಚರಣೆಗೆ ಸಂಬಂಧಿಸಿದಂತೆ ಶಾಂತಲಾ ಅವರು ಸಭೆ ನಡೆಸಿದ್ದಾರೆ. ಇದೇ ವೇಳೆ ಶಹಬುದ್ದೀನ್ ಅವರು ಸಹ ಸಭೆ ನಡೆಸಿರುವುದು ಸಿಬ್ಬಂದಿಯಲ್ಲಿ ಗೊಂದಲಕ್ಕೆ ಕಾರಣವಾಗಿದೆ.

> **ಶಹಾಬುದ್ದೀನ್ ಅವರನ್ನು ಹುದ್ದೆಯಿಂದ ವರ್ಗಾವಣೆ ಮಾಡಲಾಗಿದ್ದು, ಕೆ.ಎ.ಟಿ.ಯಿಂದ ಅವರು ತಡೆಯಾಜ್ಞೆ ತಂದಿದ್ದರು. ಕೆ.ಎ.ಟಿ.ಗೆ ಸ್ಪಷ್ಟನೆ ನೀಡಲಾಗಿದೆ. ಇದು ತಾತ್ಕಾಲಿಕ ಗೊಂದಲ**
> **ವಿಪಿನ್ ಸಿಂಗ್,** ಆಯುಷ್ ಇಲಾಖೆ ಆಯುಕ್ತ

> **ಇಲಾಖೆ ಆದೇಶ ಅನ್ವಯ ನಾನು ಹುದ್ದೆ ಸ್ವೀಕರಿಸಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡುತ್ತಾ ವಹಿಸಲಾದ ಜವಾಬ್ದಾರಿಯನ್ನೂ ಸಮರ್ಥವಾಗಿ ನಿಭಾಯಿಸುತ್ತಿದ್ದೇನೆ**
> **ಡಾ. ಶಾಂತಲಾ ಎನ್.,** ಬೆಂಗಳೂರು ನಗರ ಜಿಲ್ಲಾ ಆಯುಷ್ ಅಧಿಕಾರಿ (ಪ್ರಭಾರ)

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಸಿರಿ ಸಂಜೀವಿನಿ ಒಕ್ಕೂಟಕ್ಕೆ ಪುರಸ್ಕಾರ

ಆನೇಕಲ್: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯಲ್ಲಿ ಅತ್ಯುತ್ತಮ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಪುರಸ್ಕಾರಕ್ಕೆ ತಾಲ್ಲೂಕಿನ ಮುತ್ತಾನಲ್ಲೂರು ಗ್ರಾಮ ಪಂಚಾಯಿತಿಯ ಸಿರಿ ಸಂಜೀವಿನಿ ಒಕ್ಕೂಟವು ಭಾಜನವಾಗಿದೆ. ಜಿಲ್ಲೆಯಲ್ಲಿರುವ ಸ್ತ್ರೀಶಕ್ತಿ ಒಕ್ಕೂಟದಲ್ಲಿ ಉತ್ತಮವಾಗಿ ಕಾರ್ಯನಿರ್ವಹಣೆಗಾಗಿ ಪ್ರಥಮ ಸ್ಥಾನ ಪಡೆದಿರುವ ಒಕ್ಕೂಟಕ್ಕೆ ₹1 ಲಕ್ಷ ಚೆಕ್ ಅನ್ನು ಬಹುಮಾನವಾಗಿ ವಿತರಿಸಲಾಯಿತು.

ರೈಲ್ವೆ ಸಚಿವಾಲಯ

(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)

ಅಧಿಸೂಚನೆ

21.05.2025 ದಿನಾಂಕದ ಎಸ್.ಓ. 2296(ಇ) ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ

ಎಸ್.ಓ. 2556(ಇ).––ರೈಲ್ವೆ ಕಾಯ್ದೆ 1989 ರ (1989ರ ಕಾಯ್ದೆ ಸಂಖ್ಯೆ 24) ಸೆಕ್ಷನ್ 2ರ ಷರತ್ತು 37(ಎ)ರ ಮೂಲಕ ನೀಡಲಾದ ಅಧಿಕಾರವನ್ನು ಚಲಾಯಿಸುವಲ್ಲಿ, ಕೇಂದ್ರ ಸರ್ಕಾರವು, ಸಾರ್ವಜನಿಕ ಉದ್ದೇಶಕ್ಕಾಗಿ ರಾಷ್ಟ್ರೀಯ ಮೂಲಸೌಕರ್ಯವನ್ನು ಒದಗಿಸಲು ಕರ್ನಾಟಕ ರಾಜ್ಯದಲ್ಲಿ "**ವಿಶೇಷ ರೈಲ್ವೆ ಯೋಜನೆ**" ಎಂದು ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಯೋಜನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸೂಚಿಸಿದೆ.

ಕ್ರ ಸಂ.	ಯೋಜನೆಯ ಹೆಸರು	ಗ್ರಾಮ	ತಾಲೂಕು	ಜಿಲ್ಲೆ
1.	ಶ್ರವಣೂರು, ಮೈಸೂರು – ಹಾಸನ ಮಾರ್ಗದ ಮಂದಗೆರೆ ಮತ್ತು ಹೊಳೆನರಸೀಪುರ ನಿಲ್ದಾಣಗಳ ನಡುವೆ ಕಿ.ಮೀ. 75/345 ರಲ್ಲಿ ಶ್ರವಣೂರಿನಲ್ಲಿ ಹೊಸ ಕ್ರಾಸಿಂಗ್ ನಿಲ್ದಾಣವನ್ನು ಒದಗಿಸುವುದು	ಶ್ರವಣೂರು ಮತ್ತು ಬಂಟರತಲುಲು	ಹೊಳೆನರಸೀಪುರ	ಹಾಸನ
2.	ಚಾಮರಾಜನಗರ ಸ್ಟೇಷನ್ ಯಾರ್ಡ್ ಮರು–ಮಾಡೆಲಿಂಗ್ ಎರಡು ಹೆಚ್ಚುವರಿ ಲೂಪ್ ಲೈನ್‌ಗಳು, ನೀರು ಸರಬರಾಜು ಮತ್ತು ಪಿಎಫ್‌ಟಿಆರ್ ಸೌಲಭ್ಯಗಳೊಂದಿಗೆ	–	ಚಾಮರಾಜನಗರ	ಚಾಮರಾಜನಗರ
3.	ಕವಲಂದೆ, ನಂಜನಗೂಡು ಮತ್ತು ಚಾಮರಾಜನಗರದ ನಡುವೆ ಕಿ.ಮೀ. 39/400 ರಲ್ಲಿ ಕವಲಂದೆ ಹೊಸ ಕ್ರಾಸಿಂಗ್ ನಿಲ್ದಾಣ	ದೊಡ್ಡ ಕವಲಂದೆ	ನಂಜನಗೂಡು	ಮೈಸೂರು

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ /1727

(ಯೋಗಾನಂದ ಬಾಬು ಯಾಗಾನಿ)
ಉಪ ಮುಖ್ಯ ಇಂಜಿನಿಯರ್ / ಜನರಲ್
ಬೆಂಗಳೂರು ಕಂಟೋನ್ಮೆಂಟ್, ನೈಋತ್ಯ ರೈಲ್ವೆ

PUB/199/AAMO/PRB/SWR/2025-26

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ವತಿಯಿಂದ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಈಶ್ವರ ಖಂಡ್ರೆ ಸಸಿ ನೆಟ್ಟರು

'ಕ್ಷೇಮವನ'ದಲ್ಲಿ ವಿಶ್ವ ಪರಿಸರ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರದಲ್ಲಿರುವ ಧರ್ಮಸ್ಥಳ ಕ್ಷೇತ್ರದ 'ಕ್ಷೇಮವನ'ದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಸಸಿ ನೆಟ್ಟರು.

'ಪರಿಸರ ಮಾಲಿನ್ಯ ತಡೆಗಟ್ಟಲು ಸಾರ್ವಜನಿಕರು, ವಿದ್ಯಾರ್ಥಿಗಳಲ್ಲಿ ಅರಿವು, ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಅರಣ್ಯವನ್ನು ಉಳಿಸಿ ಬೆಳೆಸುವಲ್ಲಿ ಹಲವಾರು ಮಹತ್ವದ ಪರಿಸರ ಸಂರಕ್ಷಣ ಪೂರಕ ಕಾರ್ಯಕ್ರಮಗಳನ್ನು ಇಲಾಖೆ ಕೈಗೊಂಡಿದೆ' ಎಂದರು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ ಮಾತನಾಡಿ, 'ಗೃಹ ಬಳಕೆಯ ವಸ್ತುಗಳು, ಸಾರ್ವಜನಿಕ ಸ್ಥಳಗಳಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆ ಮಾಡುವುದನ್ನು ಕಡಿಮೆ ಮಾಡಲು ಹಲವಾರು ಪರಿಸರ ಸ್ನೇಹಿ ವಸ್ತುಗಳನ್ನು ಉತ್ಪಾದನೆ ಮಾಡುವುದು ಇಂದಿನ ಅಗತ್ಯವಾಗಿದೆ' ಎಂದರು.

ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಎಲ್, ಕ್ಷೇಮವನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರೇಂದ್ರ ಶೆಟ್ಟಿ, ನಿರ್ವಹಣಾ ವಿಭಾಗದ ಜಯರಾಮ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಲೋಹಿತ್, ಬಿ.ಆರ್, ಯೋಜನಾ ಸಮಲೋಚಕ ದಯಾನಂದ ಜಿ.ಎನ್, ಬೆಂಗಳೂರು ಗ್ರಾಮಾಂತರ ವಲಯದ ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳಾದ ಸಂತೋಷ್, ಕ್ಷೇಮವನದ ಪರಿಸರ ವಿಭಾಗದ ಶುಭಾಂಶು , ಅರ್ಚನಾ ಮತ್ತಿತರರು ಭಾಗವಹಿಸಿದ್ದರು.

₹4.06 ಕೋಟಿ ಲಾಭ

ಹೊಸಕೋಟೆ: ಇಲ್ಲಿನ ದಿ ಟೌನ್ ಕೋ-ಆಪರೇಟಿವ್ ಬ್ಯಾಂಕ್ 2024-25 ನೇ ಸಾಲಿನಲ್ಲಿ ಮಾರ್ಚ್ 31ರ ಅಂತ್ಯಕ್ಕೆ ₹4.06 ಕೋಟಿ ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಮಾರ್ಚ್ 31ರ ಅಂತ್ಯಕ್ಕೆ ₹10.96 ಕೋಟಿ ಷೇರು ಬಂಡವಾಳ, ₹283.01ಕೋಟಿ ಠೇವಣಿ, ₹181.10 ಕೋಟಿ ಹೂಡಿಕೆಗಳು, ₹347.85 ಕೋಟಿ ದುಡಿಯುವ ಬಂಡವಾಳದೊಂದಿಗೆ ಬ್ಯಾಂಕ್ ಉತ್ತಮ ಆರ್ಥಿಕ ಫಲಿತಾಂಶ ಧಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಬುದ್ಧಗಯಾ ಟ್ರಸ್ಟ್ ಕಾಯ್ದೆ ರದ್ದುಪಡಿಸಿ'

ಆಲ್ ಇಂಡಿಯಾ ಬುದ್ಧಿಸ್ಟ್ ಫೋರಂನ ಆಕಾಶ್ ಲಾಮಾ ಆಗ್ರಹ

ಪ್ರಜಾವಾಣಿ ವಾರ್ತೆ

ನಗರದ ನಾಗಸೇನ ಬುದ್ಧ ವಿಹಾರದಲ್ಲಿ ಗುರುವಾರ ನಡೆದ ಕರ್ನಾಟಕ ಬೌದ್ಧರ ಸಮಾವೇಶದಲ್ಲಿ ಎಂ. ವೆಂಕಟಸ್ವಾಮಿ, ಎನ್. ಮೂರ್ತಿ, ಚಂದ್ರಬೋಧಿ ಪಾಟೀಲ್, ಆಕಾಶ್ ಲಾಮಾ, ಚಂದ್ರ ಕೀರ್ತಿ ಅವರು ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಅಸಾಂವಿಧಾನಿಕ ಬುದ್ಧಗಯಾ ಟ್ರಸ್ಟ್ (ಬಿ.ಟಿ) ಕಾಯ್ದೆ–1949 ರದ್ದುಗೊಳಿಸಬೇಕು. ಬಿಹಾರದ ಬುದ್ಧಗಯಾ ಮಹಾಬೋಧಿ ಮಹಾವಿಹಾರದ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಬೌದ್ಧರಿಗೆ ನೀಡಬೇಕು' ಎಂದು ಆಲ್ ಇಂಡಿಯಾ ಬುದ್ಧಿಸ್ಟ್ ಫೋರಂನ ಪ್ರಧಾನ ಕಾರ್ಯದರ್ಶಿ ಆಕಾಶ್ ಲಾಮಾ ಆಗ್ರಹಿಸಿದರು.

ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಗುರುವಾರ ಆಯೋಜಿಸಿದ್ದ ಕರ್ನಾಟಕ ಬೌದ್ಧರ ಸಮಾವೇಶದಲ್ಲಿ ಅವರು ಮಾತನಾಡಿದರು. 'ಸ್ವಾತಂತ್ರ್ಯ ನಂತರ ಬಿ.ಟಿ–1949 ಕಾಯ್ದೆ ರಚಿಸಲಾಗಿತ್ತು. ಈ ಕಾಯ್ದೆಯಡಿ ಬಿಹಾರದ ಗಯಾ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಾಲ್ವರು ಬೌದ್ಧರು, ನಾಲ್ವರು ಹಿಂದೂಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಬುದ್ಧಗಯಾದ ಮಹಾಬೋಧಿ ಮಹಾವಿಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಇದರಿಂದ ಬೌದ್ಧರಿಗೆ ಅನ್ಯಾಯವಾಗಿದೆ' ಎಂದು ದೂರಿದರು.

'ಸಂವಿಧಾನದ ಪ್ರಕಾರ ಸಿಖ್, ಮುಸ್ಲಿಂ, ಹಿಂದೂ ಸೇರಿ ಎಲ್ಲ ಧಾರ್ಮಿಕ ಕೇಂದ್ರಗಳ ಆಡಳಿತವನ್ನು ಆಯಾ ಧರ್ಮದವರೇ ನಿರ್ವಹಿಸುತ್ತಿದ್ದಾರೆ. ಆದರೆ, ಬೌದ್ಧರ ಧಾರ್ಮಿಕ ಕೇಂದ್ರದಲ್ಲಿ ಹಿಂದೂಗಳು ಆಡಳಿತ ನಡೆಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ದೇಶದಲ್ಲಿ 84 ಸಾವಿರ ಬುದ್ಧ ವಿಹಾರಗಳು ಬೇರೆ ಸಮುದಾಯಗಳ ವಶದಲ್ಲಿವೆ. ಅವುಗಳನ್ನು ಮರಳಿ ಪಡೆದುಕೊಳ್ಳಲು ದೇಶದಾದ್ಯಂತ ಜನಾಂದೋಲನ ರೂಪಿಸಬೇಕು. ಈ ನಿಟ್ಟಿನಲ್ಲಿ ಬುದ್ಧಗಯಾದ ಮಹಾಬೋಧಿ ಮಹಾವಿಹಾರವನ್ನು ಹಿಂದೂಗಳ ಕಪಿಮುಷ್ಠಿಯಿಂದ ಹಿಂಪಡೆದುಕೊಳ್ಳಲು 128 ದಿನಗಳಿಂದ ಧರಣಿ ನಡೆಸುತ್ತಿದ್ದೇವೆ' ಎಂದು ಹೇಳಿದರು.

'ರಾಷ್ಟ್ರಪತಿ ಹಾಗೂ ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಬಿ.ಟಿ ಕಾಯ್ದೆ–1949 ರದ್ದುಗೊಳಿಸಬೇಕು. ಬುದ್ಧ ಗಯಾದಲ್ಲಿ ಬೌದ್ಧ ಧರ್ಮಕ್ಕೆ ಸೇರದವರನ್ನು ಹೊರಗಿಟ್ಟು ಮಹಾಬೋಧಿ ಮಹಾವಿಹಾರ ಆಡಳಿತವನ್ನು ಬೌದ್ಧರಿಗೆ ವಹಿಸಿಕೊಡಬೇಕು' ಎಂದು ಆಗ್ರಹಿಸಿದರು.

ಫೋರಂ ಸಲಹೆಗಾರ ಚಂದ್ರಕೀರ್ತಿ, ಭಾರತೀಯ ಬೌದ್ಧಬೋಧಿ ಮಹಾಸಭಾದ ಅಧ್ಯಕ್ಷ ಚಂದ್ರಬೋಧಿ ಪಾಟೀಲ್, ಉಪಾಧ್ಯಕ್ಷ ಎಂ. ವೆಂಕಟಸ್ವಾಮಿ, ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ, ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಆರ್. ಮೋಹನ್‌ರಾಜ್ ಉಪಸ್ಥಿತರಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೆಟ್ಟಕಲ್ಲಪ್ಪ ವೃತ್ತದ ಬಳಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಪರಿಶೀಲಿಸಿ, ಶೀಘ್ರ ಪೂರ್ಣಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕರಾದ ರವಿ ಸುಬ್ರಮಣ್ಯ, ದಿನೇಶ್ ಗೂಳಿಗೌಡ ಉಪಸ್ಥಿತರಿದ್ದರು

ಹೃದಯಾಘಾತದಿಂದ ಮಂಡಿ ಮಾಲೀಕ ನಿಧನ

ಶ್ರೀನಿವಾಸಪುರ: ಪಟ್ಟಣದ ತಾಜಾ ಫ್ರೂಟ್ ಮಂಡಿ ಮಾಲೀಕ ಮೊಹಮ್ಮದ್ ಶಫಿವುಲ್ಲಾ ಅಲಿಯಾಸ್ ಅನ್ವರ್ (65) ತಾಲ್ಲೂಕಿನ ತೊಟ್ಲಿ ಗ್ರಾಮದ ಮಾವಿನ ತೋಟದಲ್ಲಿ ಮಾವು ಕಟಾವು ಮಾಡುವ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಸುಮಾರು ₹ 30 ಲಕ್ಷ ಮಾವಿನ ವಹಿವಾಟು ಮಾಡಿದ್ದ ಶಫಿವುಲ್ಲಾ, ಬೆಲೆ ಕುಸಿತದಿಂದ ಮಾವಿನ ತೋಟಕ್ಕೆ ಸಿಂಪಡಿಸಿದ್ದ ಕೀಟ ನಾಶಕದ ಬೆಲೆಯೂ ಬಾರದೆ ಸಂಕಷ್ಟಕ್ಕೆ ಸಿಲುಕಿದ್ದರು.

ಹೃದಯಾಘಾತದಿಂದ ಮೃತಪಟ್ಟಿರುವ ವ್ಯಾಪಾರಿಗೆ ಪರಿಹಾರ ನೀಡಬೇಕು' ಎಂದು ವ್ಯಾಪಾರಿಗಳ ಒತ್ತಾಯಿಸಿದ್ದಾರೆ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ಅನಧಿಕೃತ ಬಡಾವಣೆ/ಸಾರ್ವಜನಿಕ ಪ್ರಕಟಣೆ/02/2023–24 ದಿನಾಂಕ: 19–06–2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4–ಎ(1) ರನ್ವಯ ಸರ್ಕಾರದ ಆದೇಶ ಸಂ. ನಅಇ 63 ಟಿಟಿಪಿ 96, ದಿನಾಂಕ: 27–01–1997 ರಲ್ಲಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ.

ಅದರಂತೆ, ನೆಲಮಂಗಲ ತಾಲ್ಲೂಕಿನ ನೆಲಮಂಗಲ ನಗರವನ್ನು ಒಳಗೊಂಡಂತೆ, ಕಸಬಾ, ತ್ಯಾಮಗೊಂಡ್ಲು ಮತ್ತು ಸೋಂಪುರ ಹೋಬಳಿಗಳ ಒಟ್ಟು 205 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿಯ 42 ಗ್ರಾಮಗಳು ಮಾಗಡಿ ತಾಲ್ಲೂಕು, ಸೋಲೂರು ಹೋಬಳಿಯ 31 ಗ್ರಾಮಗಳು ಮತ್ತು ಕುದೂರು ಹೋಬಳಿಯ 03 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು **ಒಟ್ಟು 281 ಗ್ರಾಮಗಳನ್ನು ಒಳಗೊಂಡಿದ್ದು, 585.35 ಚ.ಕಿ.ಮೀ. ವಿಸ್ತೀರ್ಣದ** ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಮಹಾಯೋಜನೆ–2031 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಅನುಸಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳಬೇಕಾಗಿದ್ದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರಡಿಯಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನ ಖರೀದಿಸುವ ಮೊದಲು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆಗೆ ಅನುಮೋದನೆ ಪಡೆದಿರುವ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಆಗಿರುವ ಮತ್ತು ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ/ ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ / ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ನೆಲಮಂಗಲ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ / ಕೈಗಾರಿಕಾ ನಿವೇಶನಗಳಲ್ಲಿ ಕಟ್ಟಲಾದ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ಈ ಪ್ರಾಧಿಕಾರದಿಂದ ಅನುಮೋದನೆಯಾಗದ ವಿನ್ಯಾಸಗಳಲ್ಲಿ ಹಾಗೂ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ನಿವೇಶನಗಳನ್ನು ಬಿಡುಗಡೆ ಪಡೆಯದ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಅಂತಹ ನಿವೇಶನಗಳ ಖರೀದಿಯಿಂದ ಮುಂದೆ ಆಗಬಹುದಾದ ಯಾವುದೇ ತೊಂದರೆಗಳಿಗೆ ನಿವೇಶನ ಖರೀದಿದಾರರದೇ ಸಂಪೂರ್ಣ ಜವಾಬ್ದಾರರಾಗಿರುತ್ತದೆ.

ಈ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಜಾಗದಲ್ಲಿ ರಚಿಸಿರುವ ನಿವೇಶನಗಳನ್ನು ಖರೀದಿಸಬಾರದೆಂದು ಕೋರಲಾಗಿದೆ.

ಅನುಮೋದಿತ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವ ರಸ್ತೆಗಳು, ಉದ್ಯಾನವನ ಹಾಗೂ ಬಯಲು ಪ್ರದೇಶ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗಗಳು ಸಾರ್ವಜನಿಕ ಆಸ್ತಿಗಳಾಗಿದ್ದು, ಅವುಗಳನ್ನು ಅತಿಕ್ರಮಿಸುವುದು, ಅನಧಿಕೃತವಾಗಿ ಬಳಸುವುದು ಕಾನೂನು ಬಾಹಿರವಾಗಿರುತ್ತದೆ. ಆದ ಕಾರಣ ಅವುಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅನಧಿಕೃತವಾಗಿ ಉಪಯೋಗಿಸುತ್ತಿದ್ದಲ್ಲಿ ಕೂಡಲೇ ಸ್ವಯಂ ತೆರವುಗೊಳಿಸಿಕೊಳ್ಳಲು ತಿಳಿಸಲಾಗಿದೆ.

ಈ ಮೇಲ್ಕಂಡ ಮಾಹಿತಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1352/ಅಡ್ವಟೋರ್/2025–26

PUBLIC NOTICE

Notice is hereby given to the general public at large that my clients are interested in purchasing the agricultural immovable property more fully described in the schedule below, the schedule property has been acquired through partition dated 26.09.2023 vide M.R. T8, as per the 'Family Tree' the following persons (a) Syeda Almas Banu, (b) Mohammed Tousifulla, (c) Saphia Taranum, (d) Rabia Imroze, all are majors, and partitioned the property among themselves, now the schedule property stands in the name of SRI. MOHAMMED ARIFULLA, S/o Abdul Ravoof @ Haji Abdul Ravoof, Aged about 70 years, residing at No. 5 A 1 Ravoof. 15th Main, Vasanth Nagar Opp. police quarters, Bangaluru-560001.

Any person or public /banks/financial institutions/private financers either by way of agreement or mortgage having any claim, right, title, interest, lien, or encumbrance of any nature whatsoever over the said schedule property other than the persons mentioned above is hereby requested to submit/file their objection, if any, along with supporting documents, to the undersigned at the address given below within **15 days** from the date of publication of this notice. Failing which, it shall be presumed that there are no claims or objections, and my client shall proceed with the purchase of the said property, free from all encumbrances and liabilities.

SCHEDULE OF THE PROPERTY

All that piece and parcel of immovable property bearing

- Survey No.: 83/4
- Extent: 14 Acres, 36 Guntas
- Situated at: Vadakunte Village, Thyamagondlu Hobli, Nelamangala Taluk, Bangaluru Rural District.
- Boundaries:-

East	Property of Asifulla & KLE institution/Khatija
West	Government Gomala
North	Gopinath Property
South	Government Pond & Property of Faisal.

B.G. RAJASHEKAR, Advocate
Office at, 2/L 5th Cross Rd, Gandhi Nagar, Bengaluru, Karnataka-560009.
Phone:9448368476, 9606261727.

ನಗರದಲ್ಲಿ ಇಂದು

'ವಿಪತ್ತು ಸ್ಥಿತಿಸ್ಥಾಪಕತ್ವ-ಜೀವ ಉಳಿಸುವುದು ಮತ್ತು ಆರೋಗ್ಯ ಸಂರಕ್ಷಿಸಲು ಸಮುದಾಯ ಆಧಾರಿತ ವ್ಯವಸ್ಥೆಗಳ ಅನಿವಾರ್ಯತೆ' ಅಂತರರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಶಾಲಿನಿ ರಜನೀಶ್, ಸೈಯದ್ ಅಟಾ ಹಸ್ನೈನ್, ಡಾ. ಭಗವಾನ್ ಬಿ.ಸಿ., ಡಾ. ಪ್ರತಿಮಾ ಮೂರ್ತಿ, ಎಂ.ಎ. ಬಾಲಸುಬ್ರಹ್ಮಣ್ಯ, ರಾಮ್ ಕೆ. ನಾಯರ್, ಆಯೋಜನೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ, ಸದಾಶಿವನಗರ, ಬೆಳಿಗ್ಗೆ 10ರಿಂದ

ನಾಗರಿಕ ಪ್ರಕ್ರಿಯಾ ಸಂಹಿತೆ ಕಾರ್ಯಾಗಾರ: ಚಾಲನೆ: ಎಚ್.ಕೆ. ಪಾಟೀಲ, ಅತಿಥಿಗಳು: ಅಶೋಕ್ ಬಿ. ಇಂಚಗೇರಿ, ಜಯಕೃಷ್ಣ ಎಸ್.ಎಂ., ಡಿ.ಆರ್. ಪಾಟೀಲ, ಆಯೋಜನೆ ಮತ್ತು ಸ್ಥಳ: ಕೆ.ಎಚ್. ಪಾಟೀಲ ಸ್ಕೂಲ್ ಆಫ್ ಲಾ, ಜ್ಞಾನಭಾರತಿ ಎರಡನೇ ಬ್ಲಾಕ್, ಅಮ್ಮ ಆಶ್ರಮ ರಸ್ತೆ, ಬೆಳಿಗ್ಗೆ 10.30

ಚರಕ ದೇಸಿಯ 'ಕೊಡು-ಕೊಳ್ಳುವರ' ಸಮಾವೇಶ: ಉದ್ಘಾಟನೆ: ಶಿವಾನಂದ ಪಾಟೀಲ, ಸುರೇಂದ್ರ ಬಾಬು, ಅತಿಥಿಗಳು: ಕೆ. ಜ್ಯೋತಿ, ಪವಿತ್ರಾ ಮುದ್ದಯ್ಯ, ಪ್ರಸಾದ್ ಬಿದ್ದಪ್ಪ, ಗೋಪಿಕೃಷ್ಣ, ಪ್ರಸನ್ನ, ಆಯೋಜನೆ: ಚರಕ, ಸ್ಥಳ: ಸಮಗತ ಫೌಂಡೇಷನ್, ನಾಲ್ಕನೇ ಮಹಡಿ, ಕೋಬಾಲ್ಟ್ ಕಟ್ಟಡ, ಚರ್ಚ್‌ಸ್ಟ್ರೀಟ್, ಬೆಳಿಗ್ಗೆ 11ರಿಂದ

ವಿಶ್ವಕರ್ಮ ಸಮಾವೇಶ, ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ: ಸಿದ್ದರಾಮಯ್ಯ, ಅತಿಥಿಗಳು: ಜಿ. ಪರಮೇಶ್ವರ, ವಸಂತಾ ಮುರುಳಿ, ಆಯೋಜನೆ: ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2

ವಿಶ್ವನಾಥ ಸುಂಕಸಾಳ ಅವರು ಅನುವಾದಿಸಿರುವ 'ಶಾಸ್ತ್ರ ಪದ್ಧತಿ' ಪುಸ್ತಕದ ಕುರಿತು ಸಂವಾದ: ಅಧ್ಯಕ್ಷತೆ: ಡಿ. ಮಹೇಂದ್ರ, ಆಯೋಜನೆ ಮತ್ತು ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 3

ತಿಂಗಳ ಉಪನ್ಯಾಸ ಕಾರ್ಯಕ್ರಮ: 'ಅನುವಾದ ಸಾಂಸ್ಕೃತಿಕ ಮುಖ' ಉಪನ್ಯಾಸ: ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

'ಡಾ. ಸಿದ್ಧಯ್ಯ ಪುರಾಣಿಕರ ಜನ್ಮದಿನಾಚರಣೆ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಪ್ರಮೀಳಾ ಗರಡಿ, ಉಪಸ್ಥಿತಿ: ಗೀತಾ ಜಯಂತ್, ದಿಬ್ಬೂರು ಎಸ್. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಎಂಟನೇ ವಿಭಾಗ ಜಯನಗರ, ಸಂಜೆ 5.30

ಯುವ ಸಂಗೀತೋತ್ಸವ: ಕೊಳಲು ವಾದನ: ಅಚ್ಯುತ್ ಎಂ. ಆತ್ರೇಯ, ಪಿಟೀಲು: ಸನತ್‌ಕುಮಾರ್ ನೈಭಿ, ಮೃದಂಗ: ಪ್ರಣವ್ ಎಸ್. ಬಾಲಕೃಷ್ಣ, ಮೋರ್ಸಿಂಗ್: ಕೆ.ಎಂ. ಲಿಖಿತ್, ಗಾಯನ: ಪ್ರಜ್ಞಾ ಅಡಿಗ, ಪಿಟೀಲು: ಪೃಥ್ವಿ ಭಾಸ್ಕರ್, ಮೃದಂಗ: ಪ್ರಹ್ಲಾದ್ ವರಹಸ್ವಾಮಿ, ಮೋರ್ಸಿಂಗ್: ಕಾರ್ತಿಕ್ ಪ್ರಣವ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30ರಿಂದ

'ಬಸ್ತಿ' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಯುವಪಥ, ಸಂಜೆ 7

ಕೃಷ್ಣಾಷ್ಟಕ ಧಾರ್ಮಿಕ ಪ್ರವಚನ: ಅಂಬರೀಶಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಆದಿ ಚುಂಚನಗಿರಿ ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್, ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಉದ್ಘಾಟನೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸ್ವಾಮಿ ಪರಮಾತ್ಮ ಸರಸ್ವತಿ, ಮಾದಾರ ಚನ್ನಯ್ಯ ಸ್ವಾಮೀಜಿ, ಅತಿಥಿಗಳು: ಅಮಿತ್ ಶಾ, ಎಚ್.ಡಿ. ಕುಮಾರಸ್ವಾಮಿ, ಆಯೋಜನೆ: ಆದಿಚುಂಚನಗಿರಿ ವಿಶ್ವವಿದ್ಯಾಲಯ, ಸ್ಥಳ: ಬಿಜಿಎಸ್ ಎಂಸಿಎಚ್ ಆವರಣ, ನಗರೂರು, ಬೆಳಿಗ್ಗೆ 10.30

ನಿರ್ಮಲಾನಂದನಾಥ ಸ್ವಾಮೀಜಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಂತರ್ಜಲ ಅಭಿವೃದ್ಧಿ - ಕರ್ನಾಟಕ ಸಮೃದ್ಧಿ

ಸಾಧನೆಗಳ ಪ್ರಮುಖಾಂಶಗಳು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಉಪಮುಖ್ಯಮಂತ್ರಿಗಳಾದ ಶ್ರೀ ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ, ಸಚಿವರಾದ ಶ್ರೀ ಎನ್.ಎಸ್ ಭೋಸರಾಜು ಅವರ ದೂರದೃಷ್ಟಿಯ ಮುಂದಾಳತ್ವದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳು ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಅಂತರ್ಜಲ ಅಭಿವೃದ್ಧಿ ಹಾಗೂ ನೀರಿನ ನಿರ್ವಹಣೆಯಲ್ಲಿ ರಾಜ್ಯದ ಲಕ್ಷಾಂತರ ರೈತರು ಮತ್ತು ನಾಗರೀಕರಿಗೆ ಪ್ರಯೋಜನಕಾರಿಯಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ

ಸಣ್ಣ ನೀರಾವರಿ ಇಲಾಖೆಯ ಮೂಲಕ ಕೆರೆಗೆಗಳ ಪುನರುಜ್ಜೀವನ, ಚೆಕ್ ಡ್ಯಾಂ, ಬ್ಯಾರೆಜ್‌ಗಳು, ಏತ ನೀರಾವರಿ ಯೋಜನೆಗಳು, ಬಿಸಿಬಿ ಯೋಜನೆಗಳ ಮೂಲಕ ಅಂತರ್ಜಲ ಮರುಪೂರಣ ಉತ್ತೇಜಿಸುತ್ತಿದೆ. ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಕೊಳವೆಬಾವಿಗಳನ್ನು ಅಳವಡಿಸುವ ಮೂಲಕ ಹಿಂದುಳಿದ ವರ್ಗಗಳ ಅಭ್ಯದಯಕ್ಕೆ ಶ್ರಮಿಸುತ್ತಿದೆ.

ರಾಜ್ಯದ ಯುವ ಮನಸ್ಸುಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆಯನ್ನು ಹೆಚ್ಚಿಸುವ ಜೊತೆಯಲ್ಲಿಯೇ, ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅಲ್ಲದೇ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹೊಸದಾಗಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಹೆಚ್.ಎನ್ ವ್ಯಾಲಿ ಹಾಗೂ ಕೆ.ಸಿ ವ್ಯಾಲಿ ಯೋಜನೆಗಳ ಮೂಲಕ ಬೆಂಗಳೂರು ನಗರದ ಸಂಸ್ಕರಿಸಿದ ನೀರನ್ನು ಸುತ್ತಮುತ್ತಲಿನ ಬಯಲು ಸೀಮೆಯ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಮಹತ್ವದ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ. ಈಗಾಗಲೇ 407 ಕೆರೆಗಳನ್ನು ತುಂಬಿಸಲಾಗುತ್ತಿದ್ದು, ವೃಷಭಾವತಿ ವ್ಯಾಲಿ ಯೋಜನೆಯ ಅಡಿಯಲ್ಲಿ 70 ಕೆರೆಗಳನ್ನು ತುಂಬಿಸುವ ಯೋಜನೆ ಪ್ರಗತಿಯಲ್ಲಿದೆ. ಅಂತರ್ಜಲ ವೃದ್ಧಿಯ ಜೊತೆಯಲ್ಲಿಯೇ ಬಯಲು ಸೀಮೆಯ ಜಿಲ್ಲೆಗಳಲ್ಲಿ ಸರ್ಕುಲರ್ ಎಕಾನಮಿ, ಸಂಪನ್ಮೂಲಕ ಪುನರುತ್ಪಾದನೆ ಮತ್ತು ಸುಸ್ಥಿರ ತತ್ವಗಳ ಆಧಾರದ ಮೇಲೆ ಅಭಿವೃದ್ಧಿಯ ಪರ್ವ ಪ್ರಾರಂಭವಾಗಿದೆ.

ಸಚಿವರಾದ
ಶ್ರೀ ಎನ್ ಎಸ್. ಭೋಸರಾಜು
ಮಾರ್ಗದರ್ಶನದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಎರಡು ವರ್ಷಗಳ ಸಾರ್ಥಕ ಸಾಧನೆಯ ಮೈಲಿಗಲ್ಲುಗಳು

ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳನ್ನು ತುಂಬಿಸಿರುವುದರಿಂದ ಅಂತರ್ಜಲ ಮರುಪೂರಣ ದರದಲ್ಲಿ **28.6%** ರಷ್ಟು ಏರಿಕೆ

31,000 ಕ್ಕೂ ಹೆಚ್ಚು ಜಲಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಆಧುನಿಕ ತಂತ್ರಜ್ಞಾನ ಬಳಕೆಯ ಮೂಲಕ ಜಲಮೂಲಗಳ ಡಿಜಿಟಲ್ ಸಮೀಕ್ಷೆ

627 ಚೆಕ್ ಡ್ಯಾಂ/ ಬ್ಯಾರೇಜ್/ ಪಿಕಪ್ ಹಾಗೂ ಕಿಂಡಿ ಅಣೆಕಟ್ಟುಗಳ ಕಾಮಗಾರಿ ಪೂರ್ಣ

1,500 ಎಂಸಿಎಫ್‌ಟಿ ನೀರು ಶೇಖರಣೆ

16 ಏತ ನೀರಾವರಿ ಯೋಜನೆಗಳು ಪೂರ್ಣ

142 ಕೆರೆಗಳು ಭರ್ತಿ

2 ವರ್ಷದಲ್ಲಿ **4,492** ಕೋಟಿ ವೆಚ್ಚದ **6,758** ಕಾಮಗಾರಿಗಳಿಗೆ ಅನುಮೋದನೆ

18,500 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ಅನುಕೂಲ

875 ಎಂಸಿಎಫ್‌ಟಿ ನೀರು ಶೇಖರಣೆ

1,080 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ

ಪಾರದರ್ಶಕ ಆಡಳಿತ

ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಹಸ್ತಕ್ಷೇಪವಿಲ್ಲದೇ, ಪಾರದರ್ಶಕತೆಯಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಹಾಗೆಯೇ ಎಲ್ಲಾ ಗುತ್ತಿಗೆದಾರರಿಗೂ ಬಾಕಿ ಬಿಲ್ಲಿನ ಎದುರಾಗಿ, ಸಮಾನವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಏತ ನೀರಾವರಿ ಯೋಜನೆ

ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳನ್ನು ತುಂಬಿಸಿರುವುದರಿಂದ ಅಂತರ್ಜಲ ಮರುಪೂರಣ ದರದಲ್ಲಿ **28.6%** ರಷ್ಟು ಏರಿಕೆ

ಫ್ಲೋಟಿಂಗ್ ಸೋಲಾರ್ ವಿದ್ಯುತ್ ಉತ್ಪಾದನೆ

ಫ್ಲೋಟಿಂಗ್ ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಸ್ವಾವಲಂಬಿ ಹೆಜ್ಜೆ. 100 ಎಕರೆಗಳಿಗೂ ಹೆಚ್ಚು ವಿಸ್ತಾರ ಹೊಂದಿರುವ **40 ಕೆರೆಗಳಲ್ಲಿ ಫ್ಲೋಟಿಂಗ್ ಸೋಲಾರ್** ಅಳವಡಿಸಲು ಚಿಂತನೆ

ವೃಷಭಾವತಿ ವ್ಯಾಲಿ ಯೋಜನೆ

1,081 ಕೋಟಿ ವೆಚ್ಚದಲ್ಲಿ ವೃಷಭಾವತಿ ವ್ಯಾಲಿ ಯೋಜನೆಯು ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ **70 ಕೆರೆಗಳ ತುಂಬಿಸುವ ಕಾಮಗಾರಿ** ಪ್ರಗತಿಯಲ್ಲಿ

ಹೆಚ್ ಎನ್ ವ್ಯಾಲಿ ಮತ್ತು ಕೆ.ಸಿ ವ್ಯಾಲಿ ಯೋಜನೆಗಳಿಂದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ **407 ಕೆರೆಗಳ ಭರ್ತಿ**

ಪ.ಜಾ/ಪ.ಪಂಗಡದ ವರ್ಗಗಳ ಅಭ್ಯದಯ: ವಿಶೇಷ ಘಟಕ/ ಗಿರಿಜನ ಉಪ ಯೋಜನೆಯ ಅಡಿಯಲ್ಲಿ **5371 ಪ.ಜಾ/ಪ.ಪಂಗಡದ ರೈತ**ರ ಕೃಷಿ ಜಮೀನುಗಳಿಗೆ **ಕೊಳವೆ ಬಾವಿ ಸೌಕರ್ಯ**

1889.8 ಕೋಟಿ ವೆಚ್ಚದಲ್ಲಿ ನದಿಗಳಿಂದ ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳನ್ನು ತುಂಬಿಸಿ ಕೃಷಿ ನಿರ್ವಹಣೆಗೆ ನೆರವು.

ಅಟಲ್ ಭೂಜಲ್ ಯೋಜನೆಯ **1,201.52 ಕೋಟಿ** ವೆಚ್ಚದಲ್ಲಿ ಕಾಮಾಗಾರಿಗಳ ಅನುಷ್ಠಾನ

ಸರ್ವರಿಗೂ ವಿಜ್ಞಾನ

ವಿಜ್ಞಾನ ಮತ್ತು ತಂತ್ರಜ್ಞಾನ

IGNITE - INSPIRE - INNOVATE



ರಾಜ್ಯದ ವಿದ್ಯಾರ್ಥಿಗಳಲ್ಲಿ ಬಾಹ್ಯಾಕಾಶದ ಬಗ್ಗೆ ಕುತೂಹಲ ಮೂಡಿಸುವ ನಿಟ್ಟಿನಲ್ಲಿ, **3 ಕೋಟಿ ರೂ.ಗಳ ಅನುದಾನ**ದಲ್ಲಿ ರಾಜ್ಯದ **833 ಸರ್ಕಾರಿ ವಸತಿ ಶಾಲೆಗಳಿಗೆ ಟೆಲಿಸ್ಕೋಪ್**ಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.

ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಕುತೂಹಲವನ್ನು ಬೆಳೆಸುವ ಉದ್ದೇಶದಿಂದ ಚಟುವಟಿಕೆ ಆಧಾರಿತ ಕಲಿಕೆ ಉತ್ತೇಜಿಸಲು ಸರ್ಕಾರಿ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಗಳ ಸ್ಥಾಪನೆಗೆ ಚಿಂತನೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವುದು.

ಸರ್ವರಿಗೂ ವಿಜ್ಞಾನ

ಸರ್ವರಿಗೂ ವಿಜ್ಞಾನ, ಸುಲಭ ವಿಜ್ಞಾನ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಧ್ಯೇಯವಾಕ್ಯದ ಅಡಿಯಲ್ಲಿ ಉಡುಪಿ, ಹಾವೇರಿ, ಕೊಪ್ಪಳ, ತುಮಕೂರು, ದಾವಣಗೆರೆ ಮತ್ತು ಚಿತ್ತಾಪುರದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆ.

ತಾರಾಲಯ ಸ್ಥಾಪನೆ

ಉತ್ತರ ಕರ್ನಾಟಕದ ಯುವ ಜನರಲ್ಲಿ ಬಾಹ್ಯಾಕಾಶದ ಬಗ್ಗೆ ಕುತೂಹಲ ಮತ್ತು ಆಸಕ್ತಿಯನ್ನು ಮೂಡಿಸುವ ಉದ್ದೇಶದಿಂದ ಗದಗ ನಗರದಲ್ಲಿ ತಾರಾಲಯ ಉದ್ಘಾಟನೆ

ಡಾ. ಎಚ್. ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರ

ಹೊಸೂರು, ವಿದುರಾಶ್ವತ್ಥ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶೈಕ್ಷಣಿಕ, ವೈಜ್ಞಾನಿ, ಸಾಂಸ್ಕೃತಿಕ ತಾಣಗಳನ್ನು ಪ್ರವಾಸೋದ್ಯಮ ಕೇಂದ್ರವಾಗಿ ಮಾರ್ಪಡಿಸಲು ಡಾ. ಎಚ್. ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ.

ವಿಜ್ಞಾನ ಶಿಕ್ಷಣಕ್ಕೆ ಒತ್ತು

ಕೇಂದ್ರ ಹಾಗೂ ರಾಜ್ಯ ಸರಕಾರದ ಅನುದಾನದ ಅಡಿಯಲ್ಲಿ ಯು.ಆರ್ ರಾವ್ ಭವನದ ನಿರ್ಮಾಣ ಹಾಗೂ ಉದ್ಘಾಟನೆ

2552 ಶಾಲೆಗಳಿಗೆ ಸಂಚಾರಿ ಡಿಜಿಟಲ್ ತಾರಾಲಯ ಭೇಟಿ.
15,240 ಖಗೋಳ ಪ್ರದರ್ಶನ.
5.77 ಲಕ್ಷ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಮಾಹಿತಿ.

300 ಕೋಟಿ ವೆಚ್ಚದಲ್ಲಿ ಬೆಂಗಳೂರು ಬಳಿ ಅತ್ಯಾಧುನಿಕ ವಿಜ್ಞಾನ ನಗರ| ಸೈನ್ಸ್ ಸಿಟಿ| ಸ್ಥಾಪನೆಗೆ ಕ್ರಮ

ಸಂಶೋಧನೆ - ಅಭಿವೃದ್ಧಿಗಾಗಿ ಆರ್ಥಿಕ ಬೆಂಬಲ

₹32.90 ಕೋಟಿ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಒದಗಿಸಲಾಗಿದೆ. ಇದು ನಾವೀನ್ಯತೆ ಮತ್ತು ಹೊಸ ಸಂಶೋಧನಾ ಪ್ರಯತ್ನಗಳಿಗೆ ದೊಡ್ಡ ಮಟ್ಟದ ಪ್ರೋತ್ಸಾಹ ನೀಡುತ್ತದೆ.

50 ಕೋಟಿ ರೂಪಾಯಿ ವೆಚ್ಚದಲ್ಲಿ ಬೆಂಗಳೂರು ಸೈನ್ಸ್ ಗ್ಯಾಲರಿ ನಿರ್ಮಾಣ ಹಾಗೂ **10 ಕೋಟಿ** ರೂಪಾಯಿಗಳ ಕಾರ್ಪಸ್ ಫಂಡ್

ಜಾಗತಿಕ ವಿಜ್ಞಾನ ವೇದಿಕೆಗಳು

- 13 ನೇ ಆವೃತ್ತಿಯ ಬೆಂಗಳೂರು ಇಂಡಿಯಾ ನ್ಯಾನೋ ಸಮ್ಮೇಳನ ಆಯೋಜನೆ
- ಜುಲೈ 31 ಮತ್ತು ಆಗಸ್ಟ್ 1, 2025ರಂದು ಬೆಂಗಳೂರು ಇಂಡಿಯಾ ಕ್ವಾಂಟಮ್ ಅಂತರರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿದೆ

DELIVERED AS PROMISED
ಶಕ್ತಿ Free bus service for
Anna Bhagya 10kg
Gruha Jyothi UPTO 200
Gruha Lakshmi ₹2000
Yuva Nidhi ₹3000 ₹1500

The Constitutional Fundamental duty of every Indian is to protect public property and renounce violence

ಸುಭಾಷಿತ

ಪ್ರೇಮವು ಅಧಿಕಾರಕ್ಕಾಗಿ ಕಚ್ಚಾಡುವುದಿಲ್ಲ. ಸೇಡು ತೀರಿಸಿಕೊಳ್ಳುವುದೂ ಇಲ್ಲ.

–ಮಹಾತ್ಮ ಗಾಂಧಿ

ಸಂಪಾದಕೀಯ

ಹೆಲಿಕಾಪ್ಟರ್ ದುರಂತ: ಸುರಕ್ಷತೆ ಅವಗಣನೆಗೆ ಕ್ಷಮೆ ಇರಬಾರದು

ಉತ್ತರಾಖಂಡದಲ್ಲಿ ಜೂನ್ 15ರಂದು ನಡೆದ ಹೆಲಿಕಾಪ್ಟರ್ ಅಪಘಾತಕ್ಕೆ ಪ್ರತಿಕೂಲ ಹವಾಮಾನ, ತಾಂತ್ರಿಕ ಸಮಸ್ಯೆಗಳು ಅಥವಾ ಪೈಲಟ್‌ನ ಲೋಪ ಕಾರಣ ಆಗಿರಬಹುದು. ಈ ಅಪಘಾತದಲ್ಲಿ, ಹೆಲಿಕಾಪ್ಟರ್‌ನಲ್ಲಿ ಇದ್ದ ಏಳೂ ಮಂದಿ ಜೀವ ಕಳೆದುಕೊಂಡಿದ್ದಾರೆ. ಪ್ರಾಕೃತಿಕ ಹಾಗೂ ಮಾನವನಿರ್ಮಿತ ವಿಕೋಪಗಳಿಗೆ ಬಹಳ ಸುಲಭವಾಗಿ ತುತ್ತಾಗುವ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ಹಿಂದೆ-ಮುಂದೆ ಆಲೋಚಿಸದೆ ಉತ್ಸಾಹದಿಂದ ಮುಂದಾಗುತ್ತಿರುವುದು ಈ ಅಪಘಾತಕ್ಕೆ ನಿಜವಾದ ಕಾರಣವೆಂಬಂತೆ ತೋರುತ್ತಿದೆ. 'ಬೆಲ್ 407' ಮಾದರಿಯ ಹೆಲಿಕಾಪ್ಟರ್ ಕೇದಾರನಾಥದಿಂದ ಗುಪ್ತಕಾಶಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಗೌರಿಕುಂಡದ ಬಳಿ ಅಪಘಾತಕ್ಕೆ ಈಡಾಗಿದೆ. ಇದು ಹಿಮಾಲಯ ಪರ್ವತ ಪ್ರದೇಶದಲ್ಲಿ ಪ್ರವಾಸೋದ್ಯಮ ಮೂಲಸೌಕರ್ಯವನ್ನು ಬಹಳ ವೇಗವಾಗಿ ಅಭಿವೃದ್ಧಿಪಡಿಸುವುದರಿಂದ ಆಗುವ ಅಪಾಯಗಳನ್ನು ಇನ್ನೊಮ್ಮೆ ನೆನಪಿಸಿಕೊಟ್ಟಿದೆ. ಕಳೆದ ಆರು ವಾರಗಳ ಅವಧಿಯಲ್ಲಿ ಇದೇ ಮಾರ್ಗದಲ್ಲಿ ಒಟ್ಟು ಐದು ಹೆಲಿಕಾಪ್ಟರ್‌ಗಳು ಅಪಘಾತಕ್ಕೆ ತುತ್ತಾಗಿವೆ. ಈ ಅಪಘಾತಗಳ ಪೈಕಿ ಒಂದರಲ್ಲಿ ಆರು ಮಂದಿ ಜೀವ ಕಳೆದುಕೊಂಡರು. ಇನ್ನುಳಿದ ಅಪಘಾತಗಳು, ಹೆಲಿಕಾಪ್ಟರ್‌ಗಳಲ್ಲಿ ದೋಷ ಕಂಡುಬಂದು ತುರ್ತು ಭೂಸ್ಪರ್ಶ ಮಾಡಿದ ಪ್ರಕರಣಗಳು. ಚಾರ್ ಧಾಮ್ ಪ್ರವಾಸಕ್ಕೆ ಹೆಲಿಕಾಪ್ಟರ್ ಸೇವೆ ಒದಗಿಸುತ್ತಿರುವ ಕ್ರಮವು ಅಧಿಕಾರಿಗಳು ಸುರಕ್ಷತೆ ಬಗ್ಗೆ ಕಾಳಜಿ ವಹಿಸಲ್ಲ ಎಂಬುದನ್ನು ಕೂಡ ಹೇಳುತ್ತಿದೆ.

ಹಿಂದೂಗಳು ಬಹಳ ಪವಿತ್ರ ಎಂದು ಭಾವಿಸಿರುವ ಹಲವು ಸ್ಥಳಗಳು ಈ ಪ್ರದೇಶದಲ್ಲಿ ಇವೆ. ಕೇಂದ್ರ ಸರ್ಕಾರದ ನೆರವು ಪಡೆದು ರಾಜ್ಯ ಸರ್ಕಾರವು ಇಲ್ಲಿ ಯಾವ ನಿಯಂತ್ರಣವೂ ಇಲ್ಲದ ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತಿದೆ. ಈ ಪ್ರವಾಸೋದ್ಯಮವು ಉತ್ತರಾಖಂಡ ರಾಜ್ಯ ಸರ್ಕಾರಕ್ಕೆ ವರಮಾನದ ದೊಡ್ಡ ಮೂಲ. ಆದರೆ ಈ ಪ್ರವಾಸೋದ್ಯಮದ ಜೊತೆ ಒಂದಿಷ್ಟು ರಾಜಕೀಯ ಹಿತಾಸಕ್ತಿಗಳೂ ಅಡಗಿವೆ. ಚಾರ್ ಧಾಮ್ ಮಾರ್ಗ ಹಾಗೂ ಧಾರ್ಮಿಕ ಪ್ರವಾಸೋದ್ಯಮಕ್ಕೆ ಪೂರಕವಾಗಿರುವ ಮೂಲಸೌಕರ್ಯಕ್ಕೆ ಮಾಡಿದ ಹೂಡಿಕೆಗಳನ್ನು ಬಳಸಿಕೊಂಡು ರಾಜಕೀಯ ಲಾಭ ಪಡೆದುಕೊಳ್ಳಲು ಸರ್ಕಾರಗಳು ಬಯಸುತ್ತಿವೆ. ಈ ಕಾರಣಕ್ಕಾಗಿಯೇ ಅವು ತಜ್ಞರ ಮಾತುಗಳಿಗೆ ಕಿವಿಗೊಡುತ್ತಿಲ್ಲ, ಈ ಪ್ರದೇಶದ ಸೂಕ್ಷ್ಮ ಪರಿಸರಕ್ಕೆ ಧಕ್ಕೆ ಉಂಟುಮಾಡುವ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳಬಾರದು ಎಂದು ನ್ಯಾಯಾಲಯಗಳು ನೀಡಿರುವ ಆದೇಶಗಳನ್ನು ಕೂಡ ಅವು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಈ ಪ್ರದೇಶದಲ್ಲಿ ಭೂಕಂಪನದ ಸಾಧ್ಯತೆಗಳು ಹೆಚ್ಚಿವೆ. ಭಾರಿ ಗಾತ್ರದ ಅಣೆಕಟ್ಟುಗಳು, ವಿಶಾಲವಾದ ರಸ್ತೆಗಳು, ಬೃಹತ್ ಹೋಟೆಲ್‌ಗಳನ್ನು ಈ ಭೂಪ್ರದೇಶದಲ್ಲಿ ನಿರ್ಮಿಸುವುದು ಗಂಭೀರ ಸ್ವರೂಪದ ಅಪಾಯವನ್ನು ಸೃಷ್ಟಿಸುತ್ತದೆ. ಹವಾಮಾನ ಬದಲಾವಣೆಯು ಈ ಅಪಾಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. 2013ರಲ್ಲಿ ಆರು ಸಾವಿರಕ್ಕೂ ಹೆಚ್ಚು ಜನರ ಜೀವ ಕಿತ್ತುಕೊಂಡ, ಮೂರು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಪ್ರವಾಸಿಗರನ್ನು ಅಪಾಯಕ್ಕೆ ಸಿಲುಕಿಸಿದ್ದ ಪ್ರವಾಹವು ಅಧಿಕಾರಿಗಳಿಗೆ ಎಚ್ಚರಿಕೆಯ ಕರೆಗಂಟೆಯಂತೆ ಕಂಡಿಲ್ಲ. ಪಟ್ಟಣಗಳಲ್ಲಿ ಬಿರುಕು ಮೂಡಿರುವುದು, ಕಟ್ಟಡಗಳು ಕುಸಿದಿರುವುದು ಹಾಗೂ ಹವಾಮಾನದಲ್ಲಿ ಬದಲಾವಣೆ ಆಗಿರುವುದು ಕೂಡ ಇತರ ಕೆಲವು ಅಪಾಯ ಸೂಚಕಗಳು.

ಹೆಲಿಕಾಪ್ಟರ್ ಸೇವೆ ಒದಗಿಸುವವರಿಗೆ ಗರಿಷ್ಠ ಮಟ್ಟದ ಲಾಭ ಪಡೆಯುವುದೇ ಗುರಿಯಾಗಿದೆ. ಹಾಗಾಗಿ, ಡಿಜಿಸಿಎ ರೂಪಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸುತ್ತಿದ್ದಾರೆ

ಪರ್ವತಗಳಿಂದ ಕೂಡಿರುವ ಭೂಪ್ರದೇಶ ಹಾಗೂ ಹವಾಮಾನದಲ್ಲಿನ ವೈಪರೀತ್ಯಗಳು ವೈಮಾನಿಕ ಮಾರ್ಗಗಳನ್ನು ಅಪಾಯಕಾರಿ ಆಗಿಸಿವೆ. ಸುರಕ್ಷತಾ ಮಾನದಂಡಗಳ ವಿಚಾರದಲ್ಲಿ ಯಾವುದೇ ರಾಜಿಯನ್ನು ಸಹಿಸಿಕೊಳ್ಳಲು ಆಗದು ಎಂದು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಹೆಲಿಕಾಪ್ಟರ್ ಸೇವೆ ಒದಗಿಸುವವರಿಗೆ ಈಚೆಗೆ ಹೇಳಿದ್ದರು. ಹೆಲಿಕಾಪ್ಟರ್ ಕಾರ್ಯಾಚರಣೆಗಳ ಬಗ್ಗೆ ವಿಶೇಷ ಪರಿಶೀಲನೆ ಆಗಬೇಕು ಮತ್ತು ಅವುಗಳ ಕಾರ್ಯಾಚರಣೆಯ ಬಗ್ಗೆ ವಿಶೇಷ ನಿಗಾ ಇರಿಸಬೇಕು ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಆದೇಶಿಸಿತ್ತು. ಆದರೆ ಇಂತಹ ಸೇವೆಗಳನ್ನು ಒದಗಿಸುವವರಿಗೆ ಈ ಬಗೆಯ ಆದೇಶಗಳು ಇಷ್ಟವಾಗುವುದಿಲ್ಲ, ಅವರು ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸುತ್ತಾರೆ, ಲಾಭವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಅವರು ಎಚ್ಚರಿಕೆಯ ಮಾತುಗಳನ್ನು ಉಪೇಕ್ಷಿಸುವುದೂ ಇದೆ. ರಸ್ತೆ ಮಾರ್ಗವೂ ಇಲ್ಲಿ ಅಪಾಯಕಾರಿ ಆಗಿದೆ. ನಿಯಂತ್ರಣ, ಮೇಲ್ವಿಚಾರಣೆ ಮತ್ತು ನಿಗಾದಂತಹ ಪದಗಳು ಬಹಳ ಚೆನ್ನಾಗಿ ಕೇಳಿಸುತ್ತವೆ. ಆದರೆ ವಿವಿಧ ಕಾರಣಗಳಿಂದಾಗಿ ಇವುಗಳನ್ನು ಅನುಷ್ಠಾನಕ್ಕೆ ತರುವುದೇ ಇಲ್ಲ. ರಾಜಕೀಯ ಹಾಗೂ ವರಮಾನದ ಒತ್ತಡಗಳಿಗೆ ಸರ್ಕಾರ ಮಣಿಯಬಾರದು. ಪರಿಸರ ಸುರಕ್ಷತಾ ಕ್ರಮಗಳು ಹೆಚ್ಚಿನ ಮಟ್ಟದಲ್ಲಿ ಬೇಕಿರುವ ಪ್ರದೇಶದಲ್ಲಿ ಜನರ ಜೀವವನ್ನು ಅಪಾಯಕ್ಕೆ ಸಿಲುಕಿಸುವ ಕೆಲಸ ಆಗಬಾರದು.

ದಯೆ ಇರಲಿ...

ನಮ್ಮ ಬಳಿ ಇನ್ನೂ ಎಷ್ಟು ಸಮಯವಿದೆ ಎಂಬುದು ತಿಳಿದಿಲ್ಲ... ಸಮಯವು ಸೂಕ್ಷ್ಮವಾಗಿ ನಿರ್ವಹಿಸಬೇಕಾದುದು. ನಾವೂ ಸದೃಢರೇನಲ್ಲ... ಭವಿಷ್ಯವು ಊಹಾತೀತ... ಹಾಗಾಗಿ, ಪರಸ್ಪರರ ಮೇಲೆ ದಯೆ ಇರಲಿ. ನಿಮ್ಮ ಮೇಲೂ ನಿಮಗೆ ದಯೆ ಇರಲಿ... ನಿಮ್ಮ ಪಾಲಿಗೆ ಅತ್ಯಂತ ಮುಖ್ಯವಾದ ಕೆಲಸಗಳನ್ನು ಮಾಡಿಕೊಳ್ಳಿ...

ರಶ್ಮಿಕಾ ಮಂದಣ್ಣ, ನಟಿ
'ಎಕ್ಸ್'ನಿಂದ

ಕಿಡಿನುಡಿ

ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪುತ್ತಿಲ್ಲ. ಇದು ರಾಜ್ಯದ ಜನರ ಅಭಿಪ್ರಾಯ. ಗ್ಯಾರಂಟಿ ಯೋಜನೆಗಳು ಬೇಡ ಎಂದು ಹೇಳುವುದಿಲ್ಲ. ಗ್ಯಾರಂಟಿಗಳ ಅಬ್ಬರದಲ್ಲಿ ರಾಜ್ಯದ ಅಭಿವೃದ್ಧಿಗೆ ಆದ್ಯತೆ ಸಿಕ್ಕಿಲ್ಲ. ಎರಡು ವರ್ಷಗಳಲ್ಲಿ ಎಷ್ಟು ಶಾಸಕರಿಗೆ ಎಷ್ಟು ಅನುದಾನ ಕೊಟ್ಟಿದ್ದಾರೆ?

ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ
ಮಂಗಳವಾರ, 20-6-2000

● **ಪಿಯುಸಿ: ಮಾನದಂಡ ಆಗಲಿರುವ ಆರು ಅಂಕ**

ಬೆಂಗಳೂರು, ಜೂನ್ 19– ಪಿಯುಸಿ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ 6ಕ್ಕಿಂತ ಕಡಿಮೆ ಅಂಕಗಳು ಬಂದರೆ, ಅಂಥ ವಿದ್ಯಾರ್ಥಿಗೆ ಮೊದಲು ಬಂದ ಶೇಕಡಾವಾರು ಫಲಿತಾಂಶದಲ್ಲಿ ಯಾವುದೇ ವ್ಯತ್ಯಾಸ ಮಾಡದಿರಲು ಪದವಿಪೂರ್ವ ಶಿಕ್ಷಣ ಇಲಾಖೆಯು ನಿರ್ಧರಿಸಿದೆ.

ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಯ ಫಲಿತಾಂಶದಲ್ಲಿ ಹೆಚ್ಚಳ (ಕಡಿತ) ಆಗಬೇಕಿದ್ದರೆ ಮರು ಮೌಲ್ಯಮಾಪನದ ಸಂದರ್ಭದಲ್ಲಿ ವಿದ್ಯಾರ್ಥಿಗೆ ಕನಿಷ್ಠ ಆರು ಅಂಕಗಳು ಹೆಚ್ಚಾಗಿ ಬಂದಿರಲೇಬೇಕು.

75 ವರ್ಷಗಳ ಹಿಂದೆ
ಮಂಗಳವಾರ, 20-6-1950

● **ಹಟಕ್ಕೆ ಸೂಜಿ ನುಂಗಿದ**

ಮದರಾಸ್, ಜೂನ್ 19– ಹೊಟ್ಟೆ ನೋವೆಂದು ಆಸ್ಪತ್ರೆಗೆ ಬಂದು ಸೇರಿದ ಮನುಷ್ಯನೊಬ್ಬನ ಎಕ್ಸ್‌ರೇ ಚಿತ್ರ ತೆಗೆದಾಗ ಆತನ ಕರುಳು ಮತ್ತು ಉದರದಲ್ಲಿ 25–30 ಹೊಲಿಗೆ ಸೂಜಿಗಳು ಕಂಡುಬಂದವು. ಒಂದು ವಾರದಲ್ಲಿ ಆತ 20 ಸೂಜಿಗಳನ್ನು ವಾಂತಿ ಮಾಡಿದ್ದರೂ ಇನ್ನೂ ಕೆಲವು ಕರುಳಿಗೆ ಚುಚ್ಚಿಕೊಂಡಿವೆಯಂತೆ.

ಮ್ಯಾಜಿಸ್ಟ್ರೇಟರ ಮುಂದೆ ಆತ ಮರಣ ಹೇಳಿಕೆ ಕೊಡುತ್ತಾ, ಜೂನ್ 16ನೇ ತಾರೀಕು ಒಬ್ಬನೊಂದಿಗೆ ಆತ ತೋರಿಸಿದ ನಾಲ್ಕು ಸುಲಿದ ಇಡೀ ಬಾಳೆ ಹಣ್ಣುಗಳನ್ನು ಅಗಿಯದೆ ನುಂಗುವುದಾಗಿ ಪಣ ತೊಟ್ಟು, ನಾಲ್ಕನೆಯದನು ನುಂಗುವಾಗ ಸೂಜಿ ಗಂಟಲಿಗೆ ಚುಚ್ಚಿತೆಂದೂ, ಆಗ ತನಗೆ ಮೋಸ ಮಾಡಲಾಗಿದೆ ಎಂಬ ಭಾವನೆ ಬಂದು ಕೂಡಲೇ ತಾನು ಆಸ್ಪತ್ರೆ ಸೇರಿದ್ದಾಗಿ ತಿಳಿಸಿದ್ದಾನೆ.

ಪೊಲೀಸರು ಕೊಲೆ ಆಪಾದನೆ ಮೊಕದ್ದಮೆ ದಾಖಲೆ ಮಾಡಿಕೊಂಡಿದ್ದಾರೆ.

ಸಾಮಾಜಿಕ ಪರಿವರ್ತನೆಗಾಗಿ ಶಿಕ್ಷಣ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಸಾಮಾಜಿಕ ವ್ಯವಸ್ಥೆಯಲ್ಲಿನ ಮುಖ್ಯವಾಹಿನಿ ಸಾಂಪ್ರದಾಯಿಕ ಶಿಕ್ಷಣವು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಬಗೆಯ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯ ಪ್ರಬಲ ನಂಬಿಕೆ ಮತ್ತು ಮೌಲ್ಯಗಳನ್ನು ಬೆಳೆಸುತ್ತದೆ. ಈ ಬೆಳವಣಿಗೆಯು ಸಮಾಜದಲ್ಲಿನ ಯಥಾಸ್ಥಿತಿಯನ್ನು ಮುಂದುವರಿಸುತ್ತದೆ. ಯಥಾಸ್ಥಿತಿಯನ್ನು ಪೋಷಿಸಿ ಮುಂದುವರಿಸುವ ಬಗೆಯ ಶಿಕ್ಷಣ ವ್ಯವಸ್ಥೆಯು ಸಮಾಜದ ಎಲ್ಲ ಜನರಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕನ್ನು ಸಮಾನತೆಯ ನೆಲೆಯಲ್ಲಿ ಸೃಷ್ಟಿಸುವ ಪ್ರಯತ್ನ ಮಾಡುವುದಿಲ್ಲ. ಸಮಾನತೆಯ ಬದಲಾಗಿ ಅಸಮಾನತೆ, ತಾರತಮ್ಯ ಮತ್ತು ದೊಡ್ಡ ಆರ್ಥಿಕ ಕಂದರಗಳನ್ನು ಸೃಷ್ಟಿಸುತ್ತದೆ.

ಕೆಲವೇ ಜನರ ಹಿತಾಸಕ್ತಿಯನ್ನು ಈ ವ್ಯವಸ್ಥೆ ಕಾಪಾಡುತ್ತದೆ ಹಾಗೂ ಸಂವಿಧಾನಗಳು ಪ್ರತಿಪಾದಿಸುವ ವರ್ಗರಹಿತ ಸಮ ಸಮಾಜ ಕಟ್ಟಿಕೊಡುವ ಬದಲು, ವರ್ಗ ಆಧಾರಿತ ಅಸಮಾನತೆಯನ್ನು ಸೃಷ್ಟಿಸಿ ಪೋಷಿಸಲು ನೆರವಾಗುತ್ತದೆ. ಈ ಸಾಮಾಜಿಕ ಅಸಮಾನತೆಯ ಹಿನ್ನೆಲೆಯಲ್ಲಿ, ಶಿಕ್ಷಣವು ಒಂದು ಸಾಂಪ್ರದಾಯಿಕ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಹೇಗೆ ಸಾಧನವಾಗಬಹುದು ಎಂಬುದನ್ನು ವಿಶ್ಲೇಷಿಸುವುದು, ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

ಸಾಮಾಜಿಕ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ ಮತ್ತು ಸ್ವರೂಪವನ್ನು ತಿಳಿಯಲು, ಸಿದ್ಧಾಂತ ಮತ್ತು ಶಿಕ್ಷಣದ ನಡುವಿನ ಸಂಬಂಧವನ್ನು ಪರಿಶೀಲಿಸುವುದು ಅಗತ್ಯ. 'ಸಿದ್ಧಾಂತ'ದ ಪರಿಕಲ್ಪನೆಯನ್ನು ಸರಳವಾಗಿ ಅರ್ಥೈಸುವುದಾದರೆ, ಸಮಾಜದಲ್ಲಿ ಒಂದು ನಿರ್ದಿಷ್ಟ ವರ್ಗದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ನೆರವಾಗುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಂಬಿಕೆ, ಮೌಲ್ಯ ಹಾಗೂ ದೃಷ್ಟಿಕೋನವನ್ನು ಸಾಂಸ್ಥೀಕರಣಗೊಳಿಸುವುದು; ಆ ಮೂಲಕ ಮಾನವ ಮತ್ತು ಸಮಾಜದ ನಡುವಿನ ಸಂಬಂಧಗಳನ್ನು ನಿರೂಪಿಸಿ, ನಿಯಂತ್ರಿಸಿ, ನಿರ್ದೇಶಿಸಲು ವ್ಯವಸ್ಥಿತವಾಗಿ ತಲೆಗೆ ತುಂಬುವ ಪ್ರಕ್ರಿಯೆಯನ್ನು 'ಸಿದ್ಧಾಂತ' ಎನ್ನಬಹುದು. ಇದನ್ನು ಪ್ರತಿಗಾಮಿ ಹಾಗೂ ಪ್ರಗತಿಪರ ಎಂದು ವರ್ಗೀಕರಿಸಬಹುದು.

ಇಂದಿನ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಣ ಎನ್ನುವುದು ವಿದ್ಯಾರ್ಥಿಗಳ ಜೀವನದಲ್ಲಿ ಬಂಡವಾಳಶಾಹಿ ಸಿದ್ಧಾಂತವನ್ನು ಅಳವಡಿಸುವ ಮತ್ತು ಅದನ್ನು ಮುಂದುವರಿಸುವ ಸಾಧನವಾಗುತ್ತದೆ. ವೈಯಕ್ತಿಕತೆ (ಮಿತಿಮೀರಿದ ಸ್ವಾರ್ಥ), ಅನಾರೋಗ್ಯಕರ ಸ್ಪರ್ಧೆ ಹಾಗೂ ಎಲ್ಲ ಮಾನವ ಸಂಬಂಧಗಳನ್ನು ಹಣದ ಸಂಬಂಧಗಳನ್ನಾಗಿ ಮಾರ್ಪಡಿಸುವ ಮೂಲಕ ಗರಿಷ್ಠ ಲಾಭ ಗಳಿಸುವುದು ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿದೆ.

ವೈಯಕ್ತಿಕ ಯಶಸ್ಸು ಮತ್ತು ವೈಫಲ್ಯ ವ್ಯಕ್ತಿಯ ಪ್ರಯತ್ನಗಳಿಂದ ಮಾತ್ರ ಉಂಟಾಗುತ್ತವೆ ಎಂಬ ತಪ್ಪು ನಂಬಿಕೆಯನ್ನು ಹುಟ್ಟು ಹಾಕುವ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆ ಅಲ್ಲಗಳೆಯುತ್ತದೆ. ಸಾಮಾಜಿಕ ಒಳಿತು ಹಾಗೂ ಚಲನಶೀಲ ಸಾಮಾಜಿಕ ಪರಿವರ್ತನೆಯ ಸಾಧನವಾಗಬೇಕಿದ್ದ ಶಿಕ್ಷಣವನ್ನು, ವೈಯಕ್ತಿಕ ಒಳಿತಿನ ನೆಲೆಯಲ್ಲಿ ವ್ಯಾಪಾರದ ಸರಕನ್ನಾಗಿ ಪರಿವರ್ತಿಸುವ ಮೂಲಕ ಅನಾರೋಗ್ಯಕರ ಸ್ಪರ್ಧೆಯನ್ನು ಸೃಷ್ಟಿಸುತ್ತದೆ.

ಈ ಸ್ಪರ್ಧೆ ಗೆಲ್ಲುವವರ ಪಾಲಿಗೆ ಸಕಾರಾತ್ಮಕವಾಗಿರುತ್ತದೆ ಹಾಗೂ ಸೋಲುವವರಿಗೆ ನಕಾರಾತ್ಮಕವಾಗಿ ಪರಿಣಮಿಸುತ್ತದೆ. 'ಸೋಲಲು ಹಣೆಬರಹವೇ ಕಾರಣ' ಎಂಬ ವಿಧಿವಾದವನ್ನು ಮುಂದೊಡ್ಡಿ ಯಥಾಸ್ಥಿತಿಯನ್ನು ಮುಂದುವರಿಸುತ್ತದೆ.

ಬಂಡವಾಳಶಾಹಿ ಆರ್ಥಿಕತೆ ಮತ್ತು ಶಿಕ್ಷಣ ವ್ಯವಸ್ಥೆಯ ನಡುವಿನ ಸಂಬಂಧಗಳ ಕುರಿತಾಗಿ ಹಲವು ತಜ್ಞರು ಕೂಲಂಕಷವಾಗಿ ಅಧ್ಯಯನ ನಡೆಸಿದ್ದಾರೆ. ಮುಖ್ಯವಾಗಿ ತಜ್ಞರಾದ ಬೌಲ್ಸ್ ಮತ್ತು ಗಿಂಟಿಸ್ ಅವರು, 'ಸ್ಕೂಲಿಂಗ್ ಇನ್ ಕ್ಯಾಪಿಟಲಿಸ್ಟ್ ಅಮೆರಿಕ' ಪುಸ್ತಕದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸಾಮಾಜಿಕ ಸಂಬಂಧ ಮತ್ತು ಶಿಕ್ಷಣದ ಸಾಮಾಜಿಕ ಸಂಬಂಧಗಳ ನಡುವೆ ಅಪಾರ ಹೋಲಿಕೆಯನ್ನು ಗುರುತಿಸಿದ್ದಾರೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೇರೂರಿರುವ ಪರಕೀಯತೆ, ಶ್ರೇಣೀಕೃತ ಅಸಮಾನತೆ, ವರ್ಗ ವಿಭಜನೆ (ನಮ್ಮಲ್ಲಿ ಜಾತಿ– ವರ್ಗ ಎರಡೂ ಹೌದು) ಹಾಗೂ ತಾರತಮ್ಯಗಳು ಶಾಲೆಯ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪ್ರತಿಫಲಿಸುತ್ತವೆ. ಬಂಡವಾಳಶಾಹಿಯು ತನ್ನ ಸಾಮಾಜಿಕ ವ್ಯವಸ್ಥೆಯಲ್ಲಿನ ಅಸಮಾನತೆ, ತಾರತಮ್ಯ ಮತ್ತು ಶ್ರೇಣೀಕೃತ ವ್ಯವಸ್ಥೆಯನ್ನು ಶಿಕ್ಷಣದಲ್ಲಿಯೂ ಕಾನೂನುಬದ್ಧಗೊಳಿಸುತ್ತದೆ.

ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಆರ್ಥಿಕ ಸಾಮರ್ಥ್ಯದ ನೆಲೆಯಲ್ಲಿ ಅತ್ಯುತ್ತಮ ಸವಲತ್ತಿನ ಶಾಲೆಗಳ ಮೂಲಕ ಗುಣಾತ್ಮಕ ಶಿಕ್ಷಣವನ್ನು ನೀಡಿ, ಬಹುಜನ ಸಮಾಜದ ಬಹುಸಂಖ್ಯಾತ ವಿದ್ಯಾರ್ಥಿಗಳಿಗೆ ಕಳಪೆ ಗುಣಮಟ್ಟದ ಶಿಕ್ಷಣವನ್ನು ಸಮರ್ಥಿಸುತ್ತದೆ. ಶಿಕ್ಷಣ ಪಡೆಯುವಲ್ಲಿನ ಈ ತಾರತಮ್ಯಕ್ಕೆ ಬಡತನ ಅಥವಾ ಹಣೆಬರಹ ಕಾರಣವೆಂದು ಬಿಂಬಿಸಲಾಗುತ್ತದೆ; ಅಸಮಾನತೆ, ತಾರತಮ್ಯ ಹಾಗೂ ವರ್ಗಾಧಾರಿತ ವ್ಯವಸ್ಥೆ ಪುನರುತ್ಪಾದನೆಗೊಂಡು ಮುಂದುವರಿಯುತ್ತದೆ.

ಆರ್ಥಿಕ ವ್ಯವಸ್ಥೆಯ ಪ್ರಾಬಲ್ಯ ಮತ್ತು ಅಧೀನದ ಸಂಬಂಧಗಳನ್ನು ನಮ್ಮ ಶಾಲೆಗಳು ಶಾಶ್ವತಗೊಳಿಸುತ್ತವೆ. ಶೈಕ್ಷಣಿಕ ಆಡಳಿತಗಾರರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧಗಳೂ ಈ ಶ್ರೇಣೀಕೃತ ವಿಭಜನೆ ಹಾಗೂ ವಿಧೇಯತೆಯನ್ನು ಪುನರುಚ್ಚರಿಸುತ್ತವೆ. ಆ ಮೂಲಕ, ಪ್ರಶ್ನಿಸುವ ಮನೋಭಾವವನ್ನು ಹತ್ತಿಕ್ಕಿ, ವಿಧೇಯತೆಯನ್ನೇ ನಿಯಮವಾಗಿಸುತ್ತವೆ.

> ಸಮಾನತೆ ತಳಹದಿಯ ಸಮ ಸಮಾಜವು ಶಿಕ್ಷಣದಿಂದ ರೂಪುಗೊಳ್ಳಬೇಕು. ಆದರೆ, ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆ ಸಾಮಾಜಿಕ ಅಸಮಾನತೆ ಬಲಗೊಳ್ಳಲು ಪೂರಕವಾಗಿದೆ. ಬಂಡವಾಳಶಾಹಿ ವ್ಯವಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಮೇಲುಗೈ ಪಡೆದಿದ್ದರೂ, ಕ್ರಾಂತಿಕಾರಿ ಗುಣವು ಶಿಕ್ಷಣದಲ್ಲಿ ಸುಪ್ತವಾಗಿ ಇರುವುದನ್ನು ಗಮನಿಸಬೇಕು ಸಾಮಾಜಿಕ ಬದಲಾವಣೆಗೆ ಶಿಕ್ಷಣ ಬಳಕೆಯಾಗಬೇಕು

ಸಮಾಜದಲ್ಲಿ ವರ್ಗ, ಅಸಮಾನತೆ ಮತ್ತು ತಾರತಮ್ಯ ಸಹಜವೆಂದು ಪ್ರತಿಪಾದಿಸುವ ಮೂಲಕ ಯಥಾಸ್ಥಿತಿಯನ್ನು ಒಪ್ಪಿ ಮುಂದುವರಿಸಲು ಅನುಕೂಲವಾಗುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುತ್ತವೆ. ಶಿಕ್ಷಣದಲ್ಲಿನ ಪಠ್ಯಕ್ರಮ ಹಾಗೂ ಪಠ್ಯವಸ್ತು ಕೂಡ ಸ್ಥಾಪಿತ ಮೌಲ್ಯಗಳನ್ನು ರೂಢಿಗತವಾಗಿ ಮುಂದುವರಿಸುತ್ತವೆ. ಇದರಿಂದಾಗಿ, ಸಮಾಜದಲ್ಲಿನ ಅಸಮಾನತೆ, ತಾರತಮ್ಯ, ಅನ್ಯಾಯ ಮತ್ತು ಸಂಪತ್ತಿನ ಉತ್ಪಾದನೆ ಹಾಗೂ ಹಂಚಿಕೆಯಲ್ಲಿನ ಆರ್ಥಿಕ ಅಸಮಾನತೆ ನಿರಾತಂಕವಾಗಿ ಮುಂದುವರಿಯುತ್ತವೆ.

ಬಂಡವಾಳಶಾಹಿ ವ್ಯವಸ್ಥೆಯು ಶಿಕ್ಷಣದಲ್ಲಿ ವರ್ಗಾಧಾರಿತ ಶ್ರೇಣೀಕೃತ ವ್ಯವಸ್ಥೆಯನ್ನು ಪ್ರಜ್ಞಾಪೂರ್ವಕವಾಗಿ ಬಿತ್ತಿ ಬೆಳೆಸುತ್ತದೆ. ಆ ಮೂಲಕ, ಸಮಾಜದಲ್ಲಿನ ಅಸಮಾನತೆಯನ್ನು ಸಮರ್ಥಿಸುತ್ತದೆ. ಉದಾಹರಣೆಗೆ, ಶಿಕ್ಷಣದ ಶ್ರೇಣೀಕೃತ ವ್ಯವಸ್ಥೆಯ ಕೆಳಹಂತದಲ್ಲಿರುವ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಕಳಪೆ ದರ್ಜೆಯ ಖಾಸಗಿ ಶಾಲೆಗಳಲ್ಲಿ ಕನಿಷ್ಠ ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ಶಿಕ್ಷಕರು, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯದ ಕೊರತೆ ಎದ್ದು ಕಾಣಿಸುತ್ತದೆ.

ಇಂಥ ಶಾಲೆಗಳಲ್ಲಿ ಕಲಿಕೆಯ ವಿಧಾನವು ಸಾಮಾನ್ಯವಾಗಿ ಕಂಠಪಾಠ ಆಗಿರುತ್ತದೆ. ಅಲ್ಲಿ ಕಲಿಯುವ ಬಹುತೇಕ ವಿದ್ಯಾರ್ಥಿಗಳು ಅತಿ ಕಡಿಮೆ ಆದಾಯದ ಜವಾನ, ಸಹಾಯಕ ಹಾಗೂ ಗುಮಾಸ್ತರಂತಹ ಉದ್ಯೋಗಗಳಲ್ಲಿ ಭವಿಷ್ಯ ಕಂಡುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಈ ಬಗೆಯ ಉದ್ಯೋಗಗಳು ಕೂಡ ಕ್ಷೀಣಿಸುತ್ತಿವೆ ಹಾಗೂ ಹೊರಗುತ್ತಿಗೆ ಉದ್ಯೋಗಗಳು ಹೆಚ್ಚಾಗುತ್ತಿವೆ.

ಶ್ರೇಣೀಕೃತ ವ್ಯವಸ್ಥೆಯ ಮೇಲ್ತುದಿಯಲ್ಲಿ ಪ್ರತಿಷ್ಠಿತ ಶಾಲೆಗಳನ್ನು ಗುರುತಿಸಬಹುದು. ಸಾಮಾನ್ಯವಾಗಿ ಇವು ಪ್ರೀಮಿಯಂ ಅಥವಾ ಬೋರ್ಡಿಂಗ್ ಶಾಲೆಗಳಾಗಿರುತ್ತವೆ. ವಿಶಿಷ್ಟ ಪಠ್ಯಕ್ರಮವಾದ ಅಂತರರಾಷ್ಟ್ರೀಯ ಬ್ಯಾಕಲೌರಿಯೇಟ್ (ಐಬಿ), ಅಂತರರಾಷ್ಟ್ರೀಯ ಪ್ರೌಢ ಶಿಕ್ಷಣದ ಸಾಮಾನ್ಯ ಪ್ರಮಾಣ ಪತ್ರ (ಐಜಿಸಿಎಸ್‌ಇ), ಅಮೆರಿಕನ್ ಎಂಬೆಸಿ (ಎಪಿ), ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮ ಮಂಡಳಿಗಳೊಂದಿಗೆ ಸಂಯೋಜನೆ ಹೊಂದಿರುತ್ತವೆ. ಈ ಶಾಲೆಗಳು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವುದರ ಜೊತೆಗೆ, ಉನ್ನತ ಶೈಕ್ಷಣಿಕ ಗುಣಮಟ್ಟ ಮತ್ತು ಜಾಗತಿಕ ದೃಷ್ಟಿಕೋನಗಳಿಗೆ ಹೆಸರುವಾಸಿಯಾಗಿವೆ.

ಇಂಥ ಶಾಲೆಗಳಲ್ಲಿ ಸೃಜನಶೀಲ ಚಟುವಟಿಕೆಗಳಿಗೆ ಒತ್ತು ನೀಡಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಮತ್ತು ಅನ್ವಯಿಸಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗುತ್ತದೆ. ಈ ಶಾಲೆಗಳಲ್ಲಿ ಕಲಿತವರು ಸಮಾಜದಲ್ಲಿ ಪ್ರತಿಷ್ಠಿತ ಹಾಗೂ ಆಯಕಟ್ಟಿನ ಜಾಗಗಳನ್ನು ಸುಲಭವಾಗಿ ಆಕ್ರಮಿಸುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆಯನ್ನು ತಿರಸ್ಕರಿಸುವ ಮತ್ತು ಸಮಾನತೆಯ ಸಮ ಸಮಾಜವನ್ನು ಸೃಷ್ಟಿಸುವ ಸಾಮಾಜಿಕ ಪರಿವರ್ತನೆಯ ಗುಣವನ್ನು ಈ ಬಗೆಯ ಶಿಕ್ಷಣ ವ್ಯವಸ್ಥೆಯಿಂದ ಕಾಣಲು ಕಷ್ಟಸಾಧ್ಯ. ಹೀಗಿದ್ದಾಗ್ಯೂ, ಸಾಮಾಜಿಕ ಪರಿವರ್ತನೆ ಮತ್ತು ಅಸಮಾನತೆಯ ವಿರುದ್ಧ ಕಿಡಿ ಹತ್ತಿಸಬಲ್ಲ ಆಂತರಿಕ ಸುಪ್ತ ಶಕ್ತಿಯನ್ನು ಶಿಕ್ಷಣ ಹೊಂದಿದೆ.

ಸಮಾನತೆಯ ಸಮ ಸಮಾಜವನ್ನು ಸೃಷ್ಟಿಸಲು ಜನಾಂದೋಲನ ರೂಪಿಸುವ ಸಾಧನವನ್ನಾಗಿ ಶಿಕ್ಷಣವನ್ನು ಬಳಸಿಕೊಳ್ಳಬಹುದು ಎಂಬ ಅಂಶವನ್ನು ಹಲವು ದಾರ್ಶನಿಕರು ಪ್ರತಿಪಾದಿಸಿದ್ದಾರೆ. ಶಿಕ್ಷಣ ಸ್ಥೂಲವಾಗಿ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಸರಳ ಪ್ರತಿಬಿಂಬವಾಗಿರದೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಕಾಲಕಾಲಕ್ಕೆ ಬದಲಾಯಿಸಬಲ್ಲ ಸುಪ್ತ ಶಕ್ತಿಯನ್ನೂ ಹೊಂದಿದೆ ಎಂದು ಆಂಟೋನಿಯೊ ಗ್ರಾಮ್ಸಿ ಹೇಳುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆಯು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತಾನು ಪ್ರತಿಪಾದಿಸುವ ನಂಬಿಕೆ, ಮೌಲ್ಯ ಮತ್ತು ದೃಷ್ಟಿಕೋನವನ್ನು ಶಿಕ್ಷಣ ವ್ಯವಸ್ಥೆಯನ್ನು ಬಳಸಿ ಕಾನೂನುಬದ್ಧಗೊಳಿಸಲು ತನ್ನ ಪ್ರಾಬಲ್ಯವನ್ನು ಸಾಧನವಾಗಿ ಬಳಸುತ್ತದೆ. ಇದೇ ಸಂದರ್ಭದಲ್ಲಿ ಶಿಕ್ಷಣದಲ್ಲಿ ಇರುವ ಸುಪ್ತ ಕ್ರಾಂತಿಕಾರಿ ಗುಣವು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇರುವ ವೈರುಧ್ಯಗಳನ್ನು ತೆರೆದಿಡುತ್ತದೆ. ಆ ಮೂಲಕ ಹೊಸ ಬಗೆಯ ನಂಬಿಕೆ, ಮೌಲ್ಯ ಹಾಗೂ ಮಾನವ ಸಂಬಂಧಗಳನ್ನು ಪುನರ್ ಸ್ಥಾಪಿಸುವ ಸಲುವಾಗಿ 'ಪ್ರತಿ– ಪ್ರಾಬಲ್ಯ' ಸೃಷ್ಟಿಸಿ, ಸಾಮಾಜಿಕ ಪರಿವರ್ತನೆಗೆ ನಾಂದಿಯಾಗುತ್ತದೆ.

ಸಾಮಾಜಿಕ ಬದಲಾವಣೆಗೆ ಪೂರಕವಾಗಿ ಶಿಕ್ಷಣವನ್ನು ಬಳಸಿಕೊಳ್ಳುವುದಕ್ಕೆ ಮಾದರಿಗಳಾಗಿ ಬಿ.ಆರ್. ಅಂಬೇಡ್ಕರ್, ನೆಲ್ಸನ್ ಮಂಡೇಲಾ, ಜಾರ್ಜ್ ವಾಷಿಂಗ್ಟನ್, ಎಮಿಲಿಯಾನೊ ಜಪಾಟಾ ಅಂಥವರು ನಮಗೆ ಸ್ಫೂರ್ತಿಯಾಗುತ್ತಾರೆ. ಮುಖ್ಯವಾಹಿನಿಯ ಶಿಕ್ಷಣದ ಭಾಗವಾಗಿಯೇ ಇದ್ದು, ಹೊಸ ಬಗೆಯ ನಾಯಕತ್ವ ನೀಡಿದ ಈ ನಾಯಕರು ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿ ಚರಿತ್ರೆಯಲ್ಲಿ ಉಳಿದಿದ್ದಾರೆ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ವಾಚಕರ ವಾಣಿ

ವಾರ್ಷಿಕ ಟೋಲ್ ಪಾಸ್ ಸ್ವಾಗತಾರ್ಹ

ಕೇಂದ್ರ ಸರ್ಕಾರವು ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಪಾಸ್ ವ್ಯವಸ್ಥೆ ರೂಪಿಸಿರುವುದು ಒಳ್ಳೆಯ ನಿರ್ಧಾರ (ಪ್ರ.ವಾ., ಜೂನ್ 19). ಇದರಿಂದ ವಾಹನ ಸವಾರರಿಗೆ ಅನುಕೂಲವಾಗಲಿದೆ. ಜೊತೆಗೆ, ಸರ್ಕಾರವು ಟೋಲ್ ಪ್ಲಾಜಾಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಜನಸ್ನೇಹಿ ಕ್ರಮಕ್ಕೂ ಮುಂದಾಗಬೇಕಿದೆ.

ಹೆದ್ದಾರಿ ಬಳಕೆ ಶುಲ್ಕ ಎಷ್ಟು ಸಂಗ್ರಹವಾಗುತ್ತಿದೆ ಎಂಬುದು ನಾಗರಿಕರಿಗೂ ತಿಳಿಯಬೇಕಿದೆ. ಇದಕ್ಕಾಗಿ ಪ್ಲಾಜಾಗಳ ಪಕ್ಕದಲ್ಲಿ ಡಿಜಿಟಲ್ ಫಲಕ ಅಳವಡಿಸಬೇಕಿದೆ. ಇದರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶ್ವಾಸಾರ್ಹತೆ ಉಳಿಯಲಿದೆ.

ಪ್ರವೀಣ್ ನಾಗಪ್ಪ ಯಲವಿಗಿ, ಮುಂಡಗೋಡು

ನ್ಯಾಯದಾನ ವಿಳಂಬ

ಬೆಳಗಾವಿಯಲ್ಲಿ 30 ವರ್ಷಗಳ ಹಿಂದೆ ಜಮೀನಿನ ಖಾತೆ ಮಾಡಿಕೊಡಲು ₹500 ಲಂಚ ಪಡೆದಿದ್ದ ಗ್ರಾಮ ಲೆಕ್ಕಿಗನಿಗೆ ಸುಪ್ರೀಂ ಕೋರ್ಟ್ ಶಿಕ್ಷೆ ವಿಧಿಸಿದೆ (ಪ್ರ.ವಾ., ಜೂನ್ 19). ದೇಶದಲ್ಲಿನ ನ್ಯಾಯದಾನ ವಿಳಂಬಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ.

ಈ ವಿಳಂಬಕ್ಕೆ ಕಾರಣ ಯಾರು? ನ್ಯಾಯಾಲಯ ಅಂತೂ ಆಗಿರಲಾರದು. ಲೋಕಾಯುಕ್ತ ಸಂಸ್ಥೆಯದ್ದೇ ಇದಕ್ಕೆ ಕಾರಣವಿರಬಹುದು. ತ್ವರಿತಗತಿಯಲ್ಲಿ ಈ ಪ್ರಕರಣದ ತೀರ್ಪು ಹೊರಬಿದ್ದಿದ್ದರೆ ಲಂಚ ಪಡೆಯುವ ಬೇರೆ ಅಧಿಕಾರಿಗಳಿಗೆ ಕನಿಷ್ಠ ಭಯವಾದರೂ ಕಾಡುತ್ತಿತ್ತು. ಈ ಬಗೆಯ ವಿಳಂಬವು ನೌಕರರಲ್ಲಿ ಇನ್ನಷ್ಟು ಭಂಡತನ ಬೆಳೆಸುತ್ತದೆ. ಭ್ರಷ್ಟ ಅಧಿಕಾರಿಗಳು ತಲೆ ಕೆಡಿಸಿಕೊಳ್ಳದೆ ಲಂಚ ಪಡೆಯುವುದನ್ನು ಮುಂದುವರಿಸುತ್ತಾರೆ. ತನಿಖಾ ಸಂಸ್ಥೆಗಳ ಆತ್ಮಾವಲೋಕನಕ್ಕೆ ಇದು ಸಕಾಲ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಸತ್ಯವೋ... ಮಿಥ್ಯವೋ?

ಭಾರತ ಮತ್ತು ಪಾಕಿಸ್ತಾನ ಸೇನೆಗಳ ನಡುವೆ ನೇರ ಮಾತುಕತೆಯ ಬಳಿಕವೇ ಸೇನಾ ಸಂಘರ್ಷಕ್ಕೆ ವಿರಾಮ ಘೋಷಿಸಲಾಯಿತು. ಅಮೆರಿಕದ ಮಧ್ಯಸ್ಥಿಕೆ ಇರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ (ಪ್ರ.ವಾ., ಜೂನ್ 19). ಟ್ರಂಪ್ ಅವರೊಂದಿಗೆ ಮೋದಿ ದೂರವಾಣಿಯಲ್ಲಿ ಈ ಕುರಿತು 35 ನಿಮಿಷ ಮಾತನಾಡಿದ್ದಾರೆಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ನುಡಿದಿದ್ದಾರೆ. ಆದರೆ, 'ಭಾರತ- ಪಾಕ್ ಸಂಘರ್ಷ ನಿಲ್ಲಿಸಿದ್ದು ನಾನೇ' ಎಂದು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ಟ್ರಂಪ್, ಮೋದಿ, ಮಿಸ್ರಿ ಹೇಳಿಕೆಗಳು ಜನರಲ್ಲಿ ಗೊಂದಲ ಮೂಡಿಸಿವೆ. ಯಾರು ಸುಳ್ಳು ಹೇಳುತ್ತಿದ್ದಾರೆ ಎನ್ನುವುದು ತಿಳಿಯದಂತಾಗಿದೆ.

ಮುಳ್ಳೂರು ಪ್ರಕಾಶ್, ಮೈಸೂರು

ಯುವಪೀಳಿಗೆ ದಾರಿ ತಪ್ಪುತ್ತಿದೆ...

'ವಿದ್ಯಾರ್ಥಿ ಜೀವನ, ಆಗಲಿ ನಂದನ' ಕುರಿತ ಎಲ್ಲಪ್ಪ ಜಿ. ಅವರ ಲೇಖನವು (ಪ್ರ.ವಾ., ಜೂನ್ 19) ವಿದ್ಯಾರ್ಥಿ ಜೀವನದ ಮೇಲೆ ಬೆಳಕು ಚೆಲ್ಲಿದೆ. ವಿದ್ಯಾರ್ಥಿಗಳ ಪಾಲಿಗೆ ಪರೀಕ್ಷೆಗಳು ಕೊಠಡಿಯೊಳಗಿನ ಪಾಠಕ್ಕಿಂತ ಅತ್ಯಮೂಲ್ಯ ನಿಜ. ಆದರೆ, ತರಗತಿಗಳಲ್ಲಿ ಹಾಜರಿರದ, ಹಾಜರಿದ್ದೂ ಪಾಠದತ್ತ ಗಮನ ಹರಿಸದ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ ಅದನ್ನೇ ಮಹತ್ವದ ಸಾಧನೆ ಎಂಬಂತೆ ಬೀಗುವುದು ವಿಪರ್ಯಾಸ. ಅವರ ನಿಜವಾದ ಪರೀಕ್ಷೆ ಪ್ರಾರಂಭವಾಗುವುದು ಕಾಲೇಜಿನ ಹೊರಗೆ. ಭವಿಷ್ಯದ ಜೀವನ ಕುರಿತು ಕಲ್ಪನೆಯೂ ಇಲ್ಲದಂತೆ ಮೋಜು- ಮಸ್ತಿಯಲ್ಲಿ ನಿರತರಾದ ಯುವಜನಾಂಗ ದಾರಿ ತಪ್ಪುತ್ತಿರುವುದು ದಿಟ.

ಮೊಬೈಲ್ ಫೋನ್ ಸಂಸ್ಕೃತಿಯು ತರಗತಿಯ ಪಾಠಗಳತ್ತ ಗಮನಹರಿಸುವ ದಿಕ್ಕನ್ನೇ ಬದಲಿಸಿದೆ. ವಿಷಯ ಸಂಗ್ರಹಣೆ, ಪಾಠಗಳಿಗೆ ಪೂರಕವಾಗಿ ಜ್ಞಾನ ಸಂಗ್ರಹಿಸಲು ಈ ಸಾಧನವನ್ನು ಬಳಸುವ ಬದಲು, ಕೇವಲ ಮನರಂಜನೆಗಾಗಿ ಬಳಸುವವರ ಸಂಖ್ಯೆ ಹೆಚ್ಚಿದೆ. ವಿದ್ಯಾರ್ಥಿ ಜೀವನದ ಅಮೂಲ್ಯ ಸಮಯ ಈ ಮೂಲಕ ವ್ಯರ್ಥವಾಗುತ್ತಿರುವುದು ಕಟುಸತ್ಯ. ಈ ಬಗ್ಗೆ ವಿದ್ಯಾರ್ಥಿಗಳು ಗಂಭೀರವಾಗಿ ಚಿಂತನೆ ನಡೆಸಬೇಕಿದೆ.

ಬಸಪ್ಪ ಯ. ಬಂಗಾರಿ, ಬೆಂಗಳೂರು

ಮತ್ತಷ್ಟು ಸಾಧನೆ ಮಾಡಲಿ

ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ 'ಯುವ ಪುರಸ್ಕಾರ'ಕ್ಕೆ ಚಾಮರಾಜನಗರದ ಕವಿ, ವಿಮರ್ಶಕ ಹಾಗೂ ಸಂಶೋಧಕ ಆರ್. ದಿಲೀಪ್ ಕುಮಾರ್ ಭಾಜನರಾಗಿರುವುದು ಹೆಮ್ಮೆಯ ಸಂಗತಿ.

ಪುರಸ್ಕಾರವು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಇದನ್ನು ಅವರು ತಂದೆ- ತಾಯಿ ಮತ್ತು ತಮ್ಮನಿಗೆ ಅರ್ಪಿಸಿದ್ದಾರೆ. ತನಗೆ ಪಾಠ ಮಾಡಿದ ಶಿಕ್ಷಕರ ಕೊಡುಗೆಯನ್ನೂ ಸ್ಮರಿಸಿದ್ದಾರೆ. ಇದು ಬೆಳೆಯುವ ಸಾಹಿತಿಗೆ ಇರುವ ಗುಣವಾಗಿದೆ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲೆಂದು ಆಶಿಸೋಣ.

ರಾಜಶೇಖರಮೂರ್ತಿ ಬೆಳಗನಹಳ್ಳಿ, ಎಚ್.ಡಿ ಕೋಟೆ

ಸಂಗೊಳ್ಳಿ ರಾಯಣ್ಣನ ಹೆಸರು ಸೂಕ್ತ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರಿಡಲು ಚಿಂತನೆ ನಡೆದಿದೆ ಎಂದು ನಿಗಮದ ಅಧ್ಯಕ್ಷ ರಾಜು ಕಾಗೆ ಹೇಳಿರುವುದು ವರದಿಯಾಗಿದೆ. ಈಗಾಗಲೇ, ಬೆಳಗಾವಿಯ ವಿಶ್ವವಿದ್ಯಾಲಯಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರಿಡಲಾಗಿದೆ. ಹಾಗಾಗಿ, ಸಾರಿಗೆ ನಿಗಮಕ್ಕೂ ಚೆನ್ನಮ್ಮನವರ ಹೆಸರಿಡುವ ಬದಲು, ಆಕೆಯ ಬಲಗೈ ಬಂಟನಾಗಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಹೆಸರಿಡುವುದು ಸೂಕ್ತ. ಈ ಬಗ್ಗೆ ನಿಗಮವು ಚಿಂತನೆ ನಡೆಸಲಿ.

ಸಿ. ಪುಟ್ಟಯ್ಯ ಹಂದನಕೆರೆ, ತುಮಕೂರು

ಚುರುಮುರಿ

ಕದನ ವಿರಾಮ!

● ಬಿ.ಎನ್. ಮಲ್ಲೇಶ್

'ಯಾಕೋ ಟೈಂ ಸರಿ ಇಲ್ಲ ಕಣ್ರಲೆ, ಎಲ್ಲ ಕಡೆ ಬರೀ ಬೀಳೋ ಸುದ್ದಿಗಳೇ ಬರ್ತದಾವು...' ಎಂದ ಗುಡ್ಡೆ.

'ಅಂದ್ರೆ? ಅದೇನು ಬಿಡಿಸಿ ಹೇಳು' ಎಂದ ದುಬ್ಬೀರ.

'ವಾರದ ಕೆಳಗೆ ವಿಮಾನ ಬಿತ್ತು, ಆ ಮೇಲೆ ಹೆಲಿಕಾಪ್ಟರ್ ಬಿತ್ತು, ಮೊನ್ನೆ ಸೇತುವೆ ಬಿತ್ತು, ನಿನ್ನೆ ಬಂಡೆ ಸಾಹೇಬ್ರ ಸೈಕಲ್ ಬಿತ್ತು, ಇವತ್ತು ಬಾಂಬ್ ಬೀಳ್ತದಾವು...'

'ವಿಮಾನ ಬೀಳೋ ಬಗ್ಗೆ ಗುರುಗಳು ಮೊದ್ಲೇ ಭವಿಷ್ಯ ನುಡಿದಿದ್ರು, ಅದೇ ತರ ಸೈಕಲ್ ಬೀಳೋ ಬಗ್ಗೆ ಯಾಕೆ ಭವಿಷ್ಯ ಹೇಳ್ಲಿಲ್ಲ...?'

'ಸೈಕಲ್ಲಿಂದ ಬಿದ್ದೋರು ಮತ್ತೆ ಎದ್ರಲ್ಲ, ಹಾಗಾಗಿ ಇದು ಲೆಕ್ಕಕ್ಕೆ ಬರಲ್ಲ ಅನ್ಸುತ್ತೆ...'

'ನಿನ್ತೆಲಿ, ಬಿದ್ದ ಮೇಲೆ ಅವರು ಎಷ್ಟೊತ್ತಿಗೆ ಬಿದ್ರು, ಯಾವ ದಿಕ್ಕಿಗೆ ಬಿದ್ರು, ಬೀಳುವಾಗ ಎಡಗಾಲಿಟ್ರಾ, ಬಲಗೈ ಇಟ್ರಾ, ಇವೆಲ್ಲ ಲೆಕ್ಕಕ್ಕೆ ಬರ್ತಾವು... ಹಲ್ಲಿ ಬಿದ್ದಾಗ ಶಕುನ ಹೇಳಲ್ವಾ? ಹಂಗೇ ಇದೂನೂ...'

'ಲೇಯ್, ಭವಿಷ್ಯ ಗಿವಿಷ್ಯ ನಂಬಬಾರ್ದು ಕಣಲೆ. ಎಲ್ಲೋ ಏನೋ ಆಗೋದನ್ನ ಇಲ್ಲಿ ಕುಂತು ಹೇಳೋಕಾಗುತ್ತಾ? ವಿಜ್ಞಾನ ಒಂದೇ ಸತ್ಯ' ಎಂದ ತೆಪರೇಸಿ.

'ಭವಿಷ್ಯನೂ ಒಂದು ರೀತಿ ವಿಜ್ಞಾನನೇ...' ದುಬ್ಬೀರ ವಾದಿಸಿದ. ಇಬ್ಬರ ನಡುವೆ ಜಗಳ ಶುರುವಾಗಿ ಜೋರಾಯಿತು. ಮಂಜಮ್ಮನ ಚಾದಂಗಡಿ ಮೇಲೆ ಬಾಂಬು, ಕ್ಷಿಪಣಿ ಬೀಳೋದೊಂದು ಬಾಕಿ.

'ಲೇಯ್, ಈಗ ಇಬ್ರೂ ಬಾಯಿ ಮುಚ್ಕಳದಿದ್ರೆ ಇನ್ಮುಂದೆ ನಿಮ್ಗೆ ಉದ್ರಿ ಕೊಡಲ್ಲ...' ಮಂಜಮ್ಮ ಗರಂ ಆದಳು. ಒಂದೇ ಮಾತು, ಇಬ್ರೂ ಗಪ್ ಚುಪ್!

'ವಾರೆವ್ಹಾ ಮಂಜಮ್ಮ, ಜಗಳ ನಿಲ್ಸೋದ್ರಲ್ಲಿ ನೀನು ಟ್ರಂಪ್‌ಗಿಂತ ವಾಸಿ, ನಿನ್ನ ಟ್ರುಂಪಮ್ಮ ಅಂತ ಕರೀಬೋದು' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ದಿಢೀರ್ ಹೃದಯಾಘಾತ: ಯಾಕೆ?

ಜೀವನಶೈಲಿಯಲ್ಲಿ ಆಗಿರುವ ಬದಲಾವಣೆಯೇ ಹೃದಯ ಸಮಸ್ಯೆಗೆ ಕಾರಣ. ಬದುಕಿನಲ್ಲಿ ಶ್ರಮದ ಪಾತ್ರ ಕಡಿಮೆಯಾದಷ್ಟೂ ಹೃದಯ ತಲ್ಲಣಿಸತೊಡಗುತ್ತದೆ.

● ಡಾ.ಲಕ್ಷ್ಮಣ ವಿ.ಎ.

ವಿಶ್ವನಾಥ ವಿ. ಮುಗುತಿ ಎನ್ನುವ 43 ವರ್ಷ ವಯಸ್ಸಿನ ಹಿರಿಯ ಸಿವಿಲ್ ನ್ಯಾಯಾಧೀಶರು ಕಲಬುರಗಿ ನ್ಯಾಯಾಲಯದ ಆವರಣದಲ್ಲಿ ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಹೀಗೆ, ದಿಢೀರ್ ಹೃದಯಾಘಾತದಿಂದ ಸಂಭವಿಸುತ್ತಿರುವ ಸಾವುಗಳು ನಿಯಮಿತವಾಗಿ ವರದಿಯಾಗುತ್ತಲೇ ಇವೆ.

ಕೋವಿಡ್ ನಂತರದ ದಿನಗಳಲ್ಲಿ ಹೃದಯಾಘಾತದಿಂದ ಸಾವಿಗೀಡಾಗುವವರ ಸಂಖ್ಯೆಯಲ್ಲಿ ದಿಢೀರ್ ಏರಿಕೆ ಆಗಿರುವುದನ್ನು ಗಮನಿಸಬಹುದು. ಕೋವಿಡ್‌ನಿಂದ ಬಾಧೆಗೊಳಗಾದವರು ಹಾಗೂ ಕೋವಿಡ್ ನಿಯಂತ್ರಣಕ್ಕಾಗಿ ಲಸಿಕೆ ಪಡೆದವರಲ್ಲಿ ಹೃದ್ರೋಗದ ಸಮಸ್ಯೆಗಳು ಹೆಚ್ಚಾಗಿವೆ ಎಂದು ಕೆಲವರು ಹೇಳುತ್ತಿದ್ದು, ದಿಢೀರ್ ಹೃದಯಾಘಾತಗಳು ಹೆಚ್ಚಾಗುತ್ತಿರುವುದಕ್ಕೆ ಕಾರಣಗಳನ್ನು ಕಂಡುಕೊಳ್ಳುವ ಅಧ್ಯಯನಗಳು ನಡೆಯುತ್ತಿವೆ.

ಕೋವಿಡ್ ಹೊರತಾಗಿಯೂ ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಹೃದಯಾಘಾತದ ಸಾವುಗಳು ಹೆಚ್ಚಾಗಿರುವುದನ್ನು ಅಂಕಿ ಅಂಶಗಳು ದೃಢಪಡಿಸಿವೆ. ಕೆಲವು ವರ್ಷಗಳ ಹಿಂದೆ ವಯಸ್ಸಾದ ತಂದೆ, ತಾಯಂದಿರನ್ನು ಹೃದಯದ ಚಿಕಿತ್ಸೆಗೆಂದು ಮಕ್ಕಳು ಆಸ್ಪತ್ರೆಗೆ ಕರೆತರುತ್ತಿದ್ದರು. ಈಗ ಸ್ವತಃ ತಂದೆ, ತಾಯಿಯರೇ ಮಕ್ಕಳನ್ನು ಹೃದಯದ ತಪಾಸಣೆಗೆ ಕರೆದು ತರುವಂತಾಗಿದೆ. ಇದಕ್ಕೆ ಪ್ರಮುಖ ಕಾರಣಗಳಲ್ಲೊಂದು, ಬಹು ಕ್ಷಿಪ್ರವಾಗಿ ಬದಲಾಗಿರುವ ನಮ್ಮ ಜೀವನಶೈಲಿ.



ಜೀವ ವಿಕಾಸದ ಪಥದುದ್ದಕ್ಕೂ ಮನುಷ್ಯ ಬೇಟೆಯಾಡುತ್ತ, ಕೃಷಿ ಮಾಡುತ್ತ, ಆದಷ್ಟೂ ಬೆವರು ಹರಿಸಿ ತನ್ನ ಅನ್ನವನ್ನು ತಾನೇ ಸಂಪಾದಿಸುತ್ತಿದ್ದ. ಕಠಿಣ ದುಡಿಮೆಯ ಪ್ರಕ್ರಿಯೆಯಲ್ಲಿ ಅವನ ದೇಹವೂ ಶ್ರಮಕ್ಕೆ ತಕ್ಕನಾಗಿ ಸ್ಪಂದಿಸುತ್ತಿತ್ತು. ಆಗಿನವರ ಹೃದಯ, ಯಾವ ಸೋಂಕು ಜಾಡ್ಯಗಳಿಲ್ಲದೆ ಆರೋಗ್ಯಕರವಾಗಿತ್ತು, ಬಲಿಷ್ಠವಾಗಿತ್ತು.

ಪ್ರಸ್ತುತ ಜಗತ್ತು ಓಡುತ್ತಿದೆ. ಅದಕ್ಕೆ ಸಂವಾದಿಯಾಗಿ ಮನುಷ್ಯನೂ ಓಡುತ್ತಿದ್ದಾನೆ. ಈ ಓಟದ ರಿಲೇಯಲ್ಲಿ ಹಿಂದೆ ಬಿದ್ದವನು ಸೋತಂತೆ ಎನ್ನುವ ಪರಿಸ್ಥಿತಿ ಇದೆ. ಆಧುನಿಕ ಜಗತ್ತಿನಲ್ಲಿ ಸೋಲನ್ನು ಮುಂದಿನ ಗೆಲುವಿಗೆ ಸೋಪಾನವೆಂದು ಭಾವಿಸದೆ, ಸಾವಿನ ರೂಪದಲ್ಲಿ ನೋಡಲಾಗುತ್ತದೆ. ಸೋಲಿಗೂ ಸಾವಿಗೂ ವ್ಯತ್ಯಾಸವಿಲ್ಲ ಎನ್ನುವ ಭಾವನೆಯನ್ನು ಸುತ್ತಲಿನ ಜಗತ್ತು ನಮಗೆ ಅರಿವಿಲ್ಲದಂತೆಯೇ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುವಂತೆ ಮಾಡಿದೆ. ಬದುಕು ಕೂಡ ಪೇಟೆಯಲ್ಲಿ ಕೊಂಡುಕೊಳ್ಳುವ ಸರಕುಗಳಲ್ಲೊಂದು ಎನ್ನುವಂತಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಸಾವಿಗೆ ಸನ್ನಿಹಿತವಾಗಲು ಕಷ್ಟಪಡಬೇಕಿಲ್ಲ. ಶ್ರಮವಿಲ್ಲದೆ ಸುಮ್ಮನೆ ಕೂರುವುದೆಂದರೆ ಸಾವಿಗೆ ಸಮೀಪ ಆಗುತ್ತಿದ್ದೇವೆ ಎಂದೇ ಅರ್ಥ. ಸಾವಿನ ಭಯದಲ್ಲಿ ಓಡುತ್ತಿರುವ ನವ ನಾಗರಿಕರು ಹೊರಲಾರದಷ್ಟು ಭಾರವನ್ನು ಹೊತ್ತುಕೊಂಡು ಸಾಗುತ್ತಿದ್ದಾರೆ; ಅನಗತ್ಯ ಜವಾಬ್ದಾರಿಗಳನ್ನು ಹೆಗಲಿಗೇರಿಸಿಕೊಂಡು ಸಾವಿನ ಸುತ್ತಮುತ್ತ ಸುಳಿಯತೊಡಗಿದ್ದಾರೆ. ವಿಶ್ವದ ಅಭಿವೃದ್ಧಿ ಹೊಂದಿರುವ ದೇಶಗಳನ್ನು ಪ್ರಸ್ತುತ ಕಾಡುತ್ತಿರುವುದು ಬಡತನವೋ ಹಸಿವೋ ಅಲ್ಲ, ಸಾಂಕ್ರಾಮಿಕ ಕಾಯಿಲೆಯೂ ಅಲ್ಲ, ಬದಲಾಗಿ ಹೃದಯಾಘಾತ.

ಹೊಸ ಪೀಳಿಗೆಯ ಸವಾಲುಗಳು ಸಂಕೀರ್ಣವಾಗಿವೆ. ಅಸ್ತಿತ್ವದ ಹುಡುಕಾಟ, ಅಸ್ಥಿರ ಆರ್ಥಿಕತೆ, ಮರೀಚಿಕೆಯಾದ ಸುಸ್ಥಿರ ಅಭಿವೃದ್ಧಿ, ಶಿಥಿಲಗೊಂಡ ಕೌಟುಂಬಿಕ ಮೌಲ್ಯಗಳು, ಛಿದ್ರಗೊಂಡ ಕೂಡು ಕುಟುಂಬ– ಇವೆಲ್ಲದರ ಪರಿಣಾಮವಾಗಿ ಸಂತೆಯಲ್ಲಿದ್ದೂ ಒಂಟಿಯಾಗಿರುವ ಪರಿಸ್ಥಿತಿ ಅನೇಕರದ್ದಾಗಿದೆ. ಖಿನ್ನತೆ ಮತ್ತು ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆಯಲ್ಲಿ ಉತ್ತರ ಹುಡುಕುವವರ ಪ್ರಕರಣಗಳು ಹೆಚ್ಚುತ್ತಿರುವುದು ದಿಗಿಲು ಹುಟ್ಟಿಸುವಂತಿದೆ. ವಿಪರ್ಯಾಸವೆಂದರೆ, ಜಗತ್ತನ್ನು ಪೀಡಿಸುವ ಸಾಂಕ್ರಾಮಿಕ ಕಾಯಿಲೆಗಳನ್ನು ವೈದ್ಯ ವಿಜ್ಞಾನ ಒಂದೊಂದಾಗಿ ಮೂಲೋತ್ಪಾಟನೆ ಮಾಡುತ್ತಿದೆ. ಇನ್ನೊಂದೆಡೆ, ಒತ್ತಡ ಸಂಬಂಧಿ ರೋಗಗಳಾದ ಹೃದಯಾಘಾತ, ರಕ್ತದೊತ್ತಡ, ಖಿನ್ನತೆ ಹಾಗೂ ಸಕ್ಕರೆ ಕಾಯಿಲೆಯಂಥ ಸಮಸ್ಯೆಗಳು ವ್ಯಾಪಕವಾಗುತ್ತ ವೈದ್ಯ ಕ್ಷೇತ್ರಕ್ಕೆ ಸವಾಲಾಗಿವೆ.

ಎಂಬತ್ತರ ದಶಕ ಮತ್ತು ನಂತರದಲ್ಲಿ ಹುಟ್ಟಿದ ಪೀಳಿಗೆ ಓದು ಮತ್ತು ಉದ್ಯೋಗದ ಸ್ಪರ್ಧೆಯಲ್ಲಿ ಕೃಷಿ ಹಾಗೂ ಇನ್ನಿತರೆ ದೈಹಿಕ ಚಟುವಟಿಕೆಗಳಿಂದ ವಿಮುಖವಾಯಿತು. ದೈಹಿಕ ಒತ್ತಡದ ಬದಲಾಗಿ ವೇಗದ ಜೀವನಶೈಲಿಯನ್ನು ಅನುಸರಿಸತೊಡಗಿತು. ಸ್ಪರ್ಧೆಗಳಲ್ಲಿ ಹಿಂದೆ ಬೀಳುವ ಭಯ, ದೇಹದ ಸಹಜ ಸ್ರವಿಸುವಿಕೆಯ ಹಾರ್ಮೋನ್‌ಗಳಲ್ಲಿ ಏರುಪೇರು ಮಾಡತೊಡಗಿತು. ಇದೆಲ್ಲದರಿಂದಾಗಿ, ಹೃದಯ ಹೊಸ ಬಗೆಯ ಒತ್ತಡಕ್ಕೆ ಒಳಗಾಯಿತು. ತೀರ ಅಪರಿಚಿತವಾದ ಕ್ಷಿಪ್ರ ಬದಲಾವಣೆಗೆ ಒಗ್ಗಿಕೊಳ್ಳಲು ಹೃದಯ ಹೆಣಗಾಡುತ್ತಿರುವ ಹೊತ್ತಿನಲ್ಲಿ ದಿಢೀರ್ ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಂಡಿವೆ. ಈ ಹೊಸ ಬಗೆಯ ಸಮಸ್ಯೆಗೆ ಮನುಷ್ಯ ಪ್ರಕೃತಿ ತನ್ನಷ್ಟಕ್ಕೆ ತಾನೇ ಹೊಂದಿಕೊಂಡು ಹೋಗಲು ಇನ್ನೂ ನೂರಾರು ವರ್ಷಗಳ ವಿಕಸನದ ಅಗ್ನಿದಿವ್ಯ ಹಾಯಬೇಕು.

ಹೃದ್ರೋಗ ಹಾಗೂ ಇನ್ನಿತರೆ ಜೀವನಶೈಲಿ ಕಾಯಿಲೆಗಳಿಗೆ ತಕ್ಷಣದ ಪರಿಹಾರವೆಂದರೆ, ಜೀವನಶೈಲಿಯನ್ನು ಬದಲಿಸಿಕೊಳ್ಳುವುದು; ದೈಹಿಕ ಚಟುವಟಿಕೆಗಳಿಲ್ಲದೆ ದುರ್ಬಲಗೊಂಡ ಹೃದಯದ ಸ್ನಾಯುಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ನಡೆಸುವುದು. ರಕ್ತ ಮತ್ತು ಆಮ್ಲಜನಕ ಪರಿಚಲನೆಯ ದಾರಿಗಳನ್ನು ಲಘು ವ್ಯಾಯಾಮ ಮತ್ತು ಯೋಗದ ಸಹಾಯದೊಂದಿಗೆ ಹಂತ ಹಂತವಾಗಿ ಬಲಗೊಳಿಸುವುದು ಅಗತ್ಯ. ದೈಹಿಕ ಚಟುವಟಿಕೆಯ ಜೊತೆಗೆ, ಹಿತಮಿತವಾದ ಆಹಾರ ಸೇವನೆ ಅಭ್ಯಾಸವನ್ನು ರೂಢಿಸಿಕೊಳ್ಳುವ ಮೂಲಕ ದಿಢೀರ್ ಸಾವುಗಳನ್ನು ತಡೆಗಟ್ಟಲು ಪ್ರಯತ್ನಿಸಬಹುದು.

ಹೆಚ್ಚುತ್ತಿರುವ ಹೃದಯಾಘಾತಗಳು ಮನುಕುಲಕ್ಕೆ ಪ್ರಕೃತಿ ನೀಡುತ್ತಿರುವ ಎಚ್ಚರಿಕೆಗಳಾಗಿವೆ. ಆ ಎಚ್ಚರಿಕೆಯನ್ನು ಗಮನಿಸಿ, ಕಾರ್ಯಪ್ರವೃತ್ತರಾಗದೇ ಹೋದರೆ ಮತ್ತಷ್ಟು ಅಪಾಯ ತಪ್ಪಿದ್ದಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನೆರವಿಗೆ ಧಾವಿಸದ ಚೀನಾ, ರಷ್ಯಾ, ಉತ್ತರ ಕೊರಿಯಾ; ಮೌನ ವಹಿಸಿದ ಹಮಾಸ್, ಹುಥಿ, ಹಿಜ್ಬುಲ್ಲಾ

ಏಕಾಂಗಿಯಾದ ಇರಾನ್?

ಇಸ್ರೇಲ್–ಇರಾನ್ ಸಂಘರ್ಷ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇರಾನ್ ಮೇಲೆ ಇಸ್ರೇಲ್ ಹಲವು ದಿಕ್ಕಿನಿಂದ ದಾಳಿ ನಡೆಸುತ್ತಿದೆ. ಇರಾನ್ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಅವರ ಎಡಗೈ, ಬಲಗೈನಂತಿದ್ದವರು, ಯುದ್ಧತಂತ್ರಗಳಲ್ಲಿ ನೆರವು ನೀಡುತ್ತಿದ್ದವರು ದಾಳಿಯಲ್ಲಿ ಅಸುನೀಗಿದ್ದಾರೆ. ಅದರೊಂದಿಗೆ ಪರಮಾಪ್ತ ರಾಷ್ಟ್ರಗಳಾದ ರಷ್ಯಾ, ಚೀನಾ, ಉತ್ತರ ಕೊರಿಯಾ ನಿರ್ಣಾಯಕ ಸಂದರ್ಭದಲ್ಲಿ ನೆರವಿಗೆ ಬಂದಿಲ್ಲ. ತಾತ್ವಿಕವಾಗಿ ಮತ್ತು ರಾಜಕೀಯವಾಗಿ ಸದಾ ಬೆಂಬಲ ನೀಡುತ್ತಿದ್ದ ಲೆಬನಾನ್‌ನ ಹಿಜ್ಬುಲ್ಲಾ, ಪ್ಯಾಲೆಸ್ಟೀನ್‌ನ ಹಮಾಸ್, ಯೆಮನ್‌ನ ಹುಥಿ ಮತ್ತು ಇರಾಕ್‌ನ ಶಿಯಾ ಬಂಡುಕೋರ ಸಂಘಟನೆಗಳು ಮೌನವಹಿಸಿವೆ. ಸಮರಾಂಗಣದಲ್ಲಿ ಇರಾನ್ ಏಕಾಂಗಿಯಾದಂತೆ ಕಾಣುತ್ತಿದೆ

ಪ್ರಜಾವಾಣಿ ವಾರ್ತೆ

ವಾರದಿಂದ ನಡೆಯುತ್ತಿರುವ ಇಸ್ರೇಲ್–ಇರಾನ್ ಯುದ್ಧ ತೀವ್ರಗೊಳ್ಳುತ್ತಿದೆ. ಇಸ್ರೇಲ್‌ಗೆ ಬಹಿರಂಗವಾಗಿ ಬೆಂಬಲ ಘೋಷಿಸಿರುವ ಅಮೆರಿಕ ಕೂಡ ಇರಾನ್ ವಿರುದ್ಧ ದಾಳಿಗೆ ಸಜ್ಜಾದಂತೆ ಕಾಣುತ್ತಿದೆ. ಜಿ–7 ಶೃಂಗಸಭೆಯಲ್ಲಿ ಇಸ್ರೇಲ್ ಪರವಾದ ಅಭಿಪ್ರಾಯ ಕೇಳಿ ಬಂದಿದೆ. ಇರಾನ್ ಆಪ್ತರಾದ ರಷ್ಯಾ, ಚೀನಾ ಸೇರಿದಂತೆ ಹಲವು ರಾಷ್ಟ್ರಗಳು ಇಸ್ರೇಲ್ ದಾಳಿಯನ್ನು ಖಂಡಿಸಿವೆಯೇ ವಿನಾ, ಸಮರದಲ್ಲಿ ಇರಾನ್‌ಗೆ ಶಕ್ತಿ ತುಂಬುವ ಕೆಲಸ ಮಾಡಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಪಶ್ಚಿಮ ಏಷ್ಯಾದಲ್ಲಿ ಇರಾನ್‌ಗೆ ಎಲ್ಲ ರೀತಿಯಲ್ಲೂ ಬೆಂಬಲ ನೀಡುತ್ತಿದ್ದ ಹಲವು ಬಂಡುಕೋರ ಸಂಘಟನೆಗಳು ಮಾತನಾಡುತ್ತಿಲ್ಲ. ಹೀಗಾಗಿ, ಯುದ್ಧದಲ್ಲಿ ಇರಾನ್‌ಗೆ ಯಾರಿಂದಲೂ ಬೆಂಬಲ ಸಿಗದಂತೆ ಆಗಿದೆ.

ಬಂಡುಕೋರ ಜಾಲ ಪೋಷಿಸಿದ್ದ ಇರಾನ್: ವೈರಿ ರಾಷ್ಟ್ರಗಳಾದ ಇಸ್ರೇಲ್, ಅಮೆರಿಕದಿಂದ ತನಗೆ ಎದುರಾಗಬಹುದಾದ ಬೆದರಿಕೆಯನ್ನು ಎದುರಿಸಲು ಇರಾನ್ ದಶಕಗಳ ಹಿಂದಿನಿಂದಲೂ ಭಿನ್ನ ದಾರಿಯನ್ನು ಅನುಸರಿಸುತ್ತಿದೆ. ತನ್ನ ನೆರೆ ರಾಷ್ಟ್ರಗಳಲ್ಲಿ ಸಕ್ರಿಯವಾಗಿರುವ ಬಂಡುಕೋರ ಸಂಘಟನೆಗಳನ್ನು ಬೆಂಬಲಿಸಿ, ಅವುಗಳ ಜಾಲವೊಂದನ್ನು ಸೃಷ್ಟಿಸಿದೆ.

ಇಸ್ರೇಲ್‌ನ ಉತ್ತರದ (ಲೆಬನಾನ್) ಗಡಿಯಲ್ಲಿ ರಾಕೆಟ್‌ಗಳ ಸಹಿತ ಆಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ಹಿಜ್ಬುಲ್ಲಾ ಸಂಘಟನೆಯನ್ನು ಪೋಷಿಸುತ್ತಾ ಬಂದಿತ್ತು. ಇರಾಕ್‌ನಲ್ಲಿ ಶಿಯಾ ತೀವ್ರವಾದಿ ಸಂಘಟನೆಗಳೊಂದಿಗೆ ಕೈಜೋಡಿಸಿ, ಇರಾಕ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಈ ಸಂಘಟನೆಗಳ ನಿಗಾದಲ್ಲಿ ಇರಿಸಿತ್ತು. ಪ್ಯಾಲೆಸ್ಟೀನಿನ ಗಾಜಾ ಪಟ್ಟಿಯಲ್ಲಿ ಹಮಾಸ್ ಬಂಡುಕೋರ ಸಂಘಟನೆಗೆ ಬೆಂಬಲ ನೀಡುತ್ತಾ ಇಸ್ರೇಲ್ ಅನ್ನು ಎದುರಿಸುತ್ತಿತ್ತು. ದಕ್ಷಿಣದಲ್ಲಿ ಯೆಮನ್‌ನ ಹುಥಿ ಬಂಡುಕೋರ ಸಂಘಟನೆಯನ್ನೂ ತನ್ನ ವೈರಿ ರಾಷ್ಟ್ರಗಳ ವಿರುದ್ಧ ಬಳಸುತ್ತಿತ್ತು. ಆದರೆ, ಇರಾನಿನ ಲೆಕ್ಕಾಚಾರ ತಪ್ಪಿದಂತೆ ಕಾಣುತ್ತಿದೆ. ವಾರದಿಂದ ನಡೆಯುತ್ತಿರುವ ಯುದ್ಧದಲ್ಲಿ ಈ ಸಂಘಟನೆಗಳು ನೇರವಾಗಿ ಭಾಗಿಯಾಗಿಲ್ಲ.

ಖಮೇನಿ ‘ಆಪ್ತ ವಲಯ’ ನಿರ್ನಾಮ?

ಕಳೆದ ಕೆಲವು ದಿನಗಳಿಂದ ಇಸ್ರೇಲ್ ನಡೆಸುತ್ತಿರುವ ದಾಳಿಯಲ್ಲಿ ಇರಾನ್‌ನ 20ಕ್ಕೂ ಹೆಚ್ಚು ಸೇನಾ ಕಮಾಂಡರ್‌ಗಳು ಮೃತರಾಗಿದ್ದು, ಇಸ್ಲಾಮಿಕ್ ಕ್ರಾಂತಿಕಾರಿ ರಕ್ಷಣಾ ಪಡೆಯ (ಐಆರ್‌ಜಿಸಿ) ಪ್ರಮುಖರೆಲ್ಲಾ ನಿರ್ನಾಮವಾಗಿದ್ದಾರೆ. ಇರಾನ್‌ನ ಪರಮೋಚ್ಚ ನಾಯಕ ಆಯಾತೊಲ್ಲಾ ಖಮೇನಿಯ ಆಡಳಿತದ ಆಧಾರ ಸ್ತಂಭಗಳೇ ಇಲ್ಲದಂತಾಗಿವೆ ಎನ್ನಲಾಗಿದೆ.

ಇರಾನ್ ಸೇನಾಪಡೆಗಳ ಮುಖ್ಯಸ್ಥ ಮೊಹಮ್ಮದ ಬಘೇರಿ, ಐಆರ್‌ಜಿಸಿಯ ಮುಖ್ಯ ಕಮಾಂಡರ್ ಹೊಸೈನ್ ಸಲಾಮಿ, ಗುರಿ ನಿರ್ದೇಶಿತ ಕ್ಷಿಪಣಿ ಯೋಜನೆಯ ಮುಖ್ಯಸ್ಥ ಅಮೀರ್ ಅಲಿ ಹಾಜಿಝಾದಾ ಸೇರಿದಂತೆ ಹಲವು ಪ್ರಮುಖರು ಮೃತರಾಗಿದ್ದಾರೆ. ಇವರೆಲ್ಲಾ ಖಮೇನಿಯ ‘ಆಪ್ತ ವಲಯ’ದವರಾಗಿದ್ದು, ದೇಶದ ಯುದ್ಧತಂತ್ರ, ಆಡಳಿತದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದರು. ಖಮೇನಿ ಸ್ಥಿತಿ ರೆಕ್ಕೆ ಕತ್ತರಿಸಿದ ಹಕ್ಕಿಯಂತಾಗಿದ್ದು, ಸದ್ಯದ ಬಿಕ್ಕಟ್ಟಿನ ಸ್ಥಿತಿಯಲ್ಲಿ ಪ್ರಮುಖರ ಅನುಪಸ್ಥಿತಿ ತೀವ್ರವಾಗಿ ಕಾಡುತ್ತಿದೆ ಎನ್ನಲಾಗಿದೆ. ಖಮೇನಿಗೆ ಸಲಹೆ ಸೂಚನೆ ನೀಡುತ್ತಿದ್ದವರ ಪೈಕಿ ಮೊಜ್ತಾಬಾ ಖಮೇನಿ ಮಾತ್ರ ಉಳಿದಿದ್ದಾರೆ. ಮೊಜ್ತಾಬಾ, ಖಮೇನಿಯ ಮಗನಾಗಿದ್ದು, ಅವರ ಉತ್ತರಾಧಿಕಾರಿ ಎಂದೇ ಕರೆಯಲಾಗುತ್ತಿದೆ.

ಹಮಾಸ್

ಇಸ್ರೇಲ್ ವಿರುದ್ಧ ಸದಾ ಕೆಂಡ ಕಾರುವ ಹಮಾಸ್ ಸಂಘಟನೆ, 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿತ್ತು. ಆ ಬಳಿಕ ಆರಂಭವಾದ ಸಂಘರ್ಷ ಇನ್ನೂ ನಿಂತಿಲ್ಲ. ಕಳೆದ ವಾರ ಇಸ್ರೇಲ್, ಇರಾನ್ ಮೇಲೆ ದಾಳಿ ಆರಂಭಿಸಿದ ಬಳಿಕ, ಹಮಾಸ್ ಸಂಘಟನೆ ಇರಾನ್ ಪರವಾಗಿ ಮಾತನಾಡಿಲ್ಲ. ಇಸ್ರೇಲ್‌ನ ನಿರಂತರ ದಾಳಿಯಿಂದ ಹಮಾಸ್‌ನ ಶಕ್ತಿ ಕುಂದಿದೆ. ಅದರ ಪ್ರಮುಖ ನಾಯಕರು (ಇಸ್ಮಾಯಿಲ್ ಹನಿಯಾ ಮತ್ತು ಯಾಹ್ಯಾ ಸಿನ್ವಾರ್) ಹತ್ಯೆಯಾಗಿದ್ದಾರೆ. ಈಗ ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ಖಲೀದ್ ಮಾಶಲ್ ಕತಾರ್‌ನಲ್ಲಿದ್ದಾನೆ ಎಂದು ಹೇಳಲಾಗಿದೆ. ಈ ಬಂಡುಕೋರ ಸಂಘಟನೆ ಹೊಂದಿದ್ದ ಸುರಂಗ ಮಾರ್ಗ, ನಿಯಂತ್ರಣ ಕೇಂದ್ರಗಳು, ರಾಕೆಟ್ ತಯಾರಿಕಾ ಘಟಕಗಳು ಸೇರಿದಂತೆ ಇನ್ನಿತರ ಸೇನಾ ಮೂಲಸೌಕರ್ಯಗಳು ಇಸ್ರೇಲ್ ದಾಳಿಯಲ್ಲಿ ನಾಶವಾಗಿವೆ .

ಹುಥಿ

ಯೆಮನ್‌ನ ಹುಥಿ ಬಂಡುಕೋರ ಸಂಘಟನೆಯನ್ನೂ ಇರಾನ್ ಬೆಂಬಲಿಸುತ್ತಾ ಬಂದಿದೆ. ಇತ್ತೀಚಿನ ತಿಂಗಳಲ್ಲಿ ಇರಾನ್ ಪರವಾಗಿ ಇಸ್ರೇಲ್‌ನತ್ತ ಹಲವು ಕ್ಷಿಪಣಿ ದಾಳಿ ನಡೆಸಿತ್ತು. ಅಲ್ಲದೇ, ಹೊರ್ಮುಜ್ ಜಲಸಂಧಿ ಮಾರ್ಗವಾಗಿ ಸಾಗುವ ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸುತ್ತಾ, ಅವುಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಾ ಅಮೆರಿಕ ಸೇರಿದಂತೆ ವಿವಿಧ ರಾಷ್ಟ್ರಗಳಿಗೆ ಸರಕು ಸಾಗಾಣಿಕೆಗೆ ತಡೆ ಒಡ್ಡಿತ್ತು. ಈ ವರ್ಷದ ಮಾರ್ಚ್–ಏಪ್ರಿಲ್‌ನಲ್ಲಿ ಅಮೆರಿಕವು ಈ ಸಂಘಟನೆಯ ನೆಲೆಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿ ನಾಶಪಡಿಸಿದ ನಂತರ ಈಗ ಅದು ಸುಮ್ಮನಾಗಿದೆ. ಹುಥಿ ಬಂಡುಕೋರರು ಈಗಲೂ ಇರಾನ್ ಅನ್ನು ಬೆಂಬಲಿಸುತ್ತಿದ್ದರಾದರೂ, ಅವರಿನ್ನೂ ಈ ಯುದ್ಧದ ಭಾಗವಾಗಿಲ್ಲ.



ಆಯಾತೊಲ್ಲಾ ಖಮೇನಿ

ಹಿಜ್ಬುಲ್ಲಾ

ಇಸ್ರೇಲ್‌ನ ನೆರೆರಾಷ್ಟ್ರ ಲೆಬನಾನ್‌ನಲ್ಲಿ ಸಕ್ರಿಯವಾಗಿರುವ ಶಿಯಾ ಬಂಡುಕೋರ ಸಂಘಟನೆ ಹಿಜ್ಬುಲ್ಲಾ ಇರಾನ್‌ನ ಪರಮಾಪ್ತ. ಇಸ್ರೇಲ್–ಇರಾನ್ ಘರ್ಷಣೆಯಲ್ಲಿ ಇದು ಮೌನವಾಗಿದೆ. ಬಲಿಷ್ಠವಾಗಿದ್ದ ಈ ಬಂಡುಕೋರರ ಸಾಮರ್ಥ್ಯ ಈಗ ಕುಂದಿಹೋಗಿದೆ. ಕಳೆದ ವರ್ಷ ಈ ಸಂಘಟನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ್ದ ಎರಡು ತಿಂಗಳ ಯುದ್ಧದಲ್ಲಿ ಹಿಜ್ಬುಲ್ಲಾ ಬಂಡುಕೋರರಿಗೆ ಸೇರಿದ ಶಸ್ತ್ರಾಸ್ತ್ರ, ಸಂವಹನ, ನಿಯಂತ್ರಣ ಕೇಂದ್ರಗಳು ಧ್ವಂಸಗೊಂಡಿವೆ. ಈಗ ಲೆಬನಾನ್ ಸರ್ಕಾರವು ಇಸ್ರೇಲ್–ಇರಾನ್ ಸಂಘರ್ಷದಲ್ಲಿ ಭಾಗಿಯಾಗುವುದರ ವಿರುದ್ಧ ಸಂಘಟನೆಯ ಮುಖಂಡರನ್ನು ಎಚ್ಚರಿಸಿದೆ.

ಸಿರಿಯಾದಿಂದಲೂ ಸಿಕ್ಕಿಲ್ಲ ಬೆಂಬಲ

ಸಿರಿಯಾದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಬಷರ್ ಅಲ್–ಅಸಾದ್ ಆಡಳಿತ ಸದಾ ಇರಾನ್ ಬೆನ್ನಿಗೆ ನಿಲ್ಲುತ್ತಿತ್ತು. ಹಿಜ್ಬುಲ್ಲಾ ಸಂಘಟನೆಗೆ ಅಗತ್ಯವಾದ ನೆರವನ್ನೂ ನೀಡುತ್ತಿತ್ತು. ಕಳೆದ ವರ್ಷ ಇಸ್ರೇಲ್–ಹಿಜ್ಬುಲ್ಲಾ ಘರ್ಷಣೆ ಮುಗಿದ ಎರಡು ವಾರಗಳಲ್ಲಿ ಸಿರಿಯಾದಲ್ಲಿ ಅಸಾದ್ ಆಡಳಿತ ಪತನಗೊಂಡಿತ್ತು. ಹೊಸ ಸರ್ಕಾರ ಮತ್ತು ಇರಾನಿನ ಸಂಬಂಧ ಮೊದಲಿನಂತಿಲ್ಲ. ಹಾಗಾಗಿ, ಅಲ್ಲಿಂದಲೂ ನೆರವು ಸಿಗುತ್ತಿಲ್ಲ.

ಇರಾಕ್ ತಟಸ್ಥ

ಇರಾಕಿನಲ್ಲಿರುವ ಶಸ್ತ್ರಸಜ್ಜಿತ ಶಿಯಾ ತೀವ್ರವಾದಿ ಸಂಘಟನೆಗಳು ಇರಾನ್ ಜತೆ ಉತ್ತಮ ಬಾಂಧವ್ಯ ಹೊಂದಿವೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಮಧ್ಯಪ್ರವೇಶಿಸಿದರೆ, ದಾಳಿ ನಡೆಸುವುದಾಗಿ ಕತೇಬ್ ಹಿಜ್ಬುಲ್ಲಾ ಎಂಬ ಸಂಘಟನೆ ಎಚ್ಚರಿಸಿದೆ. ಆದರೆ, ಇರಾಕ್ ಸರ್ಕಾರ ತಟಸ್ಥ ನಿಲುವನ್ನು ಹೊಂದಿದ್ದು, ಯಾವುದೇ ದಾಳಿಗೆ ತನ್ನ ನೆಲವನ್ನು ಬಳಸದಂತೆ ಇರಾನ್ ಆಡಳಿತವನ್ನು ಕೇಳಿಕೊಂಡಿದೆ ಎಂದು ವರದಿಯಾಗಿದೆ.

ನೆರವಿಗೆ ಬಾರದ ‘ಕ್ರಿಂಕ್’ ಗುಂಪು

ಇರಾನ್‌ನ ‘ಮಿತ್ರರಾಷ್ಟ್ರಗಳು’ (‘ಕ್ರಿಂಕ್’ ಗುಂಪು) ಎಂದೇ ಹೆಸರಾಗಿರುವ ರಷ್ಯಾ, ಚೀನಾ ಮತ್ತು ಉತ್ತರ ಕೊರಿಯಾ ಕೂಡ ಇಸ್ರೇಲ್ ದಾಳಿಯನ್ನು ಖಂಡಿಸುವುದಕ್ಕಷ್ಟೇ ಸೀಮಿತವಾಗಿದ್ದು, ಇರಾನ್‌ಗೆ ಬಹಿರಂಗ ಬೆಂಬಲವನ್ನು ಘೋಷಿಸಿಲ್ಲ. ಉಕ್ರೇನ್ ವಿರುದ್ಧ ಯುದ್ಧದಲ್ಲಿ ರಷ್ಯಾಗೆ ಇರಾನ್ ಶಸ್ತ್ರಾಸ್ತ್ರ ಪೂರೈಸಿದೆ ಎಂದೇ ಪಶ್ಚಿಮದ ರಾಷ್ಟ್ರಗಳು ಆರೋಪ ಮಾಡಿದ್ದವು. ಜನವರಿಯಲ್ಲಿ ಎರಡೂ ರಾಷ್ಟ್ರಗಳ ನಡುವೆ ಹೊಸ ಒಪ್ಪಂದಗಳು ಕೂಡ ಏರ್ಪಟ್ಟಿದ್ದವು. ಮೇನಲ್ಲಿ ಇರಾನ್, ಯುರೇಷಿಯ ಆರ್ಥಿಕ ಒಕ್ಕೂಟವನ್ನೂ ಸೇರಿತ್ತು. ಆದರೂ ಇಸ್ರೇಲ್, ಇರಾನ್ ಮೇಲೆ ದಾಳಿ ಮಾಡಿದಾಗ ರಷ್ಯಾ ಅದರ ನೆರವಿಗೆ ಧಾವಿಸಿಲ್ಲ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಇಸ್ರೇಲ್‌ನ ‘ಅಪ್ರಚೋದಿತ ದಾಳಿ’ಯನ್ನು ಖಂಡಿಸುವುದಕ್ಕೆ ಮಾತ್ರ ಅವರ ‘ನೆರವು’ ಸೀಮಿತವಾಗಿದೆ. ಜಾಗತಿಕವಾಗಿ ಶಕ್ತಿಶಾಲಿ ರಾಷ್ಟ್ರವಾದ ರಷ್ಯಾ, ಈ ಸಂದರ್ಭವನ್ನು ಹೇಗೆ ತನ್ನ ಪ್ರಭಾವ ವೃದ್ಧಿಗೆ ಬಳಸಿಕೊಳ್ಳಬಹುದು ಎನ್ನುವ ಲೆಕ್ಕಾಚಾರದಲ್ಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಮೆರಿಕದ ನಿರ್ಬಂಧದ ನಂತರ ಇರಾನ್ ಇಂಧನಕ್ಕೆ ಅತಿ ದೊಡ್ಡ ಗ್ರಾಹಕನಾಗಿ ಹೊರಹೊಮ್ಮಿದ್ದು ಚೀನಾ. 2023ರಲ್ಲಿ ಇರಾನ್, ಶಾಂಘೈ ಸಹಕಾರ ಸಂಘಟನೆ ಸೇರಿದ ಮೇಲೆ ಎರಡೂ ರಾಷ್ಟ್ರಗಳ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಗೊಂಡಿತ್ತು. ಆದರೆ, ಇಸ್ರೇಲ್ ದಾಳಿಯಿಂದ ಇರಾನ್ ಕಂಗೆಟ್ಟಿದ್ದರೂ, ಚೀನಾ ಅದರ ನೆರವಿಗೆ ನಿಂತಿಲ್ಲ. ‘ಇರಾನ್‌ನ ಸಾರ್ವಭೌಮತೆ, ರಕ್ಷಣೆ ಮತ್ತು ಪ್ರಾದೇಶಿಕ ಸಮಗ್ರತೆಯ ಮೇಲೆ ನಡೆದ ದಾಳಿ’ಯನ್ನು ಚೀನಾ ಖಂಡಿಸಿದೆಯೇ ವಿನಾ, ಅದರಾಚೆಗೆ ಯಾವುದೇ ನೆರವು ನೀಡಿಲ್ಲ. ಅದರ ಬದಲಿಗೆ ಸಂಘರ್ಷದ ಸಂದರ್ಭದಲ್ಲಿ ಶಾಂತಿ ಮೂಡಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರಭಾವಿ ಶಕ್ತಿ ಎನ್ನಿಸಿಕೊಳ್ಳಲು ಅವಕಾಶ ಸಿಗುವುದೇ ಎಂದು ಅದು ಕಾಯುತ್ತಿದೆ ಎನ್ನಲಾಗಿದೆ. ಉತ್ತರ ಕೊರಿಯಾದ್ದೂ ಇದೇ ಕಥೆ. ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮಕ್ಕೆ ನೆರವು ನೀಡಿದ್ದೇ ಉತ್ತರ ಕೊರಿಯಾ ಎನ್ನುವ ಗುಮಾನಿ ಕೆಲವು ರಾಷ್ಟ್ರಗಳಲ್ಲಿದೆ. ಅಷ್ಟು ಆಪ್ತವಾಗಿದ್ದರೂ ಉತ್ತರ ಕೊರಿಯಾ ಇರಾನ್‌ಗೆ ಸಹಾಯ ಹಸ್ತ ಚಾಚಿಲ್ಲ.

ಆಧಾರ: ಪಿಟಿಐ, ದಿ ಇಂಟರ್‌ನ್ಯಾಷನಲ್ ನ್ಯೂಯಾರ್ಕ್ ಟೈಮ್ಸ್, ಮಾಧ್ಯಮ ವರದಿಗಳು

ಇಸ್ರೇಲ್ ನಡೆಸಿದ ದಾಳಿಯಲ್ಲಿ ಹಾನಿಗೀಡಾದ ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ಸ್ಥಳೀಯರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು –ಎಎಫ್‌ ಪಿ ಚಿತ್ರ

ರಾಷ್ಟ್ರೀಯ

ನ್ಯಾ.ವರ್ಮಾ ತಪ್ಪಿತಸ್ಥ: ಸಮಿತಿ

ಒಂದನೇ ಪುಟದಿಂದ...

ಅಲ್ಲದೇ, ನಗದನ್ನು ಕೊಠಡಿಯಿಂದ ಹೊರತೆಗೆದವರು ಯಾರು ಎಂಬುದರ ಬಗ್ಗೆ ಸಮಿತಿ ವಿಚಾರಣೆ ನಡೆಸಿದೆ. ಈ ವೇಳೆ ನಿವಾಸದಲ್ಲಿದ್ದ ವರ್ಮಾ ಅವರ ಪುತ್ರಿಯನ್ನೂ ವಿಚಾರಣೆಗೆ ಒಳಪಡಿಸಿದೆ. ಘಟನೆಯಿಂದಾಗಿ ಆಕೆ ಭಯಭೀತಳಾಗಿದ್ದಳು ಎಂಬುದನ್ನು ವರದಿ ಉಲ್ಲೇಖಿಸಿದೆ.

ಏನಿದು ಪ್ರಕರಣ: 2025ರ ಮಾರ್ಚ್ 14ರಂದು ರಾತ್ರಿ 11.35ರ ವೇಳೆಗೆ ವರ್ಮಾ ಅವರ ನಿವಾಸದಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಈ ವೇಳೆ ನಗದು ಪತ್ತೆಯಾದ ಆರೋಪಗಳು ಕೇಳಿಬಂದಿದ್ದು, ಈ ವಿಚಾರ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಮಾ.22ರಂದು ಆಗಿನ ಸಿಜೆಐ ಸಂಜೀವ್ ಖನ್ನಾ ಅವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿದ್ದರು.

ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರನ್ನೂ ಈ ವಿಚಾರಣಾ ಸಮಿತಿ ಒಳಗೊಂಡಿತ್ತು. ಈ ಸಮಿತಿಯ ವರದಿಯನ್ನು ಆಧರಿಸಿ ಸಂಜೀವ್ ಖನ್ನಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದು ವರ್ಮಾ ಅವರ ವಾಗ್ದಂಡನೆಗೆ ಶಿಫಾರಸು ಕೂಡ ಮಾಡಿದ್ದರು.

ಜನರ ವಿಶ್ವಾಸಕ್ಕೆ ಧಕ್ಕೆ ಸಲ್ಲದು

‘ನ್ಯಾಯಾಂಗ ವ್ಯವಸ್ಥೆಯಲ್ಲಿನ ಉನ್ನತಾಧಿಕಾರಿಯ ಬಗ್ಗೆ ಸಾಮಾನ್ಯ ಜನರ ನಿರೀಕ್ಷೆಗಳು ಹೆಚ್ಚಾಗಿರುತ್ತವೆ. ಅಂಥ ವ್ಯಕ್ತಿಗಳು ಪ್ರಾಮಾಣಿಕರಾಗಿರಲೇಬೇಕು. ಅದು ಮೂಲಭೂತ ಮಾನದಂಡವೂ ಹೌದು. ನ್ಯಾಯಾಂಗದ ಎಲ್ಲಾ ಹಂತದ ಅಧಿಕಾರಿಗಳೂ ಪ್ರಾಮಾಣಿಕರಾಗಿರಲೇಬೇಕು. ಜನರ ವಿಶ್ವಾಸದ ಆಧಾರದಲ್ಲೇ ನ್ಯಾಯಾಂಗದ ಅಸ್ತಿತ್ವವಿದ್ದು, ನ್ಯಾಯಮೂರ್ತಿಗಳ ವರ್ತನೆಗಳನ್ನೇ ಆ ವಿಶ್ವಾಸ ಆಧರಿಸಿರುತ್ತದೆ. ನ್ಯಾಯಾಲಯದ ಒಳಗೆ ಮಾತ್ರವಲ್ಲದೆ ಹೊರಗೂ ಆ ನಡವಳಿಕೆ ಮುಖ್ಯ. ಪ್ರಾಮಾಣಿಕತೆಯಲ್ಲಿ ಕೊರತೆಯಾದರೆ ಅದು ಜನರ ವಿಶ್ವಾಸಕ್ಕೆ ಕುಂದು ಉಂಟುಮಾಡುತ್ತದೆ. ಅಂಥ ಪ್ರಕರಣಗಳನ್ನು ಕಟ್ಟುನಿಟ್ಟಾಗಿಯೇ ನಿರ್ವಹಿಸಲಾಗುವುದು’ ಎಂದು ವರ್ಮಾ ಅವರನ್ನು ಸೇವೆಯಿಂದ ವಜಾಗೊಳಿಸಲು ಶಿಫಾರಸು ಮಾಡುವಾಗ ಸಮಿತಿ ಅಭಿಪ್ರಾಯಪಟ್ಟಿದೆ.

ಪಕ್ಷದ ಕೆಲ ನಾಯಕರ ಜತೆ ಭಿನ್ನಾಭಿಪ್ರಾಯ ಇದೆ: ತರೂರ್

ತಿರುವನಂತಪುರ (ಪಿಟಿಐ): ಪಕ್ಷದ ಕೆಲವು ಮುಖಂಡರು ಹಾಗೂ ತಮ್ಮನಡುವೆ ಭಿನ್ನಾಭಿಪ್ರಾಯವಿದೆ ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸದಸ್ಯ ಹಾಗೂ ಸಂಸದ ಶಶಿ ತರೂರ್ ಹೇಳಿದ್ದಾರೆ.

ಶಶಿ ತರೂರ್

ಭಿನ್ನಾಭಿಪ್ರಾಯ ಇರುವುದು ರಾಷ್ಟ್ರೀಯ ನಾಯಕರೊಂದಿಗೋ, ಪ್ರಾದೇಶಿಕ ನಾಯಕರೊಂದಿಗೋ ಎಂಬುದನ್ನು ಬಹಿರಂಗಪಡಿಸಿಲ್ಲ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ತರೂರ್, ‘ನೀಲಂಬುರ್ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಹೊತ್ತಿನಲ್ಲಿ ಆ ವಿಚಾರ ಹೇಳಲು ಬಯಸುವುದಿಲ್ಲ. 16 ವರ್ಷಗಳಿಂದ ಪಕ್ಷದ ಕಾರ್ಯಕರ್ತರ ಜತೆ ಕೆಲಸ ಮಾಡಿದ್ದೇನೆ. ಕಾಂಗ್ರೆಸ್‌ನ ಮೌಲ್ಯ ಮತ್ತು ಪ್ರೀತಿಪಾತ್ರ ಕಾರ್ಯಕರ್ತರು ನನಗೆ ಮುಖ್ಯ’ ಎಂದರು.

ಉಪ ಚುನಾವಣೆ ಮುಗಿದ ನಂತರ ಭಿನ್ನಾಭಿಪ್ರಾಯದ ಬಗ್ಗೆ ಮಾತನಾಡುವುದಾಗಿಯೂ ಶಶಿ ತರೂರ್ ಹೇಳಿದ್ದಾರೆ.

ಮೋದಿ ಭೇಟಿಗೆ ಸ್ಪಷ್ಟನೆ

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆದ ಮಾತುಕತೆ ಬಗ್ಗೆ ಪ್ರತಿಕ್ರಿಯಿಸಿದ ಶಶಿ ತರೂರ್, ‘ಸ್ಥಳೀಯ ರಾಜಕಾರಣದ ಬಗ್ಗೆ ನಾವು ಚರ್ಚೆ ನಡೆಸಿಲ್ಲ. ಆಪರೇಷನ್ ಸಿಂಧೂರದ ನಂತರ ವಿದೇಶಗಳಿಗೆ ಭೇಟಿ ನೀಡಿದ್ದ ಸರ್ವ ಪಕ್ಷ ನಿಯೋಗದ ಕುರಿತು ಚರ್ಚೆ ಮಾಡಿದೆವು. ‘ಸಂಸತ್ತಿನ ವಿದೇಶಾಂಗ ವ್ಯವಹಾರಗಳ ಸಮಿತಿ ಅಧ್ಯಕ್ಷನಾಗಿ ಭಾರತದ ವಿದೇಶಾಂಗ ನೀತಿ ಮತ್ತು ರಾಷ್ಟ್ರೀಯ ಹಿತವನ್ನು ಕಂಡಿದ್ದೇನೆ; ಕಾಂಗ್ರೆಸ್ ಅಥವಾ ಬಿಜೆಪಿಯ ವಿದೇಶಾಂಗ ನೀತಿಯನ್ನಲ್ಲ’ ಎಂದರು.

‘ನಾವೆಲ್ಲರೂ ದೇಶಕ್ಕಾಗಿ ದುಡಿಯುವ ಮತ್ತು ಮಾತನಾಡುವ ಬದ್ಧತೆ ಹೊಂದಿರಬೇಕು. ಕೇಂದ್ರ ಸರ್ಕಾರ ನನ್ನ ಸೇವೆ ಬಯಸಿತು, ನನ್ನ ಪಕ್ಷ ಬಯಸಲಿಲ್ಲ. ನನ್ನ ಕರ್ತವ್ಯ ನಿಭಾಯಿಸಿದ್ದಕ್ಕೆ ಹೆಮ್ಮೆ ಇದೆ’ ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ವಿಮಾನದಲ್ಲಿ ಕೂತಿರುವ ವ್ಯಕ್ತಿಯೊಬ್ಬರು ಆತಂಕದಿಂದ ತನ್ನ ರಕ್ಷಣೆಗಾಗಿ ಪ್ರಾರ್ಥಿಸುತ್ತಿರುವ, ಇತರೆ ಪ್ರಯಾಣಿಕರು ಗಾಬರಿಯಿಂದ ಕೂಗಿಕೊಳ್ಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಅದು ಜೂನ್ 12ರಂದು ಅಹಮದಾಬಾದ್‌ನಲ್ಲಿ ಪತನಗೊಂಡ ಏರ್ ಇಂಡಿಯಾ ವಿಮಾನದ ವಿಡಿಯೊ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

✓ ಇನ್‌ವಿಡ್ ಟೂಲ್ ಮೂಲಕ ವಿಡಿಯೊ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಅವನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಅನೇಕರು ಇದೇ ವಿಡಿಯೊ ಅನ್ನು ಒಂದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಖಾತರಿಯಾಯಿತು. ಮುಂದುವರಿದು, ರಿವರ್ಸ್ ಇಮೇಜ್ ಸರ್ಚ್ ಮಾಡಿದಾಗ, 2025ರ ಮೇ 21ರಂದು (ಅಹಮದಾಬಾದ್ ವಿಮಾನ ಪತನಕ್ಕೂ ಮುನ್ನ) ‘preetijain523’ ಎನ್ನುವ ಇನ್‌ಸ್ಟಾಗ್ರಾಂ ಅಕೌಂಟ್‌ನಲ್ಲಿ ಇದೇ ವಿಡಿಯೊ ಹಂಚಿಕೊಂಡಿರುವುದು ಕಂಡುಬಂತು. ಜತೆಗೆ, ವಿಮಾನದ ಒಳಾಂಗಣವನ್ನು ಪರಿಶೀಲಿಸಿದಾಗ, ಅದು ಇಂಡಿಗೊ ವಿಮಾನ ಎನ್ನುವುದು ತಿಳಿದುಬಂತು. ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ 2025ರ ಮೇ 21ರಂದು ದೆಹಲಿ–ಶ್ರೀನಗರ ಇಂಡಿಗೊ ವಿಮಾನವು ಹಾರುವಾಗ ಸಮಸ್ಯೆಯುಂಟಾಗಿತ್ತು ಎನ್ನುವ ಮಾಧ್ಯಮ ವರದಿ ಕಂಡಿತು. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವುದು ಅಹಮದಾಬಾದ್‌ನಲ್ಲಿ ಪತನಗೊಂಡ ವಿಮಾನದ ವಿಡಿಯೊ ಅಲ್ಲ ಎನ್ನುವುದು ಖಚಿತ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ಮಾಡಿದೆ.

ನುಡಿ ಬೆಳಗು

ದಯಾ ಗಂಗನಘಟ್ಟ

ಅತಿಯಾದ ಅವಲಂಬನೆ ಒಳ್ಳೆಯದಲ್ಲ

ಒಬ್ಬ ರಾಜ ಅನಾರೋಗ್ಯದಿಂದ ಬಳಲುತ್ತಿದ್ದ. ರಾಜನನ್ನು ಉಳಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಯಿತು. ಆ ಎಲ್ಲಾ ಪ್ರಯತ್ನಗಳೂ ವಿಫಲವಾಗಿ ಅವನು ಕೊನೆಯುಸಿರೆಳೆಯುತ್ತಿದ್ದ. ರಾಣಿಯರು, ಮಕ್ಕಳು, ವೈದ್ಯರು ಮತ್ತು ಮಹಾಮಂತ್ರಿಯು ಅವನ ಆಸೆಯನ್ನು ತೊರೆದಿದ್ದರು. ಆಗ ಅಲ್ಲಿಗೆ ಒಬ್ಬ ಸನ್ಯಾಸಿ ಬಂದ. ರಾಜನನ್ನು ಹೇಗಾದರೂ ಮಾಡಿ ಉಳಿಸಿಕೊಡಿ ಎಂದು ಅವನನ್ನು ಎಲ್ಲರೂ ಬೇಡಿದರು. ಅವರ ದುಃಖ, ರಾಜನ ಮೇಲಿನ ಪ್ರೀತಿಯನ್ನು ಗಮನಿಸಿದ ಸನ್ಯಾಸಿ, ‘ಇದಕ್ಕೆ ಬಹು ಸುಲಭವಾದ ಉಪಾಯವಿದೆ. ರಾಜನ ಪ್ರಾಣಪಕ್ಷಿ ಈಗ ಹಾರಿಹೋಗಲಿ. ನಿಮ್ಮ ಅರಮನೆಯಲ್ಲಿ ಇರುವ ದೊಡ್ಡ ಉದ್ಯಾನವನದಲ್ಲಿ ಒಂದು ಮಾವಿನ ಮರವಿದೆ. ಅದರಲ್ಲಿ ಕಾಷ್ಠ ಕೀಟವೊಂದು ರೋಗದಿಂದ ಬಳಲುತ್ತಿದೆ. ರಾಜನಿಂದ ಹೊರ ಹೋಗುವ ಆತ್ಮ ಅದರಲ್ಲಿ ಹೋಗಿ ಸೇರಿಕೊಳ್ಳುತ್ತದೆ. ನೀವು ಆ ಕೀಟವನ್ನು ಹಿಡಿದು ಕೊಂದರೆ ಮತ್ತೆ ಆತ್ಮವು ಬಂದು ರಾಜನಿಗೆ ಸೇರಿ ಆತನ ಪುನರ್ಜನ್ಮ ಆಗುತ್ತದೆ’ ಎಂದ. ಆಗ ಎಲ್ಲರೂ ನಿರಾಳವಾಗಿ ರಾಜ ಸಾಯಲಿ ಎಂದುಕೊಂಡು ಕಾದು ಕುಳಿತರು.

ಈಗ ಯಾರಲ್ಲೂ ರಾಜ ಸಾಯುವ ಬಗ್ಗೆ ದುಗುಡ ಉಳಿಯಲಿಲ್ಲ. ರಾಜ ಬಹಳ ದಿನ ಸಾಯಲೇ ಇಲ್ಲ. ಈಗ ಎಲ್ಲರೂ ರಾಜ ಬೇಗ ಸಾಯಲಿ ಎಂದು ಪ್ರಾರ್ಥಿಸತೊಡಗಿದರು. ಒಂದು ವಾರದ ನಂತರ ರಾಜ ಮರಣ ಹೊಂದಿದ. ಮಂತ್ರಿಗಳು ಉದ್ಯಾನಕ್ಕೆ ಹೋಗಿ ಕೀಟವನ್ನು ಹಿಡಿಯಲು ತೊಡಗಿದರು. ಎಷ್ಟು ಪ್ರಯತ್ನಿಸಿದರೂ ಆ ಕೀಟ ಇವರಿಗೆ ಸಿಗಲಿಲ್ಲ. ಟೊಂಗೆಯಿಂದ ಟೊಂಗೆಗೆ ಹಾರುತ್ತಿತ್ತು. ಬೇಸತ್ತ ಮಂತ್ರಿ ಮತ್ತಿತರರು ಸನ್ಯಾಸಿಯ ಬಳಿಗೆ ಬಂದು ದೂರಿದರು. ಅವರು ಯಾರಲ್ಲೂ ಈಗ ರಾಜ ಬದುಕಲೇ ಬೇಕು ಎಂಬ ತೀವ್ರ ಹಂಬಲ ಇರಲಿಲ್ಲ. ಇದನ್ನು ಗುರುತಿಸಿದ ಸನ್ಯಾಸಿ ನಗುತ್ತಾ, ‘ಜೀವನದ ಗತಿಯೆಂದರೆ ಇದೇ. ಜೀವವು ಇದ್ದಷ್ಟು ದಿನ ಆ ಶರೀರದ ಸ್ವತ್ತು ಅಷ್ಟೆ. ಅದು ರಾಜನಲ್ಲೇ ಇರಲಿ, ಉದ್ಯಾನದ ಕಾಷ್ಠ ಕೀಟದ ಶರೀರದಲ್ಲೇ ಇರಲಿ, ಅದಕ್ಕೆ ಅದರದೇ ರೂಪ ಬರುತ್ತದೆ. ನಮಗೆ ಅದನ್ನು ಹಿಡಿಯುವ ಮೋಹ ಬರುತ್ತದೆ. ಈ ಮೋಹ ಮಿಥ್ಯ. ಆದ್ದರಿಂದ ರಾಜನ ಶರೀರದ ಮೇಲಿನ ಮೋಹವನ್ನು ನೀವೂ ಬಿಟ್ಟು ಮುಂದಿನ ಕೆಲಸ ನೋಡಿ’ ಎನ್ನುತ್ತಾನೆ.

ನಂಟು, ಸ್ನೇಹ, ಸಂಬಂಧಗಳೆಲ್ಲವೂ ಬದುಕಿಗೆ ಮುಖ್ಯ ನಿಜ. ಆದರೆ ಯಾವುದೇ ಸಂಬಂಧದ ಜೊತೆಯೂ ಅತಿಯಾದ ಅವಲಂಬನೆ ಒಳ್ಳೆಯದಲ್ಲ. ಸಂಬಂಧಗಳು ಬಹಳ ಬೇಗ ಶಿಥಿಲಗೊಳ್ಳುತ್ತಿರುವ ಈ ಕಾಲದಲ್ಲಿ ಅಂಟಿಯೂ ಅಂಟದ ಗೆರೆಯ ನಡುವೆಯೇ ಅವುಗಳನ್ನು ನಿಭಾಯಿಸುವುದು ಸೂಕ್ತ. ❖

ಗುಂಡಣ್ಣ



ಪದಬಂಧ 6079

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಭೇದ ಭಾವವಿಲ್ಲದಿರುವುದು (5)
4.ಆ ಮೋದಕ ತಿನ್ನುವಾಗ ಆಗಿರುವ ಸಂತೋಷ (3)
5.ಕಮ್ಮಾರನ ಕೈ (2)
7.ವಿವಿಧದಲ್ಲಿರುವ ರೀತಿ (2)
10.ಕಮರಿಯೊಳಗೆ ಕಾಣಿಸಿದ ಆನೆ (2)
13.ವ್ಯಾಕರಣದಲ್ಲಿ ವಸ್ತುವಿನ ಹೆಸರನ್ನು ಸೂಚಿಸುವ ಪದ (2)
15.ಮರಳು ಇಲ್ಲಿದೆ (3)
16.ಆಕಾಶವನ್ನು ಮುಟ್ಟುವಂತಹ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಅಕ್ಷರಗಳನ್ನು ತಿಳಿದವನು ಇಲ್ಲಿದ್ದಾನೆ (4)
2.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
3.ದರ್ಶನ ತೋರಿ ದೃಷ್ಟಾಂತವನ್ನು ನೀಡಿ (4)
4.ಈತ ಪೂಜೆ ಮಾಡುವವನು (4)
6.ಸೂರ್ಯನ ಇನ್ನೊಂದು ಹೆಸರು (2)
8.ಅಧಮನ ಹತ್ತಿರವಿರುವ ಸಿರಿವಂತನಿದ್ದಾನಲ್ಲಾ! (4)
9.ಶಾಖದಿಂದ ಕೂಡಿದ ನೆತ್ತರು ಉಲ್ಟಾ ಕಾಣುತ್ತಿದೆ (4)
11.ಹೆಂಗಸು ಇಲ್ಲಿ ತಿರುಗಿ ನಿಂತಿದ್ದಾಳೆ (2)
12.ತೆಳ್ಳಗಿನ ಸೊಂಟ (4)
14.ಮಗನ ಜೊತೆಗಿರುವ ಪುತ್ರಿ (3)



6078ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಆಗಮ 3.ದಿನಾಂಕ
4.ಮಡದಿ 6.ಆಟ 7.ನವ
9.ಹುತ್ತ 13.ವರ 14.ಚಿಲುಕ
15.ಜತನ 16.ನಗಾರಿ

ಮೇಲಿಂದ ಕೆಳಕ್ಕೆ:

1.ಆಕಳು 2.ಮಮತೆ
3.ದಿಟ 5.ದಿನ
6.ಅಜಾನುಬಾಹು 8.ವರ್ಣವಿಕಾರ
10.ತ್ತಚಿ 11.ಅಂಕನ
12.ಗುಜರಿ 13.ವನ

ಸುಡೊಕು 6463

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

6462 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

20 ಜೂನ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ನವಮಿ ಗಂ. 9-50 ನಕ್ಷತ್ರ: ರೇವತಿ ಗಂ. 24-45 ಯೋಗ: ಶೋಭನ ಗಂ. 23-47, ಮಿಥುನ ಮಾಸದ 06 ನೇ ದಿನ. ಮಳೆ ನಕ್ಷತ್ರ : ಮೃಗಶಿರ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 – 12-00 , ಸೂರ್ಯೋದಯ : 06-08 ಸೂರ್ಯಾಸ್ತ : 06-55 ಮುಸ್ಲಿಂ ದಿನಾಂಕ : 23 ಜುಲ್‌ಹಿಜಾ .ಅದೃಷ್ಟ ಸಂಖ್ಯೆ : 4, 7

ಮೇಷ: ಆಪ್ತ ವಲಯದಲ್ಲಿಟ್ಟ ನಂಬಿಕೆಯು ಸುಳ್ಳಾಗುವ ಸಂದರ್ಭ ಬರಬಹುದು. ಎಚ್ಚರಿಕೆಯಿಂದಿರಿ. ಸೌಂದರ್ಯವರ್ಧಕ ವಸ್ತುಗಳ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಲಾಭ ಉಂಟಾಗುತ್ತದೆ.

ವೃಷಭ: ಹೊಸ ವೃತ್ತಿಯಲ್ಲಿ ಓಡಾಟದ ಕೆಲಸವು ದೇಹಕ್ಕೆ ಆಯಾಸ ಉಂಟುಮಾಡುತ್ತದೆ. ಆರಂಭದ ಅಭ್ಯಾಸದ ಹಂತದಲ್ಲಿರುವ ವೈದ್ಯರು ತಪ್ಪುಗಳು ಸಂಭವಿಸದಂತೆ ಜಾಗ್ರತೆವಹಿಸಿ.

ಮಿಥುನ: ಹಳಿ ತಪ್ಪಿದ ಕಾರ್ಯಗಳನ್ನು ಪುನಃ ಸರಿಯಾದ ಮಾರ್ಗಕ್ಕೆ ತರುವ ಪ್ರಯತ್ನ ನಡೆಸಿದರೆ ಶುಭಫಲ ಪ್ರಾಪ್ತಿ. ವಿಶೇಷ ವ್ಯಕ್ತಿಗಳ ಭೇಟಿ ಸಂತೋಷ ತರುವುದಲ್ಲದೆ, ಯೋಜನೆಗಳಿಗೆ ಚೈತನ್ಯ ತುಂಬುವುದು.

ಕರ್ಕಾಟಕ: ಭಾವನಾತ್ಮಕ ಸಂಬಂಧಗಳ ಬೆಳವಣಿಗೆ ಉತ್ತಮವಾಗಿ ಕೂಡಿಬರಲಿದೆ. ವ್ಯವಹಾರದಲ್ಲಿ ಕಾರ್ಮಿಕರೊಂದಿಗೆ ಅನುಸರಣೆ ಅಗತ್ಯ. ವ್ಯಾಪಾರದ ಮೂಲ ವಿಚಾರದಲ್ಲಿ, ವ್ಯವಹಾರದಲ್ಲಿ ಗೌಪ್ಯತೆ ಕಾಪಾಡಿ.

ಸಿಂಹ: ಇಷ್ಟಾರ್ಥಗಳು ಸಿದ್ಧಿಸಲಿವೆ. ಪ್ರಯತ್ನಗಳು ವ್ಯರ್ಥವಾಗದೆ ಸರಿಯಾಗಿ ಫಲಿಸಲು ಮನೆದೇವರ ಹಾಗೂ ಗುರುಹಿರಿಯರ ಆಶೀರ್ವಾದಗಳು ಕಾರಣವಾಗಲಿವೆ. ಸರ್ಕಾರಿ ಹರಾಜಿನಲ್ಲಿ ಲಾಭ ಹೊಂದುವಿರಿ.

ಕನ್ಯಾ: ಆತ್ಮವಿಶ್ವಾಸವೇ ಶ್ರೀರಕ್ಷೆ. ಜನಸಂಪರ್ಕದಿಂದ ಅದೃಷ್ಟ ಹಾಗೂ ಖ್ಯಾತಿ ಇಮ್ಮಡಿಗೊಳ್ಳುವುದು. ಹಣಕಾಸಿನ ವಿಷಯದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವ ಮೊದಲೇ ಮತ್ತೊಮ್ಮೆ ಯೋಚಿಸುವುದು ಸೂಕ್ತ.

ತುಲಾ: ದಿನ ಶ್ರಮ ದಿಂದ ಕೂಡಿದ್ದರೂ ವಿರಾಮ ದೊರೆಯುವುದು. ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಅರ್ಹತೆ ಮತ್ತು ಆಸಕ್ತಿ ಇದ್ದವರಿಗೆ ಆಯ್ಕೆಗೊಳ್ಳುವ ಅವಕಾಶ ಸಿಗಲಿದೆ.

ವೃಶ್ಚಿಕ: ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು ಸೋಲನ್ನು ತಂದೊಡ್ಡಬಹುದು. ಯೋಚಿಸಿ ಸಾವಕಾಶವಾಗಿ ಕಾರ್ಯಮಗ್ನರಾಗಿ. ಮಾತನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಧನು: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಎದುರಿಸಬೇಕಾಗಬಹುದು. ಜಯಕ್ಕಾಗಿ ಕಠಿಣ ಪರಿಶ್ರಮ ಅಗತ್ಯ. ಜವಳಿ ವ್ಯಾಪಾರಕ್ಕೆ ಪ್ರಚಾರ ಅಗತ್ಯ. ವಿಮಾ ಏಜೆಂಟ್‌ಗಳಿಗೆ ಸಂತಸದ ಸುದ್ದಿ ಬರುವುದು.

ಮಕರ: ಲಾಭಕ್ಕಾಗಿ ವೃತ್ತಿನಿಷ್ಠೆಯನ್ನು ಬಿಡುವ ತೀರ್ಮಾನ ತೆಗೆದುಕೊಳ್ಳಬೇಡಿ. ಕಲ್ಪನಾಲೋಕದಲ್ಲಿ ವಿಹರಿಸುವುದನ್ನು ಬಿಟ್ಟು ವಾಸ್ತವದ ವಿಚಾರದಲ್ಲಿರಿ. ಈ ದಿನ ಕೈಗಾರಿಕೋದ್ಯಮಿಗಳಿಗೆ ರಫ್ತು ವ್ಯವಹಾರಗಳಿಂದ ಲಾಭ ಬರಲಿದೆ.

ಕುಂಭ: ಒಡಹುಟ್ಟಿದವರ ನೆರವಿನಿಂದ ಸಾಲ ಮರುಪಾವತಿ ಸಾಧ್ಯ. ಕಾರ್ಯಕ್ಕೆ ಇದ್ದ ಅಡಚಣೆಗಳ ಕಾರಣಗಳು ತಿಳಿದುಬರುವುದು. ಸಂಕಲ್ಪಿತ ಕಾರ್ಯ ನಿರ್ಭೀತಿಯಿಂದ ಮುಂದುವರಿಯಲು ಮಹಾಗಣಪತಿಯನ್ನು ಆರಾಧಿಸಿ.

ಮೀನ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸು ಲಭಿಸುವುದು. ಕೋರ್ಟು ವ್ಯವಹಾರಗಳು ನಿಮ್ಮದಾಗಲಿವೆ. ತಾನಾಗಿ ಬಂದ ಅವಕಾಶವನ್ನು ಕಳೆದುಕೊಳ್ಳಬೇಡಿ. ಔದ್ಯೋಗಿಕ ಜೀವನದಲ್ಲಿ ಪ್ರಮುಖ ಘಟ್ಟ ಪ್ರವೇಶಿಸುವ ಸಾಧ್ಯತೆ ಇದೆ.

ಸಿನಿ ಸಮ್ಮಾನದ ಕಣದಲ್ಲಿ ಅತ್ಯುತ್ತಮ ನಟರು

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

3ನೇ ಆವೃತ್ತಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ಸಮಾರಂಭ ಜೂನ್ 27ರಂದು ನಡೆಯಲಿದೆ. 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ಅತ್ಯುತ್ತಮ ನಟ’ ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.
https://www.prajavani.net/cinesamman/season3

ಕಿಚ್ಚ ಸುದೀಪ್

ಕನ್ನಡ ಚಿತ್ರರಂಗದಲ್ಲಿ ಎರಡೂವರೆ ದಶಕಗಳನ್ನು ಪೂರೈಸಿರುವ ನಟ ಸುದೀಪ್ ‘ಮ್ಯಾಕ್ಸ್’ ಚಿತ್ರದ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. 1997ರಲ್ಲಿ ‘ತಾಯವ್ವ’ ಚಿತ್ರದ ರಾಮುವಾಗಿ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟ ಇವರು ತಮಿಳು, ತೆಲುಗು, ಹಿಂದಿ ಸಿನಿಮಾಗಳಲ್ಲಿಯೂ ಕಾಣಿಸಿಕೊಂಡಿದ್ದಾರೆ. ‘ಸ್ಪರ್ಶ’, ‘ಹುಚ್ಚ’ದಿಂದ ಹಿಡಿದು ‘ಮ್ಯಾಕ್ಸ್’ ತನಕ ಸಾಕಷ್ಟು ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ‘ನಂದಿ’, ‘ಕಿಚ್ಚ’, ‘ಸ್ವಾತಿ ಮುತ್ತು’, ‘ಮೈ ಆಟೋಗ್ರಾಫ್’, ‘ಮುಸ್ಸಂಜೆ ಮಾತು’ ಮೊದಲಾದ ಚಿತ್ರಗಳಲ್ಲಿ ನಟನೆಯಿಂದಲೇ ಗಮನ ಸೆಳೆದವರು. ‘ಈಗ’ ಇವರ ನಟನೆಯನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ದ ಚಿತ್ರ. ಅತ್ಯುತ್ತಮ ನಟನೆಗಾಗಿ ಸಾಕಷ್ಟು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ‘ನಂ 73 ಶಾಂತಿ ನಿವಾಸ’ ಚಿತ್ರದ ಮೂಲಕ ನಿರ್ದೇಶಕನಾಗಿ ಗುರುತಿಸಿಕೊಂಡರು. ನಿರ್ಮಾಪಕನೂ ಆಗಿರುವ ಇವರು ಸದ್ಯ ‘ಬಿಲ್ಲ ರಂಗ ಭಾಷ’ ಚಿತ್ರದಲ್ಲಿ ನಟಿಸುತ್ತಿದ್ದು, ಇದು ಇವರ 47ನೇ ಚಿತ್ರ.

ರಂಗಾಯಣ ರಘು

‘ಶಾಖಾಹಾರಿ’ ಸಿನಿಮಾ ಬಳಿಕ ‘ಅಭಿನಯಾಸುರ’ ಎಂಬ ಬಿರುದು ಪಡೆದಿರುವ ನಟ ರಂಗಾಯಣ ರಘು ಕನ್ನಡ ಚಿತ್ರರಂಗದಲ್ಲಿ ಮೂರೂವರೆ ದಶಕಗಳನ್ನು ಪೂರೈಸಿ ಹೆಜ್ಜೆ ಇಡುತ್ತಿದ್ದಾರೆ. ‘ಶಾಖಾಹಾರಿ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಖಳನಾಯಕ, ಹಾಸ್ಯ, ಪೋಷಕ ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಮನ ಗೆದ್ದಿರುವ ಇವರು ಸದ್ಯ ಮುಖ್ಯಭೂಮಿಕೆಯಲ್ಲೇ ಮಿಂಚುತ್ತಿದ್ದಾರೆ. ‘ಶಾಖಾಹಾರಿ’ ಹಾಗೂ ‘ಅಜ್ಞಾತವಾಸಿ’ ಇದಕ್ಕೆ ಸಾಕ್ಷ್ಯವಾಗಿವೆ. ಭಿನ್ನವಾದ ಪಾತ್ರ ಪೋಷಣೆ ಪ್ರೇಕ್ಷಕರನ್ನು ಸೆಳೆಯುತ್ತಿದೆ. ರಂಗಭೂಮಿ ಹಿನ್ನೆಲೆಯ ಇವರು ‘ಸುಗ್ಗಿ’ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಇಲ್ಲಿಯವರೆಗೂ 250ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಸೈನೈಡ್’, ‘ದುನಿಯಾ’, ‘ಗಾಳಿಪಟ’, ‘ಶಾಖಾಹಾರಿ’ ಸಿನಿಮಾಗಳ ಮೂಲಕ ಜನರು ಇವರನ್ನು ಗುರುತಿಸುವುದು ಹೆಚ್ಚು. 2007ರಲ್ಲಿ ‘ದುನಿಯಾ’ ಚಿತ್ರದಲ್ಲಿನ ನಟನೆಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ‘ಮೂರನೇ ಕೃಷ್ಣಪ್ಪ’, ‘ಟಗರುಪಲ್ಯ’, ‘ರಂಗಸಮುದ್ರ’ದಂತಹ ಮಣ್ಣಿನ, ಭಾಷಾ ಸೊಗಡಿನ ಸಿನಿಮಾಗಳಲ್ಲಿಯೂ ನಟಿಸಿ ಸೈ ಎನಿಸಿಕೊಂಡ ಇವರು ಹೊಸ ಚಿಗುರುಗಳನ್ನು ಪೋಷಿಸಿದವರು. ಸದಾ ಭಿನ್ನ ಪಾತ್ರಗಳ ಬಾಯಾರಿಕೆ ಹೊತ್ತ ಇವರ ಸಿನಿಬ್ಯಾಂಕ್‌ನಲ್ಲಿ ಸದ್ಯ ಹತ್ತಕ್ಕೂ ಅಧಿಕ ಸಿನಿಮಾಗಳಿವೆ.

ದುನಿಯಾ ವಿಜಯ್



ಸದ್ಯ ಕನ್ನಡ ಚಿತ್ರರಂಗದಲ್ಲಿ ಒಂದರ ಹಿಂದೊಂದು ಹಿಟ್ ಸಿನಿಮಾಗಳನ್ನು ನೀಡುತ್ತಿರುವ ವಿಜಯ್ ‘ಭೀಮ’ ಚಿತ್ರದ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ಯೋಗರಾಜ್ ಭಟ್ ಅವರ ‘ರಂಗ ಎಸ್‌ಎಸ್‌ಎಲ್‌ಸಿ’ ಚಿತ್ರದಲ್ಲಿ ಸುದೀಪ್ ಅವರೊಂದಿಗೆ ನಟಿಸುವ ಮೂಲಕ ವಿಜಯ್ ತಮ್ಮ ಸಿನಿಪಯಣ ಪ್ರಾರಂಭಿಸಿದರು. ಸೂರಿ ನಿರ್ದೇಶನದ ಚೊಚ್ಚಲ ಚಿತ್ರ ‘ದುನಿಯಾ’ ಮೂಲಕ ಇವರು ಜನಪ್ರಿಯರಾದರು. ಈತನಕ 40ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಇವರು ನಿರ್ದೇಶಕನಾಗಿಯೂ ಗಮನ ಸೆಳೆದಿದ್ದಾರೆ. ಇವರು ನಟಿಸಿ ನಿರ್ದೇಶಿಸಿದ ‘ಸಲಗ’, ‘ಭೀಮ’ ಚಿತ್ರಗಳು ಹಿಟ್ ಸಿನಿಮಾಗಳ ಪಟ್ಟಿ ಸೇರಿವೆ. ತೆಲುಗು ಚಿತ್ರಗಳಲ್ಲಿಯೂ ಕಾಣಿಸಿಕೊಂಡಿರುವ ಇವರು ಅತ್ಯುತ್ತಮ ನಟನೆಗಾಗಿ ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸದ್ಯ ಜಡೇಶ್ ಹಂಪಿ ನಿರ್ದೇಶನದ ‘ಲ್ಯಾಂಡ್ ಲಾರ್ಡ್’ ಚಿತ್ರದಲ್ಲಿ ನಟಿಸುತ್ತಿದ್ದಾರೆ. ‘ಸಿಟಿ ಲೈಟ್ಸ್’ ಚಿತ್ರದಲ್ಲಿ ನಟನೆ ಜತೆಗೆ ನಿರ್ದೇಶನದ ಹೊಣೆಯನ್ನೂ ಹೊತ್ತಿದ್ದಾರೆ.

ದಿಗಂತ್



ಸ್ಯಾಂಡಲ್‌ವುಡ್‌ನ ದೂದ್‌ಪೇಡ ಎಂದೇ ಖ್ಯಾತಿ ಪಡೆದಿರುವ ದಿಗಂತ್ ‘ಮಾರಿಗೋಲ್ಡ್’ ಚಿತ್ರದ ನಟನೆಗಾಗಿ ನಾಮನಿರ್ದೇಶಿತರಾಗಿದ್ದಾರೆ. ‘ಮಿಸ್ ಕ್ಯಾಲಿಫೋರ್ನಿಯಾ’ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಇವರು ಗುರುತಿಸಿಕೊಂಡಿದ್ದು ಯೋಗರಾಜ್ ಭಟ್ಟರ ಗರಡಿಯಲ್ಲಿ. ಭಟ್ಟರ ‘ಮುಂಗಾರು ಮಳೆ’, ‘ಗಾಳಿಪಟ’ ಚಿತ್ರಗಳಲ್ಲಿ ಗಮನ ಸೆಳೆದ ಇವರು ‘ಮನಸಾರೆ’, ‘ಪಂಚರಂಗಿ’ ಚಿತ್ರಗಳಿಂದ ಜನರ ಮನಸೂರೆಗೊಂಡರು. ಭಿನ್ನ ಪಾತ್ರಗಳನ್ನೇ ಆಯ್ದುಕೊಳ್ಳುವ ಇವರು ‘ಮಾರಿಗೋಲ್ಡ್’ನಲ್ಲಿ ಮಾಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ಇವರ ‘ಎಡಗೈ ಅಪಘಾತಕ್ಕೆ ಕಾರಣ’ ಚಿತ್ರ ತೆರೆಯಲ್ಲಿದೆ.



ವಿನಯ್ ರಾಜ್‌ಕುಮಾರ್



ಭಿನ್ನ ಪಾತ್ರಗಳ ಆಯ್ಕೆಗೆ ಹೆಸರುವಾಸಿಯಾಗಿರುವ ವಿನಯ್ ರಾಜ್‌ಕುಮಾರ್ ‘ಪೆಪೆ’ ಚಿತ್ರದ ಖಡಕ್ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ಕಂಟೆಂಟ್ ಆಧಾರಿತ ಸಿನಿಮಾಗಳನ್ನೇ ಆಯ್ದುಕೊಂಡು ತಮ್ಮ ಹಿಂದಿನ ಪಾತ್ರಗಳಿಗೇ ಸವಾಲು ಒಡ್ಡಿಕೊಳ್ಳುವ ಇವರು ‘ಪೆಪೆ’ಯಲ್ಲಿ ಮಾಸ್, ರಗಡ್ ಪಾತ್ರದಲ್ಲಿ ಅಬ್ಬರಿಸಿದ್ದಾರೆ. ಬಾಲ ಕಲಾವಿದನಾಗಿ ಚಿತ್ರರಂಗಕ್ಕೆ ಕಾಲಿಟ್ಟ ಇವರು ‘ಸಿದ್ಧಾರ್ಥ’ ಚಿತ್ರದ ಮೂಲಕ ನಾಯಕನಾದರು. ‘ಅನಂತು ವರ್ಸಸ್ ನುಸ್ರತ್’, ‘ಒಂದು ಸರಳ ಪ್ರೇಮಕಥೆ’ ಮೊದಲಾದ ಸಿನಿಮಾಗಳ ಮೂಲಕ ಗಮನ ಸೆಳೆದರು. ಸದ್ಯ ‘ಅಂದೊಂದಿತ್ತು ಕಾಲ’, ‘ಸಿಟಿ ಲೈಟ್ಸ್’ ಚಿತ್ರಗಳಲ್ಲಿ ನಟಿಸುತ್ತಿದ್ದಾರೆ.

ಮಹಾದೇವ ಹಡಪದ

‘ಫೋಟೋ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿನ ಸಂಕಷ್ಟಗಳನ್ನು ಕಟ್ಟಿಕೊಡುವ ಈ ಚಿತ್ರದಲ್ಲಿ ದಿನಗೂಲಿ ಕಟ್ಟಡ ಕಾರ್ಮಿಕನ ಪಾತ್ರದಲ್ಲಿ ‘ದುರ್ಗ್ಯ’ ಎಂಬ ಬಾಲಕನ ತಂದೆಯಾಗಿ ಜೀವಿಸಿದ್ದಾರೆ ಮಹಾದೇವ ಹಡಪದ. ರಂಗಕರ್ಮಿ, ಕಥೆಗಾರರಾಗಿರುವ ಇವರು ಸುಮಾರು 50 ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸಮುದಾಯದ ಮೂಲಕ ರಂಗಭೂಮಿಗೆ ಹೆಜ್ಜೆ ಇಟ್ಟ ಇವರು ನೀನಾಸಂ ತಿರುಗಾಟದಲ್ಲಿ ನಟನಾಗಿ ಹಾಗೂ ತಂತ್ರಜ್ಞನಾಗಿ ಇದ್ದವರು. ಸಿನಿಮಾ ಕ್ಷೇತ್ರದಲ್ಲಿ ನಾಲ್ಕೈದು ವರ್ಷಗಳಿಂದ ಸಕ್ರಿಯರಾಗಿರುವ ಇವರು ‘19.20.21.’, ‘ಭೈರತಿ ರಣಗಲ್’, ‘ಮಿಕ್ಕ ಬಣ್ಣದ ಹಕ್ಕಿ’ ಸೇರಿ ಸುಮಾರು ಹತ್ತು ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಪರಜ್ಯ’ ಎಂಬ ಸಿನಿಮಾವನ್ನು ನಿರ್ದೇಶಿಸಿದ್ದಾರೆ.

ಪ್ರಮೋದ್ ಶೆಟ್ಟಿ

‘ಲಾಫಿಂಗ್ ಬುದ್ಧ’ ಚಿತ್ರದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ರಂಗಭೂಮಿ ಹಿನ್ನೆಲೆಯ ಪ್ರಮೋದ್, ‘ಜುಗಾರಿ’ ಚಿತ್ರದ ಮೂಲಕ ಸಿನಿಮಾ ಲೋಕ ಪ್ರವೇಶಿಸಿದರು. ‘ಉಳಿದವರು ಕಂಡಂತೆ’ ಚಿತ್ರದ ಬಳಿಕ ಅವರ ಸಾಲು ಸಾಲು ಸಿನಿಮಾಗಳು ತೆರೆಕಂಡವು. ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು’ ಸಿನಿಮಾದಲ್ಲಿ ‘ಉಪಾಧ್ಯಾಯ’ರಾಗಿ ಮಿಂಚಿದ ಇವರು ಬಳಿಕ ‘ರಿಕ್ಕಿ’, ‘ಕಿರಿಕ್ ಪಾರ್ಟಿ’, ‘ಕಾಂತಾರ’ ಮುಂತಾದ ಸಿನಿಮಾಗಳಲ್ಲಿ ನಟಿಸಿದರು. ‘ಲಾಫಿಂಗ್ ಬುದ್ಧ’ ಚಿತ್ರದಿಂದ ನಾಯಕನಾಗಿ, ಸದ್ಯ ‘ಕಾಂತಾರ’ ಪ್ರೀಕ್ವೆಲ್, ‘ರಿಚರ್ಡ್ ಆ್ಯಂಟನಿ’ಯಲ್ಲೂ ನಟಿಸುತ್ತಿದ್ದಾರೆ.

ಗೌರಿಶಂಕರ್



ಸ್ಯಾಂಡಲ್‌ವುಡ್‌ನಲ್ಲಿ ನಾಯಕನಾಗಿ ಗಟ್ಟಿಯಾಗಿ ನೆಲೆಯೂರಬೇಕೆಂಬ ಕನಸು ಹೊತ್ತಿರುವ ಗೌರಿಶಂಕರ್ ‘ಕೆರೆಬೇಟೆ’ ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಮಲೆನಾಡಿನ ನಾಗನಾಗಿ ಚಿತ್ರದಲ್ಲಿ ಗಮನ ಸೆಳೆದಿದ್ದಾರೆ. ಖಳನಾಯಕನಿಂದ ನಾಯಕನಾಗಿ ಪರಿವರ್ತನೆ ಹೊಂದುವ ವಿಭಿನ್ನ ಪಾತ್ರವನ್ನು ಇವರು ನಟನಾಗಿ ಜೀವಿಸಿದ್ದಾರೆ. ಚಿತ್ರರಂಗದ ವಿವಿಧ ವಿಭಾಗಗಳಲ್ಲಿ ದಶಕಗಳ ಕಾಲ ಕೆಲಸ ಮಾಡಿದ ಇವರು ‘ರಾಜಹಂಸ’ ಚಿತ್ರದ ಮೂಲಕ ನಾಯಕನಾದರು. ಬಳಿಕ ‘ಜೋಕಾಲಿ’ ಚಿತ್ರದಲ್ಲಿ ಕಾಣಿಸಿಕೊಂಡರು. ಸದ್ಯ ಹೊಸ ಚಿತ್ರಕ್ಕಾಗಿ ಕಥೆಯ ಹುಡುಕಾಟದಲ್ಲಿದ್ದಾರೆ.

ರಾಜವರ್ಧನ್

‘ಹಿರಣ್ಯ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ನಟ ಡಿಂಗ್ರಿ ನಾಗರಾಜ್ ಪುತ್ರ ಇವರು. ‘ಬಿಚ್ಚುಗತ್ತಿ’ ಸಿನಿಮಾ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ಇವರು ನಂತರ ‘ಪ್ರಣಯಂ’, ‘ಹಿರಣ್ಯ’ ಮತ್ತು ‘ಗಜರಾಮ’ ಚಿತ್ರಗಳಲ್ಲಿ ನಟಿಸಿದ್ದಾರೆ. ಬಾರ್ನ್‌ಸ್ವಾಲೋ ಸಂಸ್ಥೆಯಿಂದ ‘ಜಾವಾ’ ಸಿನಿಮಾ ನಿರ್ಮಾಣ ಮಾಡುತ್ತಿರುವ ಇವರು ‘ಕಮಲ್ ಶ್ರೀದೇವಿ’ ಸಿನಿಮಾಗೂ ಕೈಜೋಡಿಸಿದ್ದಾರೆ. ನಟನೆಯ ಜತೆಗೆ ಹೊಸಬರ ಕಿರುಚಿತ್ರಗಳ ನಿರ್ಮಾಣ ಯೋಜನೆಯೂ ಇವರಿಗಿದೆ. ಸದ್ಯ ಕನ್ನಡದ ಜೊತೆಗೆ ರಾಜವರ್ಧನ್ ತೆಲುಗು, ತಮಿಳು ಚಿತ್ರರಂಗಗಳತ್ತಲೂ ಗಮನ ಹರಿಸಿದ್ದಾರೆ.

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ವಿ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ–ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ–ಆಪರೇಟಿವ್ ಬ್ಯಾಂಕ್, ಕೆಎಸ್‌ಡಿಎಲ್. **ಮೊಬಿಲಿಟಿ ಪಾರ್ಟ್‌ನರ್:** ಮರ್ಸಿಡೀಸ್ ಬೆಂಜ್–ಅಕ್ಷಯ್ ಮೋಟರ್ಸ್.
ಬ್ಯಾಂಕಿಂಗ್ ಪಾರ್ಟ್‌ನರ್: ಕೆನರಾ ಬ್ಯಾಂಕ್. **ಸ್ಟೈಲ್ ಪಾರ್ಟ್‌ನರ್:** ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್.**ಟ್ರಾವೆಲ್ ಪಾರ್ಟ್‌ನರ್:** ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್‌ನರ್:** ನ್ಯುಮೆನ್.**ನಾಲೆಜ್ ಪಾರ್ಟ್‌ನರ್ಸ್:** ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು.**ಇನ್‌ಶ್ಯೂರೆನ್ಸ್ ಪಾರ್ಟ್‌ನರ್:** ನ್ಯಾಷನಲ್ ಇನ್‌ಶ್ಯೂರೆನ್ಸ್.
ಟೆಲಿಕಾಸ್ಟ್ ಪಾರ್ಟ್‌ನರ್: ಜೀ ಕನ್ನಡ. **ಆಡಿಟ್ ಪಾರ್ಟ್‌ನರ್:** ಇ ಆ್ಯಂಡ್ ವೈ.



‘ಹೊಸಬರಿಗೆ ಸ್ಟಾರ್ ನಟರ ಬೆಂಬಲ ಬೇಕು’

ಭರತ್ ಸಾಗರ ನಾಯಕನಾಗಿ ನಟಿಸಿರುವ ‘ಕಾಲವೇ ಮೋಸಗಾರ’ ಚಿತ್ರ ಇಂದು (ಜೂ.20) ತೆರೆ ಕಾಣುತ್ತಿದೆ. ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲೆಯೂರಲು ಒಂದು ಯಶಸ್ಸಿಗಾಗಿ ಎದುರು ನೋಡುತ್ತಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

‘ಹುಟ್ಟೂರು ಶಿವಮೊಗ್ಗ ಜಿಲ್ಲೆಯ ಸಾಗರ. ನಮ್ಮದು ವೈದ್ಯರ ಕುಟುಂಬ. ನಾನು ಕೂಡ ಫಾರ್ಮಸಿಯಲ್ಲಿ ಸ್ನಾತಕೋತ್ತರ ಪದವೀಧರ. ಆದರೆ ರಂಗಭೂಮಿಯ ಗೀಳು. ನಾಟಕಗಳಿಂದ ಪ್ರಾರಂಭಿಸಿ, ಸಿನಿಮಾಗಳಲ್ಲಿ ಸಣ್ಣ ಪಾತ್ರಗಳಲ್ಲಿ ನಟಿಸುತ್ತ ಈ ಹಂತಕ್ಕೆ ಬಂದು ನಿಂತಿದ್ದೇನೆ. ‘ಆಟಕ್ಕುಂಟು ಲೆಕ್ಕಕ್ಕಿಲ್ಲ’, ‘ಮಾಯಾನಗರಿ’ ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವೆ. ‘ವೇದ’ ಚಿತ್ರದಲ್ಲೊಂದು ಪಾತ್ರ ಮಾಡಿರುವೆ. ‘ಕಾಲವೇ ಮೋಸಗಾರ’ ನಾಯಕನಾಗಿ ಮೊದಲ ಸಿನಿಮಾ’ ಎಂದು ಮಾತು ಪ್ರಾರಂಭಿಸಿದರು ಭರತ್.

ಅಡ್ನಾಡಿ ಹುಡುಗನೊಬ್ಬ ಹುಡುಗಿ ಹಿಂದೆ ಬೀಳುವ ಕಥೆಯನ್ನು ಈ ಚಿತ್ರ ಹೊಂದಿದೆ. ಸಂಜಯ್ ಪುರಾಣಿಕ್ ನಿರ್ದೇಶನದ ಚಿತ್ರ ನಾಲ್ಕು ವರ್ಷಗಳ ಹಿಂದೆ ಸೆಟ್ಟೇರಿತ್ತು. ಯಶಸ್ವಿನಿ ರವೀಂದ್ರ ಚಿತ್ರದ ನಾಯಕಿ. ಕುರಿ ಪ್ರತಾಪ್ ಮೊದಲಾದವರು ಚಿತ್ರದಲ್ಲಿದ್ದಾರೆ. ‘ಲೋಕಲ್ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ. ಹುಡುಗಿ ಹಿಂದೆ ಹೋಗಿ ಪ್ರೀತಿಯ ಬಲೆಯಲ್ಲಿ ಬೀಳುತ್ತೇನೆ. ಒಂದಷ್ಟು ನೈಜ ಘಟನೆಗಳನ್ನು ಆಧರಿಸಿದ ಚಿತ್ರವಿದು. ಆ ಹುಡುಗಿಯಿಂದ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಕಥೆ. ಕಂಟೆಂಟ್ ಹೊಂದಿರುವ ಚಿತ್ರ. ಆ್ಯಕ್ಷನ್ ಜತೆಗೆ ಮನರಂಜನೆಯ ಎಲ್ಲ ಅಂಶಗಳೂ ಇವೆ’ ಎಂದು ಚಿತ್ರ ಕುರಿತು ವಿವರಿಸಿದರು.

‘ಸಿನಿಮಾ ನೋಡೋಕೆ ಚೆಂದ. ನಾಯಕ ಎಂಬ ಪದ ಕೇಳಲಷ್ಟೆ ಹಿತಕರ. ಆದರೆ ನಾಯಕನಾಗಿ ಯಶಸ್ವಿಯಾಗುವುದು, ಸಿನಿಮಾ ನಂಬಿಕೊಂಡು ಬದುಕು ಕಟ್ಟಿಕೊಳ್ಳುವುದು ಸುಲಭವಲ್ಲ. ಬದುಕಿಗಾಗಿ ಒಂದು ತರಕಾರಿ ಅಂಗಡಿ ನಡೆಸುತ್ತಿದ್ದೇನೆ. ಅದರ ಜತೆಜತೆಗೆ ಸಿನಿಮಾದ ಕೆಲಸ. ನಾನು ಶಂಕರ್‌ನಾಗ್ ಅಭಿಮಾನಿ. ಅವರಿಂದ ಸ್ಫೂರ್ತಿ ಪಡೆದು ಚಿತ್ರರಂಗಕ್ಕೆ ಬಂದೆ. ಅಪ್ಪು ಸಾರ್ ನನ್ನ ಹಿಂದಿನ ಚಿತ್ರವೊಂದಕ್ಕೆ ಆಶೀರ್ವಾದ ಮಾಡಿದ್ದರು. ಡಾಲಿ ಧನಂಜಯ, ವಸಿಷ್ಠ ಸಿಂಹ ಮೊದಲಾದವರು ಬೆಂಬಲ ನೀಡುತ್ತಿದ್ದಾರೆ. ನಮ್ಮಂಥ ಕಲಾವಿದರು ಜನರನ್ನು ತಲುಪಲು ಸ್ಟಾರ್‌ಗಳ ಬೆಂಬಲ, ಸಹಕಾರ ಬೇಕು’ ಎನ್ನುತ್ತಾರೆ ಅವರು.

‘ಸಿನಿಮಾವನ್ನು ಜನಕ್ಕೆ ತಲುಪಿಸುವುದು ಇವತ್ತು ದೊಡ್ಡ ಸವಾಲು. ಸಿನಿಮಾ ಚೆನ್ನಾಗಿದೆ ಅಥವಾ ಇಲ್ಲ ಎಂದು ಹೇಳಲಿಕ್ಕಾದರೂ ಜನ ಬರಬೇಕು. ಅದಕ್ಕೂ ಜನ ಚಿತ್ರಮಂದಿರಕ್ಕೆ ಬರುತ್ತಿಲ್ಲ. ಎಲ್ಲರೂ ಯಶ್, ದರ್ಶನ್ ಆಗಬೇಕು ಎಂಬ ಕನಸಿನೊಂದಿಗೆ ಇಲ್ಲಿಗೆ ಬರುತ್ತಾರೆ. ಆದರೆ ಅದು ಸಾಧ್ಯವಾಗುವುದಿಲ್ಲ. ಎಲ್ಲರೂ ಆ್ಯಕ್ಷನ್, ಮಾಸ್ ಸಿನಿಮಾ ಮಾಡಿಕೊಂಡಿರಲು ಸಾಧ್ಯವಿಲ್ಲ. ಭಿನ್ನವಾದ ಕಂಟೆಂಟ್ ಸಿನಿಮಾಗಳೇ ಬೇಕು. ಅದನ್ನು ನೋಡಲು ಜನ ಬರುತ್ತಿಲ್ಲ. ಹಾಗಂತ ಹತಾಶೆಗೊಂಡು ಪ್ರಯತ್ನ ಬಿಡುವುದಿಲ್ಲ. ಇನ್ನೊಂದು ಸಿನಿಮಾ ಈಗಾಗಲೇ ಚಿತ್ರೀಕರಣ ನಡೆಯುತ್ತಿದೆ. ಒಂದಲ್ಲ ಒಂದು ದಿನ ಗೆಲ್ಲುವ ವಿಶ್ವಾಸವಿದೆ’ ಎಂದು ಮಾತಿಗೆ ವಿರಾಮವಿತ್ತರು.

ಐದು ಚಿತ್ರಗಳು ತೆರೆಗೆ

‘ಕಾಲವೇ ಮೋಸಗಾರ’ ಸೇರಿದಂತೆ ಐದು ಚಿತ್ರಗಳು ಇಂದು (ಜೂ.20) ತೆರೆ ಕಾಣುತ್ತಿವೆ.

‘ಬ್ಲ್ಯಾಕ್ ಶೀಪ್’

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ಜೀವನ್ ಹಳ್ಳಿಕಾರ್ ಚಿತ್ರಕಥೆ, ನಿರ್ದೇಶನವಿದೆ. ಅಶ್ವಿನಿ ಗುರುಚರಣ್ ಬಂಡವಾಳ ಹೂಡಿದ್ದಾರೆ. ‘ಕ್ರೈಂ, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾ. ಒಂದಷ್ಟು ನೈಜ ಘಟನೆಗಳನ್ನು ಸಿನಿಮಾದಲ್ಲಿ ಬಳಸಲಾಗಿದೆ. ನಾಯಕ ಮತ್ತು ಖಳನಾಯಕರ ನಡುವೆ ನಡೆಯುವ ಸಂಘರ್ಷದಲ್ಲಿ ನಾಯಕನಿಗೆ ಬದುಕಿನ ಕೆಲ ಘಟನೆಗಳು ಮರೆತು ಹೋಗುತ್ತವೆ. ನಾಯಕ ಹಾಗೆ ಮರೆತ ವಿಷಯಗಳನ್ನು ಹುಡುಕಲು ಯಾವ ರೀತಿ ಪ್ರಾರಂಭಿಸುತ್ತಾನೆ ಎಂಬುದೇ ಚಿತ್ರಕಥೆ. ಬೆಂಗಳೂರು, ಮಂಗಳೂರು, ಮುಂಬೈ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ’ ಎಂದಿದ್ದಾರೆ ನಿರ್ದೇಶಕರು.

ವಿಶಾಲ್‌ಕಿರಣ್ ಚಿತ್ರದ ನಾಯಕ. ಶಿವಾಂಗಿ ದಾವೆ ನಾಯಕಿ. ಪ್ರಶಾಂತ್.ವಿ.ಹರಿ, ನಿಶಾ ಹೆಗಡೆ, ಸಿದ್ಲಿಂಗು ಶ್ರೀಧರ್, ಕೃಷ್ಣ ಹೆಬ್ಬಾಳೆ, ಸುಂದರ್ ವೀಣಾ, ಪುನೀತ್, ದೀಪಿಕಾ ಅಡ್ತಲೆ ಮುಂತಾದವರು ಅಭಿನಯಿಸಿದ್ದಾರೆ. ಅಭಿಜಿತ್ ಮಹೇಶ್-ಶೈಲೇಶ್ ಕುಮಾರ್ ಸಾಹಿತ್ಯದ ಗೀತೆಗಳಿಗೆ ಸಿದ್ಧಾರ್ಥ್ ಕಾಮತ್ ಸಂಗೀತ ಸಂಯೋಜಿಸಿದ್ದಾರೆ. ದೇವು ಛಾಯಾಚಿತ್ರಗ್ರಹಣ, ಎಸ್.ಆಕಾಶ್ ಮಹೇಂದ್ರಕರ್ ಸಂಕಲನವಿದೆ.

ಬುಲೆಟ್

ನಟ ಧರ್ಮ ಕೀರ್ತಿರಾಜ್ ಚಿತ್ರಗಳು ಒಂದರ ಹಿಂದೆ ಒಂದರಂತೆ ಬಿಡುಗಡೆಗೊಳ್ಳುತ್ತಿವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ ‘ಬುಲೆಟ್’. ಸತ್ಯಜಿತ್ ಶಬ್ಬೀರ್ ನಿರ್ಮಾಣ ಹಾಗೂ ನಿರ್ದೇಶನವಿದೆ.

‘ನಾನು ಭಾರತಿರಾಜಾ ಅವರ ನಿರ್ದೇಶನದ ‘ಪದಿನಾರು ವಯದಿನಿಲೆ’ ಚಿತ್ರದಲ್ಲಿ ಅಭಿನಯಿಸುವ ಮೂಲಕ ನಟನಾಗಿ ಚಿತ್ರರಂಗ ಪ್ರವೇಶಿಸಿದೆ. ಸಂಗೀತ ನಿರ್ದೇಶಕರಾದ ಇಳಯರಾಜ ಅವರು ಶಬ್ಬೀರ್ ಎಂದಿದ್ದ ನನ್ನ ಹೆಸರಿನ ಮುಂದೆ ಸತ್ಯಜಿತ್ ಎಂದು ಸೇರಿಸಿದರು. ಅಂದಿನಿಂದ ನನ್ನ ಹೆಸರು ಸತ್ಯಜಿತ್ ಶಬ್ಬೀರ್. ಈವರೆಗೂ ತೆಲುಗು, ತಮಿಳು, ಮಲಯಾಳ ಹಾಗೂ ಹಿಂದಿ ಭಾಷೆಗಳ 75 ಚಿತ್ರಗಳಲ್ಲಿ ನಟಿಸಿದ್ದೇನೆ. ಮೂಲತಃ ಕರ್ನಾಟಕದವನಾಗಿರುವ ನಾನು ಆನಂತರ ಚೆನ್ನೈ ಹಾಗೂ ಮುಂಬೈನಲ್ಲಿ ನೆಲೆಸಿದ್ದೆ. ಮೊದಲ ಚಿತ್ರವನ್ನು ಕನ್ನಡದಲ್ಲೇ ನಿರ್ಮಿಸಿ, ನಿರ್ದೇಶಿಸಬೇಕೆಂಬ ಆಸೆಯಿತ್ತು. ಅದು ಈಗ ಈಡೇರಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು’ ಎಂದಿದ್ದಾರೆ ನಿರ್ದೇಶಕರು.

ಶ್ರೀಯಾ ಶುಕ್ಲ ನಾಯಕಿ. ಹಿರಿಯ ನಟಿ ಭವ್ಯ, ಶೋಭರಾಜ್, ಶಿವ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಜ್ ಭಾಸ್ಕರ್ ಸಂಗೀತ ನಿರ್ದೇಶನ, ಪಿ. ವಿ.ಆರ್ ಸ್ವಾಮಿ ಛಾಯಾಚಿತ್ರಗ್ರಹಣ ಹಾಗೂ ಗುರುಪ್ರಸಾದ್ ಸಂಕಲನ ಈ ಚಿತ್ರಕ್ಕಿದೆ.

ಮಾತೊಂದ ಹೇಳುವೆ

ಹುಬ್ಬಳ್ಳಿ-ಧಾರವಾಡದ ಹುಡುಗ ಹಾಗೂ ಮೈಸೂರು ಭಾಗದ ಹುಡುಗಿಯ ಪ್ರೇಮ ಕಥೆಯನ್ನು ಹೊಂದಿರುವ ಚಿತ್ರವಿದು. ಮಯೂರ್ ಕಡಿ ನಾಯಕನಾಗಿ ನಟಿಸುವುದರ ಜತೆಗೆ ನಿರ್ದೇಶನವನ್ನೂ ಮಾಡಿದ್ದಾರೆ. ಅಪೂರ್ವ ಆರಾಧ್ಯ, ಗಿರೀಶ್ ಶಿವಣ್ಣ, ಪಿ.ಡಿ. ಸತೀಶ್ ಮುಂತಾದವರು ನಟಿಸಿದ್ದಾರೆ.

ಮಹೇಶ್ವರ ಮೋಷನ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. ಉಲ್ಲಾಸ್ ಕುಲಕರ್ಣಿ ಸಂಗೀತ, ಪರ್ವತೇಶ್ ಪೋಳ ಛಾಯಾಚಿತ್ರಗ್ರಹಣ ಹಾಗೂ ಅಭಯ್ ಕಡಿ ಸಂಕಲನವಿದೆ.

ಡೆಡ್ಲಿ ಲವರ್ಸ್

ನಾಗೇಂದ್ರ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಚಿತ್ರವಿದು. ಸಂಕಲನದ ಜವಾಬ್ದಾರಿಯನ್ನು ಅವರೇ ಹೊತ್ತುಕೊಂಡಿದ್ದಾರೆ. ಅಖಿಲ್ ಕುಮಾರ್ ಬಂಡವಾಳ ಹೂಡುವುದರ ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

‘ಎಸ್.ಉಮೇಶ್ ಬಳಿ ಕೆಲಸ ಕಲಿತುಕೊಂಡು ಚಿತ್ರದಲ್ಲಿ ಆರು ಜವಾಬ್ದಾರಿಗಳನ್ನು ಹೊತ್ತುಕೊಂಡಿದ್ದೇನೆ. ಪ್ರೇಮಿಗಳಿಬ್ಬರು ಭೂಗತಲೋಕಕ್ಕೆ ಕಾಲಿಟ್ಟು ಖಳನಾಯಕನಿಂದ ಡ್ರಗ್ಸ್ ಹಣವನ್ನು ಕದಿಯುತ್ತಾರೆ. ಅಲ್ಲಿಂದ ನಂತರ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಕಥೆ. ಮಂಚನಬೆಲೆ ಡ್ಯಾಂ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ’ ಎಂದಿದ್ದಾರೆ ನಾಗೇಂದ್ರ.

ತನುಪ್ರಸಾದ್ ನಾಯಕಿ. ಪ್ರೇಮಾ ಗೌಡ, ಭಾಸ್ಕರ್, ವಿನೋದ್, ಲಹರಿ ವೇಲು ಮುಂತಾದವರು ನಟಿಸಿದ್ದಾರೆ. ಲಯ ಕೋಕಿಲ ಸಂಗೀತ, ಹೆಚ್.ಎನ್. ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಕೌರವ್ ವೆಂಕಟೇಶ್

ಸೆಟ್ಟೇರಿತು ‘ಒಂದು ಸುಂದರ ದೆವ್ವದ ಕಥೆ’

ಸಾಹಸ ನಿರ್ದೇಶಕ ಕೌರವ್ ವೆಂಕಟೇಶ್ ನಾಯಕರಾಗಲು ಸಿದ್ಧರಾಗಿದ್ದಾರೆ. ಅವರ ನಟನೆಯ ‘ಒಂದು ಸುಂದರ ದೆವ್ವದ ಕಥೆ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಕಪಿಲ್ ಈ ಚಿತ್ರದ ನಿರ್ದೇಶಕ. ನೃತ್ಯ ನಿರ್ದೇಶಕರೂ ಆಗಿರುವ ಕಪಿಲ್ ಈ ಹಿಂದೆ ‘ದಾಸರಹಳ್ಳಿ’, ‘ದೇವದೂತ’ ಚಿತ್ರಗಳನ್ನು ನಿರ್ದೇಶಿಸಿದ್ದರು. ಇದು ಅವರ ನಿರ್ದೇಶನದ ಹತ್ತನೇ ಚಿತ್ರ.

‘ಜೂನ್ ಅಂತ್ಯಕ್ಕೆ ಬೆಂಗಳೂರು ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ಮಾಡಲಾಗುವುದು. ಆರು ಜನ ಪ್ರತಿಭಾವಂತ ಹೆಣ್ಣುಮಕ್ಕಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕೂಡಿಟ್ಟ ಹಣವನ್ನು ಮೋಸದಿಂದ ಕಳೆದುಕೊಳ್ಳುತ್ತಾರೆ. ಅದೇ ಕಾಲೋನಿಯಲ್ಲಿ ಕಾವಲುಗಾರನಾಗಿ ಕೆಲಸ ಮಾಡುವ ನಾಯಕ ಈ ಹೆಣ್ಣುಮಕ್ಕಳಿಗೆ ನ್ಯಾಯ ಕೊಡಿಸುತ್ತಾನೆ. ಹೇಗೆ ನ್ಯಾಯ ಕೊಡಿಸುತ್ತಾನೆ, ದೆವ್ವ ಹೇಗೆ ಬರುತ್ತದೆ ಎಂಬುದೇ ಚಿತ್ರಕಥೆ’ ಎಂದಿದ್ದಾರೆ ನಿರ್ದೇಶಕರು.

ಶೋಭಾವತಿ ಕಪಿಲ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸಾಯಿಕೃಷ್ಣ ಹೆಬ್ಬಾಳ ಅವರ ಚಿತ್ರಕಥೆ, ಸಂಭಾಷಣೆ, ಹರ್ಷ ಕೊಗೋಡ್ ಸಂಗೀತ, ಶಂಕರ್ ಆರಾಧ್ಯ ಛಾಯಾಚಿತ್ರಗ್ರಹಣ, ವಿನಯ್ ಜಿ. ಆಲೂರು ಸಂಕಲನವಿದೆ. ಕೆ.ಟಿ. ಮುನಿರಾಜ್, ಆರ್.ಲಕ್ಷ್ಮೀನಾರಾಯಣ ಗೌಡ, ಗುರುಪ್ರಸಾದ್ ಮುಂತಾದವರು ಚಿತ್ರದಲ್ಲಿದ್ದಾರೆ.

ಅದ್ಭುತ ಇನ್ನೊವೇಶನ್‌ಗಳ ರಚನೆ, ಇಂದು ಮತ್ತು ಎಂದೆಂದೂ.

75 Years of Prestige

ಸ್ವಚ್ಛ್ ಗ್ಯಾಸ್ ಸ್ಟವ್

ಲಿಫ್ಟ್ ಮತ್ತು ಲಾಕ್ ಮೆಕ್ಯಾನಿಸಮ್ ಇರುವ ಭಾರತದ ಏಕಮಾತ್ರ ಗ್ಯಾಸ್ ಸ್ಟವ್

Prestige®

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

ಸುಲಭ ಸ್ವಚ್ಛತೆಗಾಗಿ ಲಿಫ್ಟ್ ಅಂಡ್ ಲಾಕ್ ಮೆಕ್ಯಾನಿಸಮ್

2, 3 ಮತ್ತು 4 ಬರ್ನರ್‌ಗಳಲ್ಲಿ ಲಭ್ಯ

ಸ್ವಚ್ಛ್ ನಿಯೋ

ಸ್ವಚ್ಛ್ ಎಫಿಶಿಯಾ ಹಾಬ್



ಪ್ರೆಸ್ಟೀಜ್ ಏನನ್ನಾದರೂ ಯಾವುದಕ್ಕಾದರೂ ಎಕ್ಸ್‌ಚೇಂಜ್ ಆಫರ್*

25%-60% ರಿಯಾಯಿತಿ*

ಮೇ 1 ರಿಂದ ಜೂನ್ 30

ನಮ್ಮ ವಿನಿಮಯ ಸೇಲ್ ನಲ್ಲಿ ಹೊಸ ರೇಂಜ್ ನ ಕುಕ್ಕರ್‌ಗಳು, ಕುಕ್‌ವೇರ್ ಮತ್ತು ಕಿಚನ್ ಅಪ್ಲಾಯನ್ಸ್‌ಗಳಿಗೆ ಅಪ್ ಗ್ರೇಡ್ ಮಾಡಿಕೊಳ್ಳಿ

MADE WITH PRIDE IN INDIA | CUSTOMER CARE NO 080-60004411 | Scan to find Prestige Xclusive stores | Scan to avail exchange offer | Shop Online on shop.ttkprestige.com | ttk

*ಷರತ್ತುಗಳು ಅನ್ವಯಿಸುತ್ತವೆ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಎಲ್ಲಾ ರಿಯಾಯಿತಿಗಳು ಸಂಬಂಧಿತ ಉತ್ಪನ್ನದ ವಿಭಾಗಕ್ಕೆ ಮಾತ್ರ ಅನ್ವಯವಾಗುತ್ತವೆ, ಉಲ್ಲೇಖಿಸಿದ ಉತ್ಪನ್ನದ ಮೇಲೆ ಅಲ್ಲ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಯಾವುದೇ ಬ್ರ್ಯಾಂಡ್‌ನ ಹಳೆಯ ಸಾಮಾನುಗಳನ್ನು ಸ್ವೀಕರಿಸಲಾಗುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಏನನ್ನಾದರೂ ಯಾವುದಕ್ಕಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೇಯನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ ಸ್ಟೇಯನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ಇಂಡಕ್ಷನ್ ಕುಕ್‌ಟಾಪ್‌ಗಳು, ರೈಸ್ ಕುಕ್ಕರ್‌ಗಳು, ಚಿಮಣಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಒಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆ, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ https://shop.ttkprestige.com/anything-for-anything-offer ಗೆ ಭೇಟಿ ನೀಡಿ.

Prestige® Xclusive **Outer Ring Road: Hennur COFO**, Ph: 7204250679; **Tumkur Rd. 8th Mile, T.Dasarahalli COFO**, Ph: 9972541116; **Koramangala COFO**, Ph: 9663515616; **Tumkur COFO**, Ph: 9164853121; **Bull Temple Rd, Ph**: 26609012; **Malleswaram, Ph**: 9448282470; Rt Nagar Main Rd, Ph: 8970150672; **Wheeler Rd, Ph**: 25803080; **Vijayanagar, Ph**: 9739004750; Hsr Bda Complex, **Ph**: 25726991; **Marathahalli, Ph**: 42197088; **Sanjaynagar, Ph**: 41258300; **Banaswadi Ring Rd, Ph**: 41634115; **Jayanagar, Ph**: 9845066549; **Rajarajeshwaringr, Ph**: 28603540, 9008418800; **Kengeri Stl Town, Ph:** 28485296; **Rajajinagar, Ph:** 41731224; **B.T.M.Layout, Ph:** 40939168; **Sarjapur Rd Kaikondralli, Ph**: 42038646; **Konankunte Cross, Ph: 8618207299**; **Nagharabhavi Bda Complx**, Ph: 9739004750; **Begur, Ph**: 8970366139; **Vidyaranayapura, Ph**: 9845518824; **Wilson Garden, Ph**: 9480010720; **Brookefield, Ph: 9980097982**, **Ramamurthynagar, Ph**: 08042049545; **Kr Puram, Ph**: 8861494277; **Cambridge Layout, Ph**: 42074468; **Kaggadaspura, Ph**: 7019776742; **Kammanahalli, Ph**: 41606044; **Whitefield, Ph**: 40907273; **Chandapura, Ph**: 9036190725; **Dommasandra**: **Ph: 9480360656**; **Hesarghatta Road, Ph:** 28370400; **Uttarahalli, Ph**: 9986879095; **Anjananagr Magadi Rd, Ph: 23281206**; **Kadugodi, Ph:** 8123042234; **Singasandra, Ph**: 8050608042; **Yelahanka Newtown, Ph:** 8668034376; **Mahalakshmi Lyt, Ph:** 23572233; **Jpnagar 7th Phase, Puttenahalli**, Ph: 41465855; **Kumaraswamy Lyt, Ph:** 08026664702; **Chandra Lyt**, Ph: 9739004750; **Channasandra, Ph: 8660024504**; **Sheshadripuram**, 8711090976, **8970150672**; **Attibele, Ph**: 9341221525; **Jigani**, Ph: 8762069852; **Sarjapura Town, Ph**: 9611423555; **Hosa Rd Junction, Ph**: 9845597099; **Mathikere**, Ph: 6366636592; **Basaveshwaranagar, Ph**: 9739591008;**Thalagatapura, Ph**: 9964116888; **Hegganahalli, Ph**: 28360289; **Gottigere, Ph**: 8431241099; **Ullal, Ph**: 9686646565; **Jayanagar 9th Block, Ph**: 9945446335; **Nelamangala, Ph**: 9632356627; **Kolar, Ph**: 9738882584; **Channapatna, Ph**: 968661294; **Madhugiri, Ph**: 9611552805; **Gubbi: Ph**: 9035195120, 8095459040; **Vijayabank Colony, Bilekahalli**, 8970366139; **Whitefield**, 08040907273; **Malur** 9845028859, **Kumbalagodu** 9845014860, **Devanahalli, Ph**: 9845737576; **Thanisandra, Ph**: 9686340159; **Hulimavu**, 8904654433; **Electronic City 1st Phase**, Ph: 9449455556; **Anekal, Ph**: 8660070202; **Tiptur, Ph**: 9164688773; **Bhyadarahalli, Ph**: 9845982089; **Hennur Bande, Ph**: 9980097982; **Tc Palya Road, Ph**: 9148775224; **Chikkajaala COFO, Ph**: 6360371839; **Mutthanallur, Ph**: 8970736606; **Madnayakhalli, Ph**: 8951515939; **Hoskote, Ph**: 9845028859; **Sira, Ph**: 8310660400; **Gouribidnur, Ph**: 9731114656; **Kadubeesanahalli, Ph**: 80508 37853; **Dodballapura, Ph**: 9035349755, 9972435545. **For Franchisee Enquiry Contact**: Ayush Kumar Sahu, **Ph**: 9993010283; Raveendra, **Ph:** 9844197664; Hareesh, **Ph**: 8050501513; Asif, **Ph**: 8861691770.

Also Available At: Jayanagar: Sarathy, **Ph**: 41210047; Vishaals, **Ph**: 08022447285; Royal Mart, **Ph**: 8790311104; Anjana Superstores, **Ph:** 41301836; Kitchenmart, Ph: 26652885; Aravinda, Ph: 41301989; **Bankcolony:** Vardhaman Ind, Ph: 22428300; **Banashankari:** Varada Glass & Crky, Ph: 9980949316; Patel Agn, Ph: 26714285; Patel Kitchen Apl, Ph: 9079061706;Chamundi Ind, Ph: 26712633; **Bilekhalli**: Sree Pooja Ha, Ph: 9036919084; **Bommanahalli**: Sri Durga Ha, Ph: 9900674018;**Chamarjpet**: Vadirajstores, Ph: 41517646; **Devarachikkanahalli:** Sapna Ha, Ph: 9738732036; **Electronic City:** Dream Mart Hm, Ph: 9148934858; **Hosa Rd**: Maharaja Kw, Ph: 9036400829; **Hosakota:** Dream Mart Hm, Ph: 9964744480; **Isro Layout;** Bhumi Kitchen, Ph: 9916830850; **Jp Nagar**: Surya Kitchen World, Ph: 9449762988; **Kanakapura Rd**: Royal Mart, Ph: 28425777; **Padmanabnagar**: Royalmart, Ph: 9886088993; **Uthrahalli**: Royalmart, Ph: 26394114;Rme Super Market, Ph: 9964228208; **Mysore Road**: The Karnataka Metal Industry, Ph: 9449342727; **Ayyappanagar**: Top Mart Sm, Ph: 7204448111; **Babusapalya**: Karnataka Ha, Ph: 8105754544; **Basaveshwar nagar:** Bigday Hm, Ph: 9972517344; Mahaveer Ha, Ph: 9844173501; Modern Colln, Ph: 23583440; Aadhinath Kitchen Gal, Ph: 41220555; **Gayathri Ngr**: J.K.Steel, Ph: 23320853; **Giri Nagar**: Vidya Ent, Ph: 9449988650; Matahji Ha, Ph: 7019385120; **Bagalgunte:** Royal Mart, Ph: 9538000072; **Chandra Layout:** Rajguru Kw, Ph: 9513034351; Pavan Kw, Ph: 8618028319; **Ganganagar:** Salemindustries, Ph: 41284470; Patel Ind, Ph: 8050899296; **Hesargatta Main Rd:** Royal Mart, Ph: 28398200; **Horamavu:** Mamtha Ha, Ph: 8880050050; **Hrbr Layout:** Bhavani Ha, Ph: 9845916164; **Harlurur**: Vinayaka Ha, Ph: 7760531454; **Katriguppe**: Mk Metal Mart, Ph: 9035779199; **Kr Puram**: Srm Elect, Ph: 9845445748; Pooja Ele And Mob, Ph: 9738850503; **Boodhigere Rd**: New Royal Fresh, Ph: 9538038885; **Kamanhalli:** Ramdev Steel, Ph: 7259575732; Hm Traders, Ph: 9964797616; **Kasavanahalli:** Mathaji Ha, Ph: 8880796036; **Kunadanahalli**: New Prakash Ha, Ph: 7090444111; **Kengeri**: Falcon Hm, Ph: 7829999066; **Koramangala**: Sowbhagya Traders, Ph: 7337733887; **Kmr Swy Layout:** Patel Ha, Ph: 8951979665; **Laggere**: Top Mart, Ph: 9110246047; **Lnpura:** Arihanth Ent, Ph: 7899633338; **Malleshwaram:** Deviprasad Ha, Ph: 23564536; Bright Novelty, Ph: 23343505; **Mathikere**: M.Bhawarlals Inc, Ph: 41724740; Maharaja Agency, Ph: 41278050; **Kadugodi:** Little Wonder, Ph: 9961224224; **Madiwala**: Surya Ha, Ph: 9449635332; **Malleshpalya:** Bajrang Ha, Ph: 9449526463; New Bheru Ha, Ph: 9448680738; Ramdev Ha, Ph: 9035175860; Sri Bhagawathi Ha, Ph: 9590575427; Maa Ambe Ha, Ph: 8884198322; **Magadiroad:** Royal Mart, Ph: 23584498; **Annaporneshwari Nagar:** Deepak Ha, Ph: 9148912736; **M S Palya**: Royal Mart, Ph: 8147014079; **B Narayanpura**: Yellow Mart, Ph: 7676726487; **Rajajinagar**: R S Mart, Ph:6363602929; Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801;Jayalakshmi Kw, Ph: 9844755146; R S Mart, Ph: 6363602929; Pooja Stl Cent, Ph: 23327014; **Rr Nagar:** Milan Ha, Ph: 28605619; Pavan Kg, Ph: 9739207043; **Tavarakere**: Mytri Mart Sm, Ph: 7996598838; **T C Palya:** Rhk Super Mkt, Ph: 9731668995; Big Day Sm, Ph: 8867604818; Karnataka Ha, Ph: 8105754544;**Tipsandra:** Pawar Ha, Ph: 9980517021; Milan Ha, Ph: 9986196375; Ramdev Ha, Ph: 7406901545; **Ulsoor:** Aishwaryapranam Ha, Ph: 9902788429; Pranam Steel Center, Ph: 9448053781;**Udaynagar:** Mother India, Ph: 9036189765; **Venkatapura:** Pooja Kg, Ph: 9900426176; **Vijayanagar**: Vijaylaxmi Kw, Ph: 9845022284; Mahendras, Ph: 23141126; Maruthi Ha, Ph: 8904689155; **Vidyarnapura:** Praksh Kw, Ph: 8050620877; Mahalakshmi Steel House, Ph: 9663375159; All Seasons Hm, Ph: 9946728736; **Whitefield**: Rolla Hm, Ph: 9148003448; Loyalcity, Ph: 7892565797; Royal Mart, Ph: 7079734574;**Yelahanka**: Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; **Btm Layout**: Patel Agencies, Ph: 9482853401;**Tumkur:** N.R Metal Agency, Ph: 0816-2275003; Kavitha Kitchen Ware, Ph: 9538537166;Surya Metal Store, Ph: 9731351050;Tumkur Trade Centre, Ph: 9901432287;Dharshan Ha, Ph: 9632132567;Sudha Ha, Ph: 9964011253; **Gubbi:** Keerthi Gas Stove, Ph: 9686004169;**Tiptur:** Sri Sai Electronics, Ph: 8861432166; Srirama Ent, Ph: 9880362018; Kumar And Kumar, Ph: 9141609900;**Turuvekere:** Sri Sai Electronics, Ph: 8861432166; **Pavgada:** Shivanagere Ha, Ph: 9880768236; Meenakshi Appl, Ph: 9880360326; **Sira:** Swamy Ent, Ph: 9741561491;Lakshmi Sreel, Ph: 9060434807; Mallikarjuna Ha, Ph: 8123206930; **Madhugiri**: Akshya Ha, Ph: 9141786066; Vinayaka Store, Ph: 9900219291; **Kunigal**: Karnataka Metal Stores, Ph: 9448550390; New Karnataka Steel Centre, Ph: 08132221548; Karnataka Ha, Ph: 8892197645; **Kgf**: Prakash Ha, Ph: 9845113454; **Bangarpet**: Kumar Stores, Ph: 9845935240; **Gauribidanur**: Sri Raju Ha, Ph: 9448249527; Dhighvijaya Elec, Ph: 7204757456; **Kanakapura:** Sri Kabbalamma Ha, Ph: 9880835508; **Kolar**: Reddy Ele, Ph: 9844472531; Rakesh Ele, Ph: 9880634555; Naveenprakash Ha, Ph: 9844997787; **Malur**: Srm Elec, Ph: 9845445748; Reddy Ele, Ph: 9844435121; **Vijayapura**: Rmcity, Ph: 9845164990; Reddy Ele, Ph: 9900336061; **Devanahalli:** New Sowmya Ele, Ph: 9141335210; **Chintamani:** Great India Ele, Ph: 9742963551; Lavanya Stores, Ph: 9242498294.

Available At: Pai INTERNATIONAL

ವಿನಿಮಯ ದರ: ಡಾಲರ್ 86.73 | ಪೌಂಡ್ 116.44 | ಯುರೊ 99.56 | ಯೆನ್ (100ಕ್ಕೆ) 60

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,812
ಇಂದಿನ ಅಂತ್ಯ:	24,793
ದಿನದ ಗರಿಷ್ಠ:	24,733
ಇಳಿಕೆ	18

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹585
	12 ಕ್ಕೆ	₹78
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹285-576
ದ್ವಿತಳಿ (ಬಿ.ವಿ)	₹300-689

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಕೊಬ್ಬರಿ ಧಾರಣೆ (ಕ್ವಿಂಟಾಲ್‌ಗೆ)

ಅರಸೀಕೆರೆ	₹20000-20000
ಹಿರಿಯೂರು	₹16146-16146
ಮಂಗಳೂರು	₹8000-13000
ತಿಪಟೂರು	₹22600-24211

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1400 (1410)
ಸೋಯಾ (ರಿಫೈನ್ಡ್)	₹1190 (1200)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1190 (1200)

ಮುಂಬೈ ಧಾರಣೆ (ಶೇಂಗಾ)

19-06-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1420)
ಒಂದು ವಾರದ ಡೆಲಿವರಿ	1405 (1415)
ಪಾಮ್ ವಾರದ ಡೆಲಿವರಿ	1188 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1280)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,000 (99,250)
ಬೆಳ್ಳಿ ಕೆ.ಜಿಗೆ	1,07,500 (1,09,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬೆಳ್ಳಿ ದರ ಕೆ.ಜಿಗೆ ₹1 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹150ರಷ್ಟು ಕಡಿಮೆಯಾಗಿ, ₹1,00,560ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹99,800 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1 ಸಾವಿರ ಕಡಿಮೆಯಾಗಿ, ₹1,07,200ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆಯಾಗಿದೆ. ಹೀಗಾಗಿ ಚಿನಿವಾರ ಪೇಟೆಯಲ್ಲೂ ಹಳದಿ ಲೋಹದ ಬೆಲೆ ಕಡಿಮೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	40098-41299	ಬೆಟ್ಟೆ	51399-58359	ಬೆಟ್ಟೆ	25099-41699
ಚಿಪ್ಪು	17699-31169	ಗೊರಬಲು	19151-30199	ಬಿಳಿಗೋಟು	19199-32199
ಕೋಕ	6099-16599	ರಾಶಿ	46009-57599	ಚಾಲಿ	35299-42099
ಹೊಸಚಾಲಿ	33100-41299	ಸರಕು	51300-99896	ಕೆಂಪುಗೋಟು	21399-22099
ಸಾಗರ		**ಸಿದ್ದಾಪುರ**		ರಾಶಿ	42899-48699
ಬಿಳಿಗೋಟು	8099-26599	ಬಿಳಿಗೋಟು	23899-33119	**ಯಲ್ಲಾಪುರ**	
ಚಾಲಿ	16599-36611	ಚಾಲಿ	35119-40099	ಬಿಳಿಗೋಟು	16005-32600
ಕೋಕ	7099-24169	ಕೋಕ	15609-24369	ಚಾಲಿ	32999-40630
ಕೆಂಪುಗೋಟು	12786-31699	ಕೆಂಪುಗೋಟು	22899-23219	ಕೋಕ	8699-16612
ರಾಶಿ	24989-57019	ರಾಶಿ	42099-46499	ಕೆಂಪುಗೋಟು	18000-25717
ಸಿಪ್ಪೆಗೋಟು	7099-17709	ತಟ್ಟಿಬೆಟ್ಟೆ	28089-40389	ರಾಶಿ	39209-51009
				ತಟ್ಟಿಬೆಟ್ಟೆ	27722-37919

ಮೊಳಕೆ ಬಾರದೆ ಕೊಳೆತ ಆಲೂಗಡ್ಡೆ

‘ನಿರಂತರ ಮಳೆಯಿಂದಾಗಿ ಬೆಳೆಗೆ ಹಾನಿ ಆಗಿರುವ ಸಾಧ್ಯತೆ’

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಕಳೆದ ವರ್ಷ ಅತಿವೃಷ್ಟಿಯಿಂದ ಆಲೂಗಡ್ಡೆ ಬೆಳೆ ನಾಶವಾಗಿ ನಷ್ಟ ಅನುಭವಿಸಿದ್ದ ತಾಲ್ಲೂಕಿನ ಬೆಳೆಗಾರರು ಈ ವರ್ಷವೂ ಸಂಕಷ್ಟಕ್ಕೆ ಸಿಲುಕಿದ್ದಾರೆ. 20 ದಿನಗಳ ಹಿಂದೆ ಬಿತ್ತನೆ ಮಾಡಿದ್ದ ಆಲೂಗಡ್ಡೆ ಮೊಳಕೆಯೊಡೆಯದೆ ದಿಕ್ಕುತೋಚದಂತಾಗಿದ್ದಾರೆ.

ತಾಲ್ಲೂಕಿನ ಹಂಗಳ, ಮಗುವಿನಹಳ್ಳಿ, ಮಲುಕನಹಳ್ಳಿ, ಕಲ್ಲಿಗೌಡನಹಳ್ಳಿ, ಶಿವಪುರ ಗ್ರಾಮದ ಸುತ್ತಮುತ್ತ 150 ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದ ಆಲೂಗಡ್ಡೆ ಹಲವು ದಿನಗಳಾದರೂ ಮೊಳಕೆ ಬಾರದ ಸಂಶಯಗೊಂಡ ರೈತರು ಭೂಮಿ ಅಗೆದು ನೋಡಿದಾಗ ಆಲೂಗಡ್ಡೆ ಸಂಪೂರ್ಣ ಹಾಳಾಗಿರುವುದು ಕಂಡುಬಂದಿದೆ.

ತಾಲ್ಲೂಕಿನ ಪ್ರಮುಖ ತರಕಾರಿ ಬೆಳೆಯಾಗಿರುವ ಆಲೂಗಡ್ಡೆಯನ್ನು ತಾಲ್ಲೂಕಿನಾದ್ಯಂತ 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗುತ್ತದೆ. ಸಾಮಾನ್ಯವಾಗಿ ಬೆಕ್ಕಲು ಭೂಮಿಯಲ್ಲಿ ಮೇ ಅಂತ್ಯದಲ್ಲಿ ಹಾಗೂ ಜೂನ್ ಆರಂಭದಲ್ಲಿ ನಾಟಿ ಶುರುವಾಗುತ್ತದೆ. ಈ ಬಾರಿಯು ಹಂಗಾಮಿನ ಆರಂಭದಲ್ಲಿ ಬಿತ್ತನೆ ಮಾಡಿದ್ದ ಆಲೂಗಡ್ಡೆ ಮೊಳಕೆಯೊಡೆದಿಲ್ಲ.



ಗುಂಡ್ಲುಪೇಟೆ ತಾಲ್ಲೂಕಿನ ಶಿವಪುರ ಗ್ರಾಮದ ಸುತ್ತಮುತ್ತ ಬಿತ್ತನೆ ಮಾಡಿದ್ದ ಆಲೂಗಡ್ಡೆ ಕೊಳೆತಿದೆ

‘ಒಂದು ಎಕರೆ ಆಲೂಗಡ್ಡೆ ಬಿತ್ತನೆಗೆ ₹50 ಸಾವಿರ ಖರ್ಚಾಗಿದೆ. ‘ಬಿ’ ಮಾರ್ಕಿನ ಆಲೂಗಡ್ಡೆ ಮೊಳಕೆ ಒಡೆದಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ತೋಟಗಾರಿಕೆ ಇಲಾಖೆಯು ಪತ್ತೆಹಚ್ಚಿ ಪರಿಹಾರ ನೀಡಬೇಕು’ ಎಂದು ರೈತ ಮುಖಂಡ ಪುಟ್ಟಬುದ್ದಿ ಒತ್ತಾಯಿಸಿದ್ದಾರೆ.

‘ಮೊಳಕೆಯೊಡೆಯದ ಆಲೂಗಡ್ಡೆಗಳನ್ನು ಧಾರವಾಡ ಸಂಶೋಧನಾ ಕೇಂದ್ರಕ್ಕೆ ಪರೀಕ್ಷೆಗೆ ಕಳುಹಿಸಲಾಗಿದ್ದು, ವರದಿ ಬಂದ ಬಳಿಕ ಕಾರಣ ತಿಳಿಯಲಿದೆ. ನಿರಂತರ ಮಳೆಗೆ ಭೂಮಿಯೊಳಗೆ ತೇವಾಂಶ ಹೆಚ್ಚಾಗಿ, ಬಿತ್ತನೆ ಆಲೂಗಡ್ಡೆ ಕೊಳೆತಿರಬಹುದು’ ಎಂದು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ಹೇಳಿದ್ದಾರೆ.

ಲಂಡನ್‌ಗೆ ತಾಜಾ ನೇರಳೆ ರಫ್ತು ಶುರು

ಬೆಂಗಳೂರು (ಪಿಟಿಐ): ಕೇಂದ್ರ ವಾಣಿಜ್ಯ ಸಚಿವಾಲಯದ ಅಂಗಸಂಸ್ಥೆಯಾಗಿರುವ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು (ಎಪಿಇಡಿಎ) ಕರ್ನಾಟಕದಿಂದ ಲಂಡನ್‌ಗೆ ತಾಜಾ ನೇರಳೆ ಹಣ್ಣುಗಳ ರಫ್ತಿಗೆ ಗುರುವಾರ ಚಾಲನೆ ನೀಡಿದೆ.

‘ಇದು ದೇಶದ ವಿವಿಧ ಭಾಗಗಳ ಸಾಂಪ್ರದಾಯಿಕ ಹಣ್ಣುಗಳನ್ನು ಜಾಗತಿಕ ಮಾರುಕಟ್ಟೆಗಳಿಗೆ ತಲುಪಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಇದುವರೆಗೆ ಶೀತಲೀಕೃತ ನೇರಳೆ ಹಣ್ಣುಗಳನ್ನು ಮಾತ್ರ ರಫ್ತು ಮಾಡಲಾಗುತ್ತಿತ್ತು.

ನೇರಳೆ ಹಣ್ಣುಗಳನ್ನು ರೈತ ಉತ್ಪಾದನಾ ಸಂಸ್ಥೆಯಿಂದ (ಎಫ್‌ಪಿಒ) ನೇರವಾಗಿ ಪಡೆದುಕೊಳ್ಳಲಾಗಿದೆ ಎಂದು ಎಪಿಇಡಿಎ ಹೇಳಿದೆ. ರಫ್ತು ಮಾಡುವುದರಿಂದ ನೇರಳೆ ಹಣ್ಣಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ರಫ್ತುದಾರ ಪಾರ್ಥಸಾರಥಿ ಹೇಳಿದ್ದಾರೆ.

ರೈತರಿಗೆ ಈ ಹಣ್ಣು ಮಾರಾಟದಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹60ರವರೆಗೆ ಸಿಗುತ್ತದೆ. ಆದರೆ ರಫ್ತು ಮಾಡುವುದರಿಂದ ಕೆ.ಜಿ. ನೇರಳೆ ಹಣ್ಣಿಗೆ ಸರಾಸರಿ ₹110 ಸಿಗುತ್ತದೆ.

ಇರಾನ್ ಕ್ರಿಪ್ಟೊ ಎಕ್ಸ್‌ಚೇಂಜ್ ಹ್ಯಾಕ್: 9 ಕೋಟಿ ಡಾಲರ್ ಖಾಲಿ

ದುಬೈ(ಎಪಿ): ಹ್ಯಾಕರ್‌ಗಳ ಗುಂಪೊಂದು ಇರಾನ್‌ನ ಅತ್ಯಂತ ದೊಡ್ಡ ಕ್ರಿಪ್ಟೊ ಕರೆನ್ಸಿ ಎಕ್ಸ್‌ಚೇಂಜ್ ‘ನೋಬಿಟೆಕ್ಸ್’ ಅನ್ನು ಹ್ಯಾಕ್ ಮಾಡಿ, 9 ಕೋಟಿ ಡಾಲರ್ (ಅಂದಾಜು ₹781 ಕೋಟಿ) ನಷ್ಟು ಮೊತ್ತವನ್ನು ಖಾಲಿ ಮಾಡಿದೆ ಎಂದು ಮೂಲಗಳು ಹೇಳಿವೆ.

ಹ್ಯಾಕರ್‌ಗಳು ಇಸ್ರೇಲ್‌ನೊಂದಿಗೆ ನಂಟು ಹೊಂದಿರುವ ಸಾಧ್ಯತೆ ಇದೆ ಎಂದು ಬ್ಲಾಕ್‌ಚೈನ್ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಂಪನಿ ಎಲಿಪ್ಟಿಕ್ ಹೇಳಿದೆ.

ಕ್ರಿಪ್ಟೊ ಕರೆನ್ಸಿ ಎಕ್ಸ್‌ಚೇಂಜ್ ಹ್ಯಾಕ್ ಮಾಡಿರುವ ಕುರಿತು ಹ್ಯಾಕರ್‌ಗಳ ಗುಂಪು, ಸಾಮಾಜಿಕ ಮಾಧ್ಯಮ ‘ಟೆಲಿಗ್ರಾಮ್’ ಖಾತೆಯಲ್ಲಿ ಬರೆದುಕೊಂಡಿದೆ.

ವಾಲ್‌ಮಾರ್ಟ್ ವೃದ್ಧಿ: 1 ಲಕ್ಷ ಎಂಎಸ್‌ಎಂಇ ಸೇರ್ಪಡೆ

ನವದೆಹಲಿ (ಪಿಟಿಐ): ಪೂರೈಕೆದಾರರ ಅಭಿವೃದ್ಧಿ ಯೋಜನೆಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಭಾರತದ ಎಂಎಸ್‌ಎಂಇ ವಲಯದ 1 ಲಕ್ಷ ಉದ್ದಿಮೆಗಳನ್ನು ಸೇರಿಸಿಕೊಳ್ಳಲಾಗುವುದು ಎಂದು ವಾಲ್‌ಮಾರ್ಟ್ ಕಂಪನಿ ಹೇಳಿದೆ.

‘ಮುಂದಿನ ಮೂರು ವರ್ಷಗಳಲ್ಲಿ ವಾಲ್‌ಮಾರ್ಟ್ ವೃದ್ಧಿ ಯೋಜನೆಯ ಅಡಿ ಹೆಚ್ಚುವರಿಯಾಗಿ 1 ಲಕ್ಷ ಎಂಎಸ್‌ಎಂಇ ಉದ್ದಿಮೆಗಳ ಬಲವರ್ಧನೆಗೆ ಐಡಿಯಾಸ್ ಟು ಇಂಪ್ಯಾಕ್ಟ್ ಫೌಂಡೇಷನ್ ಜೊತೆ ಪಾಲುದಾರಿಕೆ ಮಾಡಿಕೊಂಡಿದ್ದೇವೆ’ ಎಂದು ವಾಲ್‌ಮಾರ್ಟ್ ಇಂಟರ್‌ನ್ಯಾಷನಲ್‌ನ ಹಿರಿಯ ಅಧಿಕಾರಿ ಜೇಸನ್ ಫ್ರೆಮ್‌ಸ್ಟಡ್ ಹೇಳಿದ್ದಾರೆ. ಈ ಪಾಲುದಾರಿಕೆಯು ಕಂಪನಿಗೆ ತನ್ನ ಜಾಗತಿಕ ಕಾರ್ಯಾಚರಣೆಗಳಿಗೆ ಭಾರತದಿಂದ ಉತ್ಪನ್ನಗಳನ್ನು ಖರೀದಿಸಲು ನೆರವಾಗಲಿದೆ. ‘ವೃದ್ಧಿ’ ಯೋಜನೆಯ ಮೂಲಕ ಕಂಪನಿಯು ಭಾರತದ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಕೌಶಲಗಳನ್ನು, ಮಾರುಕಟ್ಟೆ ಲಭ್ಯತೆಯನ್ನು ಒದಗಿಸುತ್ತಿದೆ.

ಸುದ್ದಿ 2 ನಿಮಿಷ

ಕರ್ನಾಟಕದ ಸ್ಪರ್ಧಾತ್ಮಕತೆ ಹೆಚ್ಚಳಕ್ಕೆ ಶ್ರಮ: ಸಿಐಐ

ಬೆಂಗಳೂರು: ಜಾಗತಿಕ ವೇದಿಕೆಯಲ್ಲಿ ಕರ್ನಾಟಕದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಒತ್ತು ನೀಡುವುದಾಗಿ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಕರ್ನಾಟಕದ ಅಧ್ಯಕ್ಷ ರಬೀಂದ್ರ ಶ್ರೀಕಂಠನ್ ಹೇಳಿದ್ದಾರೆ.

ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಕರ್ನಾಟಕದ ಸ್ಪರ್ಧಾತ್ಮಕತೆ ಹೆಚ್ಚಳ: ಜಾಗತೀಕರಣ, ಒಳಗೊಳ್ಳುವಿಕೆ, ಸುಸ್ಥಿರತೆ, ವಿಶ್ವಾಸ’ ಕುರಿತಂತೆ ರಾಜ್ಯದ ಸ್ಪರ್ಧಾತ್ಮಕತೆ ಹೆಚ್ಚಿಸುವ ನೀಲನಕ್ಷೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಮುಂತಾದ ನಗರಗಳನ್ನು ಕೇಂದ್ರೀಕರಿಸಿ ಉತ್ತರ ಕರ್ನಾಟಕವನ್ನು ಬಲಪಡಿಸುವ ಗುರಿಯನ್ನು ನೀಲನಕ್ಷೆ ಒಳಗೊಂಡಿದೆ. ಕಲ್ಯಾಣ ಕರ್ನಾಟಕದಲ್ಲಿನ ಕೈಗಾರಿಕೆಗಳ ಅಭಿವೃದ್ಧಿಗೆ ಕಲಬುರಗಿಯಲ್ಲಿ ಕಚೇರಿ ಸ್ಥಾಪನೆ ಮಾಡಲಾಗುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇಂಧನ, ಎಂಎಸ್‌ಎಂಇಗಳ ಸಾಮರ್ಥ್ಯ ಹೆಚ್ಚಿಸುವುದು, ಕೃತಕ ಬುದ್ಧಿಮತ್ತೆ ಆಧಾರಿತ ಪರಿವರ್ತನೆ, ಸೆಮಿಕಂಡಕ್ಟರ್‌ಗಳು, ಸೌರ ಯೋಜನೆಗಳು, ಮೂಲಸೌಕರ್ಯ ಸೇರಿ ಹಲವು ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಇದಕ್ಕಾಗಿ ರಾಷ್ಟ್ರೀಯ, ಪ್ರಾದೇಶಿಕ ಮತ್ತು ಕರ್ನಾಟಕದ ಥೀಮ್ ಹೊಂದಲಾಗಿದೆ ಎಂದರು.

ಜಿಎಸ್‌ಟಿ, ತೆರಿಗೆ ಸರಳೀಕರಣ, ಸರಳವಾಗಿ ಉದ್ಯಮ ನಡೆಸಲು ನೀತಿಗಳನ್ನು ಅನುಸರಿಸುವುದು, ಸಮತೋಲನದ ಕೈಗಾರಿಕಾ ಅಭಿವೃದ್ಧಿಗೆ ಮೂಲಸೌಕರ್ಯ ಮತ್ತು ಸಂಪರ್ಕದ ಸುಧಾರಣೆಗಳನ್ನು ಆದ್ಯತೆಗಳಾಗಿವೆ ಎಂದರು.

ಸಿಐಐ ಕರ್ನಾಟಕದ ಉಪಾಧ್ಯಕ್ಷ ಗುರುಪ್ರಸಾದ್ ಮುದ್ಲಾಪುರ್, ಸಿಐಐ ಕರ್ನಾಟಕದ ನಿರ್ದೇಶಕಿ ರಾಧಿಕಾ ಧಲ್ ಇದ್ದರು.

ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್ ಐಪಿಒ 24ರಿಂದ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ಅಂಗ ಸಂಸ್ಥೆಯಾದ ಬ್ಯಾಂಕೇತರ ಹಣಕಾಸು ಸಂಸ್ಥೆ ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್, ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ₹12,500 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಐಪಿಒ ವೇಳೆ ಜೂನ್ 25ರಿಂದ 27ರವರೆಗೆ ಸಾರ್ವಜನಿಕರಿಗೆ ಷೇರುಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಇರಲಿದೆ. ಜೂನ್ 24ರಂದು ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) ಅರ್ಜಿ ಸಲ್ಲಿಸಬಹುದು ಎಂದು ಬ್ಯಾಂಕ್ ಷೇರುಪೇಟೆಗೆ ಗುರುವಾರ ತಿಳಿಸಿದೆ.

ಬ್ಯಾಂಕ್‌ನ ಅರ್ಹ ಉದ್ಯೋಗಿಗಳು ಮತ್ತು ಷೇರುದಾರರಿಗೆ ಐಪಿಒದಲ್ಲಿ ಮೀಸಲಾತಿ ಇರುತ್ತದೆ. ಐಪಿಒ ಮೂಲಕ ಸಂಗ್ರಹಿಸುವ ಬಂಡವಾಳವನ್ನು ಭವಿಷ್ಯದ ಬಂಡವಾಳ ಅಗತ್ಯತೆ, ವ್ಯಾಪಾರದ ಬೆಳವಣಿಗೆಗೆ ಬಳಸಲಾಗುವುದು ಎಂದು ತಿಳಿಸಿದೆ.

ಪ್ರಸ್ತುತ ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 94.36ರಷ್ಟು ಪಾಲನ್ನು ಹೊಂದಿದೆ.

ಅಮೆಜಾನ್: ₹2 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಭಾರತದಲ್ಲಿನ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಲು, ಗ್ರಾಹಕರಿಗೆ ತ್ವರಿತ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸಲು ಪ್ರಸಕ್ತ ವರ್ಷದಲ್ಲಿ ₹2 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡಲಾಗುವುದು ಎಂದು ಇ–ಕಾಮರ್ಸ್ ಕಂಪನಿ ಅಮೆಜಾನ್ ಗುರುವಾರ ತಿಳಿಸಿದೆ.

ಈ ಹೂಡಿಕೆ ಕಂಪನಿಯ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಕಂಪನಿಯ ಸೇವೆಗಳನ್ನು ದೇಶದ ಹೆಚ್ಚಿನ ಸ್ಥಳಗಳಿಗೆ ತಲುಪಿಸಲು ಅನುವು ಮಾಡಿಕೊಡಲಿದೆ. ಜೊತೆಗೆ ಈ ಹೂಡಿಕೆಯಿಂದಾಗಿ ಹೊಸ ಪ್ರದೇಶಗಳಿಗೆ ಸೇವೆಗಳನ್ನು ತಲುಪಿಸಲು ಸಾಧ್ಯವಾಗುವ ನಿರೀಕ್ಷೆ ಇದೆ. ಕಂಪನಿಯ ಉದ್ಯೋಗಿಗಳ ಆರೋಗ್ಯ ಮತ್ತು ಆರ್ಥಿಕ ಸುಧಾರಣೆ ಗುರಿ ಹೊಂದಲಾಗಿದೆ ಎಂದು ತಿಳಿಸಿದೆ.

ಸರಕುಗಳನ್ನು ಮನೆಗೆ ತಲುಪಿಸುವವರ ಸುರಕ್ಷತೆಗೆ ತಂತ್ರಜ್ಞಾನವನ್ನು ಬಳಸಿಕೊಂಡು ಮಾಹಿತಿ ನೀಡಲಾಗುವುದು ಎಂದು ತಿಳಿಸಿದೆ.

ಭಾರತ ಇ–ವಾಣಿಜ್ಯ ಮಾರುಕಟ್ಟೆಯು ಬೆಳವಣಿಗೆ ಕಾಣುತ್ತಿರುವ ಸಂದರ್ಭದಲ್ಲಿ ಅಮೆಜಾನ್ ಕಂಪನಿಯು ಈ ಹೂಡಿಕೆಯ ಬಗ್ಗೆ ಘೋಷಣೆ ಮಾಡಿದೆ.

‘ಸತತ ದಾಳಿ: ಆತಂಕದಲ್ಲಿ ಕನ್ನಡಿಗರು’

ಯುದ್ಧಗ್ರಸ್ತ ನೆಲದಲ್ಲಿ ಸಿಲುಕಿರುವ ಕರ್ನಾಟಕದ ನೂರಾರು ಮಂದಿ

• ಗಣಪತಿ ಹೆಗಡೆ

ಕಾರವಾರ: ‘ಇಸ್ರೇಲ್ ಮೇಲೆ ಹಮಾಸ್ ಉಗ್ರರು ನಿರಂತರ ದಾಳಿ ನಡೆಸಿದಾಗಲೂ ಆತಂಕ ಆಗಿರಲಿಲ್ಲ. ಈಗ ಭಾರಿ ಪ್ರಮಾಣದಲ್ಲಿ ಕ್ಷಿಪಣಿಗಳು ಎರಗುತ್ತಿವೆ. ಭಯದಲ್ಲಿ ದಿನ ಕಳೆಯುತ್ತಿದ್ದೇವೆ’ ಎಂದು ಇಸ್ರೇಲ್‌ನಲ್ಲಿ ನೆಲಸಿರುವ ಕನ್ನಡಿಗರು ಆತಂಕಗೊಂಡಿದ್ದಾರೆ.

‘ಹೊಟ್ಟೆಪಾಡಿಗೆ ಬಂದಿದ್ದೇವೆ. ಇಲ್ಲಿ ಸಂದಿಗ್ಧ ಸ್ಥಿತಿಗೆ ಸಿಲುಕಿದ್ದೇವೆ. ಇಸ್ರೇಲ್‌ಗೆ ಬಂದು 10ಕ್ಕೂ ಹೆಚ್ಚು ವರ್ಷವಾಯಿತು. ಈ ಬಾರಿ ಮಾತ್ರ ಭಯದ ವಾತಾವರಣ ಮೂಡಿದೆ’ ಎಂದು ಇಸ್ರೇಲ್ ರಾಜಧಾನಿ ಟೆಲ್ ಅವೀವ್‌ನಲ್ಲಿ ನೆಲೆಸಿರುವ ಕುಮಟಾದ ದೀಪಕ್ ಹೇಳಿದರು.

ಇಸ್ರೇಲ್ ದೇಶದಲ್ಲಿ ವಿವಿಧ ಉದ್ಯೋಗ ನಂಬಿ ರಾಜ್ಯದ ನೂರಾರು ಜನರು ನೆಲಸಿದ್ದಾರೆ. ಅವರ ಪೈಕಿ ಅಲ್ಲಿನ ವೃದ್ಧರ ಮನೆಗಳಲ್ಲಿ ಉಳಿದು ಅವರ ಆರೈಕೆ ನೋಡಿಕೊಳ್ಳುವ ಶುಶ್ರೂಷಕರ ಸಂಖ್ಯೆ ಹೆಚ್ಚಿದೆ. ಕೈತುಂಬ ಸಿಗುವ ಲಕ್ಷಾಂತರ ವೇತನಕ್ಕಾಗಿ ಸಾಲ ಮಾಡಿ ಇಸ್ರೇಲ್‌ಗೆ ತೆರಳಿದವರ ಪೈಕಿ ಬಹುತೇಕ ಮಂದಿ ಸದ್ಯ ಆತಂಕದಲ್ಲಿದ್ದಾರೆ.

‘ಯುದ್ಧಪೀಡಿತ ನೆಲದಿಂದ ಹೊರಬಂದೆ’

ಇಸ್ರೇಲ್‌ನಿಂದ ಹಲವು ಕನ್ನಡಿಗರು ತವರಿಗೆ ಮರಳಿದ್ದಾರೆ. ಅವರ ಪೈಕಿ ಜಿಲ್ಲೆಯ 10ಕ್ಕೂ ಹೆಚ್ಚು ಜನರಿದ್ದಾರೆ. ತಿಂಗಳಿಗೆ ಲಕ್ಷಕ್ಕೂ ಹೆಚ್ಚು ಸಂಬಳ ಸಿಗುವ ಉದ್ಯೋಗ ತೊರೆದು ಅವರು ಮರಳಿದ್ದಾರೆ. ‘ಇಸ್ರೇಲ್‌ನಲ್ಲಿದ್ದಾಗ ನಾಲ್ಕು ವರ್ಷದಲ್ಲಿ ಹಲವು ಬಾರಿ ಆಕ್ರಮಣ ನೋಡಿದೆ. ಸುರಕ್ಷಿತವಾಗಿ ಮನೆಗೆ ಮರಳುವ ವಿಶ್ವಾಸ ಇದ್ದರೂ ಮನದಲ್ಲಿ ಅಳಕು ಇರುತಿತ್ತು. 6 ತಿಂಗಳ ಹಿಂದೆ ಊರಿಗೆ ಮರಳಿದೆ’ ಎಂದು ಭಟ್ಕಳದ ಉಮೇಶ್ ಹೇಳಿದರು.

> **ಜನರ ರಕ್ಷಣೆಗೆ ಇಸ್ರೇಲ್ ಸುಧಾರಿತ ತಂತ್ರಜ್ಞಾನ ಬಳಸುತ್ತಿದೆ. ಕ್ಷಿಪಣಿ ಎರಗುವ ಹಲವು ನಿಮಿಷ ಮೊದಲೇ ಮೊಬೈಲ್ ಸ್ಕ್ರೀನ್ ಮೇಲೆ ಸುರಕ್ಷಿತ ತಾಣ ಸೇರುವ ಸೂಚನೆ ಸಂದೇಶ ಬರುತ್ತದೆ**
> **ರೇಮಿ,** ಕಾರವಾರ ಮೂಲದ ಇಸ್ರೇಲ್ ನಿವಾಸಿ

‘ಐಪಿಎಲ್‌ನಲ್ಲಿ ಆರ್‌ಸಿಬಿ ಗೆದ್ದಾಗ ಟೆಲ್ ಅವೀವ್‌ನ ಲೂನಾ ಪಾರ್ಕ್‌ನಲ್ಲಿ ಕನ್ನಡಿಗರೇ ಸೇರಿ ಸಂಭ್ರಮಿಸಿದ್ದೆವು. ಒಂದೆರಡು ದಿನಗಳಲ್ಲೇ ಇರಾನ್ ಆಕ್ರಮಣ ಶುರುವಾಯಿತು. ಒಂದೆಡೆ ಸೇರಲು ಅವಕಾಶ ಆಗಿಲ್ಲ’ ಎಂದು ನೇತನ್ಯಾ ನಗರದಲ್ಲಿರುವ ಕಾರವಾರದ ರೇಮಿ ಹೇಳಿದರು.

‘ಕ್ಷಿಪಣಿ ದಾಳಿ ನಡೆದರೂ ಐರನ್ ಡೋಮ್‌ಗಳಿರುವ ಕಾರಣ ಹೆಚ್ಚು ಹಾನಿ ಆಗುತ್ತಿರಲಿಲ್ಲ. ಈ ಬಾರಿ ದೊಡ್ಡ ಪ್ರಮಾಣದಲ್ಲಿ ಕಟ್ಟಡಗಳಿಗೆ ಹಾನಿಯಾಗುತ್ತಿದೆ. ನೆಲಮಹಡಿಯ ಬಂಕರ್‌ಗಳಲ್ಲಿ ಹಲವು ತಾಸು ಅಡಗಿ ಕುಳಿತು ಕೊಳ್ಳುವ ಸ್ಥಿತಿ ಇದೆ’ ಎಂದು ವಿವರಿಸಿದರು.

‘ಭಾರತ–ಪಾಕ್ ನಾಯಕರೇ ಸಂಘರ್ಷ ನಿಲ್ಲಿಸಿದ್ದು’

ಒಂದನೇ ಪುಟದಿಂದ...

ಬಳಿಕ, ಮೇ 10ರಂದು ಭಾರತ ಮತ್ತು ಪಾಕಿಸ್ತಾನ ಸಂಘರ್ಷ ಸ್ಥಗಿತಗೊಳಿಸಲು ತೀರ್ಮಾನಿಸಿದವು. ಉಭಯ ದೇಶಗಳ ನಡುವಿನ ಸಂಘರ್ಷವನ್ನು ತಾನು ನಿಲ್ಲಿಸಿದ್ದಾಗಿ ಟ್ರಂಪ್ ಪದೇಪದೇ ಹೇಳುತ್ತಲೇ ಇದ್ದರು.

ಮುನೀರ್ ಅವರೊಂದಿಗಿನ ಮಾತುಕತೆ ವೇಳೆ ಇರಾನ್ ವಿದ್ಯಮಾನ ಕುರಿತು ಚರ್ಚೆ ನಡೆಯಿತೇ ಎಂಬ ಪತ್ರಕರ್ತರ ಪ್ರಶ್ನೆಗೆ, ‘ಇತರ ಎಲ್ಲ ದೇಶಗಳಿಗಿಂತ ಇರಾನ್ ಕುರಿತು ಪಾಕಿಸ್ತಾನಕ್ಕೆ ಚೆನ್ನಾಗಿ ಗೊತ್ತು. ಯಾವ ಬೆಳವಣಿಗೆ ಬಗ್ಗೆಯೂ ಪಾಕಿಸ್ತಾನಕ್ಕೆ ಅಸಮಾಧಾನ ಇಲ್ಲ. ಏನು ನಡೆಯುತ್ತಿದೆ ಎನ್ನುವುದು ಆ ದೇಶಕ್ಕೆ ಗೊತ್ತಿದೆ. ನನ್ನ ಅಭಿಪ್ರಾಯಕ್ಕೆ ಮುನೀರ್ ಅವರ ಸಹಮತ ಇದೆ’ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ಖಮೇನಿ ಕೊಲ್ಲುವೆವು: ಇಸ್ರೇಲ್ ಗುಡುಗು

ಒಂದನೇ ಪುಟದಿಂದ...

‘ಆಸ್ಪತ್ರೆಗಳ ಮೇಲೆ ದಾಳಿ ನಡೆಸುವಂತೆ ಸ್ವತಃ ಖಮೇನಿ ಆದೇಶಿಸುತ್ತಿದ್ದು, ಇಂತಹ ವ್ಯಕ್ತಿ ಜೀವಂತವಾಗಿ ಇರಲು ಅವಕಾಶ ನೀಡಬಾರದು’ ಎಂದೂ ಕ್ಯಾಟ್ಜ್ ಕಿಡಿಕಾರಿದ್ದಾರೆ.

ನಗರದ ಸೊರೊಕೊ ಮೆಡಿಕಲ್ ಸೆಂಟರ್ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಈ ದಾಳಿಯಲ್ಲಿ ಕನಿಷ್ಠ 200 ಮಂದಿ ಗಾಯಗೊಂಡಿದ್ದಾರೆ ಎಂದು ರಕ್ಷಣಾ ಕಾರ್ಯ ನಡೆಸುವ ಸಂಸ್ಥೆ ಮ್ಯಾಗನ್ ಡೇವಿಡ್ ಆ್ಯಡಮ್ ಹೇಳಿದೆ.

‘ಸೈರನ್ ಮೊಳಗಿದ ಕೆಲ ಹೊತ್ತಿನಲ್ಲಿಯೇ ಕ್ಷಿಪಣಿಗಳು ಆಸ್ಪತ್ರೆ ಕಟ್ಟಡಕ್ಕೆ ಅಪ್ಪಳಿಸಿದವು. ಭಾರಿ ಶಬ್ದ ಕೇಳಿಬಂತು’ ಎಂದು ಆಸ್ಪತ್ರೆಯ ಇಬ್ಬರು ವೈದ್ಯರು ಹೇಳಿದ್ದಾರೆ.

‘ಆಸ್ಪತ್ರೆಯ ಶಸ್ತ್ರಚಿಕಿತ್ಸಾ ವಿಭಾಗದ ಕಟ್ಟಡಕ್ಕೆ ಹಾನಿಯಾಗಿದೆ. ಇತ್ತೀಚೆಗಷ್ಟೆ ಈ ಕಟ್ಟಡದಿಂದ ಜನರನ್ನು ತೆರವು ಮಾಡಲಾಗಿತ್ತು. ಹೀಗಾಗಿ ಪ್ರಾಣಹಾನಿ ಆಗಿಲ್ಲ. ಸದ್ಯ, ಜೀವಕ್ಕೆ ಅಪಾಯ ಇರುವ ರೋಗಿಗಳನ್ನು ಹೊರತುಪಡಿಸಿ ಉಳಿದ ರೋಗಿಗಳನ್ನು ಸ್ಥಳಾಂತರ ಮಾಡಲಾಗಿದೆ’ ಎಂದು ಸೊರೊಕೊ ಆಸ್ಪತ್ರೆ ಹೇಳಿದೆ.

ಇರಾನ್‌ನಿಂದ ದೆಹಲಿಗೆ ಬಂದಿಳಿದ ಭಾರತೀಯ ವಿದ್ಯಾರ್ಥಿಗಳನ್ನು ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ವಿದೇಶಾಂಗ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಗುರುವಾರ ಬರಮಾಡಿಕೊಂಡರು ಪಿಟಿಐ ಚಿತ್ರ

> **ಆಸ್ಪತ್ರೆ ಮೇಲಿನ ದಾಳಿಗೆ ಸಂಬಂಧಿಸಿ ಇರಾನ್‌ನ ಸರ್ವಾಧಿಕಾರಿಗಳು ಭಾರಿ ಬೆಲೆ ತೆರುವಂತೆ ಮಾಡುವುದು ಖಚಿತ**
> **ಬೆಂಜಮಿನ್ ನೆತನ್ಯಾಹು** ಇಸ್ರೇಲ್ ಪ್ರಧಾನಿ

> **ಇಸ್ರೇಲ್– ಇರಾನ್ ಬಿಕ್ಕಟ್ಟು ಕೊನೆಗಾಣಿಸಲು ಹಾಗೂ ಇರಾನ್ ಶಾಂತಿಯುತ ಅಣುಶಕ್ತಿ ಕಾರ್ಯಕ್ರಮ ಮುಂದುವರಿಸುವುದಕ್ಕಾಗಿ ಮಧ್ಯಸ್ಥಿಕೆ ವಹಿಸಲು ರಷ್ಯಾ ಸಿದ್ಧ**
> **ವ್ಲಾದಿಮಿರ್ ಪುಟಿನ್** ರಷ್ಯಾ ಅಧ್ಯಕ್ಷ

ಪ್ರಮುಖ ಬೆಳವಣಿಗೆಗಳು

- ಇರಾನ್ ನೂರಾರು ಕ್ಷಿಪಣಿಗಳು ಹಾಗೂ ಡ್ರೋನ್‌ಗಳಿಂದ ದಾಳಿ ನಡೆಸಿದೆ. ಬಹುತೇಕ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಇಸ್ರೇಲ್ ಹೊಡೆದುರುಳಿಸಿದೆ

ಇರಾನ್‌ನ ಕ್ಷಿಪಣಿ ದಾಳಿಗೆ ಇಸ್ರೇಲ್‌ನ ರಮತ್‌ಗನ್ ನಗರದ ಬಹುಮಹಡಿ ಕಟ್ಟಡವೊಂದು ಹಾನಿಗೆ ಒಳಗಾಗಿದೆ ಎಪಿ/ಪಿಟಿಐ ಚಿತ್ರ

- ಟೆಲ್ ಅವೀವ್ ಸಮೀಪದ ವಸತಿ ಪ್ರದೇಶದ ಮೇಲೆ ಇರಾನ್ ದಾಳಿ ನಡೆಸಿದ್ದು, ಹಲವಾರು ಗಗನಚುಂಬಿ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳಿಗೆ ಹಾನಿಯಾಗಿದೆ
- ಇರಾನ್‌ನ ಅರಾಕ್ ಅಣು ಸ್ಥಾವರ ಗುರಿಯಾಗಿಸಿ ಇಸ್ರೇಲ್ ಯುದ್ಧವಿಮಾನಗಳು ದಾಳಿ ನಡೆಸಿವೆ. ವಿಕಿರಣ ಸೋರಿಕೆ ಅಪಾಯ ಕಂಡುಬಂದಿಲ್ಲ ಎಂಬ ತಜ್ಞರ ಹೇಳಿಕೆ ಉಲ್ಲೇಖಿಸಿ ಇರಾನ್ ಸುದ್ದಿವಾಹಿನಿ ವರದಿ ಮಾಡಿದೆ
- ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶುಕ್ರವಾರ ಜಿನೀವಾಕ್ಕೆ ಭೇಟಿ ನೀಡಲಿದ್ದು, ಬ್ರಿಟನ್, ಫ್ರಾನ್ಸ್, ಜರ್ಮನಿ ಹಾಗೂ ಐರೋಪ್ಯ ಒಕ್ಕೂಟದ ನಾಯಕರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ
- ಇರಾನ್‌ನ ಧಾರ್ಮಿಕ ತಾಣಗಳು ಮತ್ತು ರಾಜಕೀಯ ಮುಖಂಡರ ಮೇಲೆ ದಾಳಿ ನಡೆಸಿದರೆ, ಅದು, ಮಧ್ಯಪ್ರಾಚ್ಯದಲ್ಲಿ ಭೀಕರ ಪರಿಣಾಮಗಳಿಗೆ ಕಾರಣವಾಗಲಿದೆ ಎಂದು ಇರಾಕ್‌ನ ಪ್ರಮುಖ ಧಾರ್ಮಿಕ ಮುಖಂಡ ಆಯತೊಲ್ಲಾ ಅಲಿ ಸಿಸ್ತಾನಿ ಎಚ್ಚರಿಸಿದ್ದಾರೆ

ಚೆರ್ನೋಬಿಲ್ ರೀತಿಯ ದುರಂತ: ಎಚ್ಚರಿಕೆ

ಸೇಂಟ್ ಪೀಟರ್ಸ್‌ಬರ್ಗ್ (ರಾಯಿಟರ್ಸ್): ಇರಾನ್‌ನ ಬುಶೆಹ್ರ್ ಅಣು ಸ್ಥಾವರದ ಮೇಲೆ ಇಸ್ರೇಲ್ ದಾಳಿ ನಡೆಸಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರಷ್ಯಾ, ಇಂತಹ ಕ್ರಮ ಚೆರ್ನೋಬಿಲ್ ರೀತಿಯ ದುರಂತಕ್ಕೆ ಕಾರಣವಾಗಲಿದೆ ಎಂದು ಗುರುವಾರ ಎಚ್ಚರಿಸಿದೆ.

ಇರಾನ್ ಮೇಲಿನ ದಾಳಿಯನ್ನು ನಿಲ್ಲಿಸುವಂತೆಯೂ ಆಗ್ರಹಿಸಿದೆ.

ಬುಶೆಹ್ರ್‌ನಲ್ಲಿನ ಈ ಸೌಲಭ್ಯವು, ಸದ್ಯ ಇರಾನ್‌ನಲ್ಲಿ ಸಕ್ರಿಯವಾಗಿರುವ ಏಕೈಕ ಅಣುಸ್ಥಾವರವಾಗಿದೆ. ಇದನ್ನು ರಷ್ಯಾ ನಿರ್ಮಿಸುತ್ತಿದೆ.

‘ಬುಶೆಹ್ರ್ ಅಣುಸ್ಥಾವರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಷ್ಯಾ ತಂತ್ರಜ್ಞರ ಸುರಕ್ಷತೆ ಕುರಿತು ಆತಂಕ ಮೂಡಿದೆ’ ಎಂದು ರಷ್ಯಾ ವಿದೇಶಾಂಗ ಸಚಿವಾಲಯ ವಕ್ತಾರೆ ಮಾರಿಯಾ ಝುಖರೋವಾ ಹೇಳಿದ್ದಾರೆ.

ಹಿಜ್ಬುಲ್ಲಾ ಮಧ್ಯಪ್ರವೇಶ ಬೇಡ: ಅಮೆರಿಕ

ಬೈರೂತ್(ಲೆಬನಾನ್) (ರಾಯಿಟರ್ಸ್): ಇರಾನ್ ಬೆಂಬಲಿತ ಸಶಸ್ತ್ರ ಗುಂಪು ಹಿಜ್ಬುಲ್ಲಾ, ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಮಧ್ಯಪ್ರವೇಶಿಸಬಾರದು. ಹಾಗೆ ಮಾಡಿದಲ್ಲಿ, ಅದು ಅತ್ಯಂತ ಕೆಟ್ಟ ನಿರ್ಧಾರವಾಗಲಿದೆ ಎಂದು ಅಮೆರಿಕ ಹೇಳಿದೆ.

ಇಲ್ಲಿಗೆ ಭೇಟಿ ನೀಡಿರುವ, ಸಿರಿಯಾ ಕುರಿತ ಅಮೆರಿಕದ ವಿಶೇಷ ರಾಯಭಾರಿ ಥಾಮಸ್ ಬರಾಕ್, ‘ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಇದೇ ಮಾತನ್ನು ಹೇಳಿದ್ದಾರೆ’ ಎಂದಿದ್ದಾರೆ.

ಹೊರ್ಮುಜ್ ಜಲಸಂಧಿ ಬಂದ್: ಇರಾನ್ ಎಚ್ಚರಿಕೆ

‘ದೇಶದ ಸಮಗ್ರತೆ, ನಾಗರಿಕರ ರಕ್ಷಣೆಗಾಗಿ ಹಾಗೂ ತನ್ನ ಮೇಲಿನ ದಾಳಿಗೆ ಪ್ರತ್ಯುತ್ತರ ನೀಡುವುದಕ್ಕಾಗಿ ತನ್ನ ಮುಂದೆ ಎಲ್ಲ ಆಯ್ಕೆಗಳು ಇವೆ’ ಎಂದು ಇರಾನ್ ಹೇಳಿದೆ.

‘ತನ್ನ ಮೇಲಿನ ಆಕ್ರಮಣಕ್ಕೆ ಪ್ರತ್ಯುತ್ತರ ನೀಡುವ ಭಾಗವಾಗಿ ಹೊರ್ಮುಜ್ ಜಲಸಂಧಿಯನ್ನು ಮುಚ್ಚುವುದು ಸೇರಿದಂತೆ ಹಲವು ಆಯ್ಕೆಗಳು ನಮ್ಮ ಮುಂದಿವೆ’ ಎಂದು ಭದ್ರತೆ ಕುರಿತ ಸಂಸದೀಯ ಸಮಿತಿಯ ಸದಸ್ಯರೊಬ್ಬರು ಹೇಳಿದ್ದಾರೆ.

‘ರಕ್ಷಣೆಗೆ ಸಂಬಂಧಿಸಿ ನಮ್ಮ ಸೇನಾಧಿಕಾರಿಗಳು ಎಲ್ಲ ರೀತಿಯ ಆಯ್ಕೆಗಳನ್ನು ಮುಕ್ತವಾಗಿರಿಸಿಕೊಂಡಿದ್ದಾರೆ’ ಎಂದು ಇರಾನ್‌ನ ಡೆಪ್ಯುಟಿ ವಿದೇಶಾಂಗ ಸಚಿವ ಕಜೀಂ ಘರಿಬಾಬಾದಿ ಹೇಳಿದ್ದಾರೆ.

‘ಕ್ಷಿಪಣಿ, ಬಾಂಬ್ ದಾಳಿಯಿಂದ ಭೀತರಾಗಿದ್ದೆವು..’

ಒಂದನೇ ಪುಟದಿಂದ...

‘ಕ್ಷಿಪಣಿಗಳು ಹಾಗೂ ಬಾಂಬ್ ದಾಳಿಗಳಿಂದ ಹೆದರಿದ್ದು ಮಾತ್ರವಲ್ಲ, ನಾವು ಸ್ತಂಭೀಭೂತರಾಗಿದ್ದೆವು’ ಎಂದು ವೈದ್ಯಕೀಯ ವಿದ್ಯಾರ್ಥಿ, ಕಾಶ್ಮೀರದ ಮಿರ್ ಖಲೀಫ್ ಹೇಳುತ್ತಾರೆ.

‘ಇರಾನ್‌ನಲ್ಲಿ ಅನುಭವ ಈಗಲೂ ನನ್ನನ್ನು ದುಃಸ್ವಪ್ನದಂತೆ ಕಾಡುತ್ತಿದೆ. ಮೊದಲು ಅರ್ಮೇನಿಯಾಕ್ಕೆ ಕರೆತಂದು ನಂತರ ಭಾರತಕ್ಕೆ ಕರೆದುಕೊಂಡು ಬಂದಿರುವ ಕೇಂದ್ರ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ’ ಎನ್ನುತ್ತಾರೆ ಖಲೀಫ್.

‘ಎಲ್ಲಿ ನೋಡಿದರೂ ಧ್ವಂಸಗೊಂಡಿರುವ ಕಟ್ಟಡಗಳೇ ಕಾಣಸಿಗುತ್ತವೆ. ಆಗಸದಿಂದ ಕ್ಷಿಪಣಿಗಳು ಅಪ್ಪಳಿಸುತ್ತಿದ್ದುದನ್ನು ನಾವು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ನೋಡಿದೆವು. ಟೆಹರಾನ್ ಹಾಳಾಗಿದೆ. ಪರಿಸ್ಥಿತಿ ಭೀಕರವಾಗಿದೆ’ ಎಂದು ದೆಹಲಿಯ ವಿದ್ಯಾರ್ಥಿ ಅಲಿ ಅಕ್ಬರ್ ಹೇಳುತ್ತಾರೆ.

TRAVEL CORNER

Orchid ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
99000 99252
Confirmed Group Departures
11 ದಿನಗಳ

ಸಿಂಗಾಪುರ್

ಮಲೇಶಿಯಾ

ಥೈಲ್ಯಾಂಡ್
ಬೆಂಗಳೂರಿನಿಂದ ಬೆಂಗಳೂರಿಗೆ
ವಿವರಗಳಿಗೆ ಸಂಪರ್ಕಿಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಲೇಡಿಸ್ ಬ್ಯೂಟಿ ಪಾರ್ಲರ್ ನಲ್ಲಿ ಹೆಲ್ಪರ್ ಕೆಲಸದ ತರಬೇತಿ ಕೊಟ್ಟು ಕರ್ನಾಟಕಾದ್ಯಂತ ನಮ್ಮ ಬ್ರಾಂಚ್ ಗಳಲ್ಲಿ ಕೆಲಸ ಮಾಡುವಂತವರಿಗೆ ತಿಂಗಳಿಗೆ ವೇತನ 30 ರಿಂದ 35 ಸಾವಿರದವರೆಗೆ. ಕಂಪನಿಯಿಂದ ಕೊಡಲಾಗುವುದು. ಬೆಂಗಳೂರು-9036316959

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

WANTED SALESMEN, Stockists, for Bangalore City Two Years Experience, HELLO BABY BABY PRODUCTS CONTACT: 9443369429, 9487410204

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Vasanth Nagar

853SQFT PLOT for sale, Vasanth Nagar near MCC. Contact Kushal 8105838403 / Thejus 7304665569.

ಪ್ರವಾಸ

Travel

★ಒಂದುದಿನ ಗೋಲ್ಡನ್ ಟೆಂಪಲ್* ಲೇಪಾಕ್ಷಿ, ಕಾಂತೇಶ, ಶಾಂತೇಶ, ಬ್ರಾಂತೇಶ. ಎರಡುದಿನ ಸಿಗಂಧೂರು, ಯಾಣ, ಹಂಪಿ,ಮಡಕೇರಿ, ಬಿಳಿಗಿರಿಬೆಟ್ಟ. ಶ್ರೀನಿಧಿ ಪ್ರವಾಸ. 9448373624

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI
ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

ಗಿಲ್ ಬಳಗಕ್ಕೆ ಪರಿವರ್ತನೆ ಘಟ್ಟದ ಸವಾಲು

ಭಾರತ –ಇಂಗ್ಲೆಂಡ್ ಟೆಸ್ಟ್ ಇಂದಿನಿಂದ: ಬೆನ್ ಸ್ಟೋಕ್ಸ್ ಬಳಗಕ್ಕೆ ಶುಭಾರಂಭದ ಕನಸು: ಸವಾಲೊಡ್ಡುವ ಛಲದಲ್ಲಿ ಪ್ರವಾಸಿ ಪಡೆ

• ಸಿದ್ದು ಕಿರಣ್

ಲೀಡ್ಸ್: ಯಾವುದೇ ಕ್ರೀಡೆಯಲ್ಲಿ ಪರಿವರ್ತನೆಯ ಘಟ್ಟವು ಅನಿವಾರ್ಯ ಅಂಗವಾಗಿರುತ್ತದೆ. ಅದರಲ್ಲೂ ವಿಶೇಷವಾಗಿ ತಂಡ ಕ್ರೀಡೆಗಳಲ್ಲಿ ಸೂಪರ್‌ಸ್ಟಾರ್ ಆಟಗಾರರ ನಿವೃತ್ತಿಯು ದೊಡ್ಡ ನಿರ್ವಾತವನ್ನು ಸೃಷ್ಟಿಸುತ್ತದೆ. ಇನ್ನೊಂದೆಡೆ ಇದು ಹೊಸಪೀಳಿಗೆಯ ಆಟಗಾರರಿಗೆ ತಮ್ಮ ಪ್ರತಿಭೆ ಮತ್ತು ತಂಡವನ್ನು ಬಿತ್ತರಿಸುತ್ತ ಕೊಂಡೊಯ್ಯುವ ಅವಕಾಶವನ್ನೂ ಸೃಷ್ಟಿಸುತ್ತದೆ.

ಈ ವರ್ಷ ಭಾರತ ತಂಡದ ಇಬ್ಬರು ಬ್ಯಾಟಿಂಗ್ ದಿಗ್ಗಜರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಹಾಗೂ ಆಫ್ ಸ್ಪಿನ್ನರ್ ಆರ್. ಅಶ್ವಿನ್ ಅವರ ಹಠಾತ್ ನಿವೃತ್ತಿಯು ಭಾರತವನ್ನು ಬಾಧಿಸಿದೆ. ಶುಕ್ರವಾರ ಹೆಡಿಂಗ್ಲಿಯಲ್ಲಿ ಆತಿಥೇಯ ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆ ತಾರಾವರ್ಚಸ್ಸಿನ ಆಟಗಾರರ ಗೈರು ಎದ್ದು ಕಾಣಬಹುದು.

'ಈ ಪ್ರವಾಸವನ್ನು ನೋಡುವ ಎರಡು ಮಾರ್ಗಗಳಿವೆ. ಒಂದು ನಾವು ನಮ್ಮ ಮೂವರು ಅತ್ಯಂತ ಅನುಭವಿ ಆಟಗಾರರಿಲ್ಲದ ಕಣಕ್ಕಿಳಿಯುತ್ತಿದ್ದೇವೆ. ಇನ್ನೊಂದು: ದೇಶಕ್ಕಾಗಿ ವಿಶೇಷವಾದ ಏನನ್ನಾದರೂ ಮಾಡಲು ನಮಗೆ ಸಿಕ್ಕಿರುವ ಅದ್ಭುತ ಅವಕಾಶ ಇದಾಗಿದೆ' ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ಒಂದು ವಾರದ ಹಿಂದೆ ಬಿಸಿಸಿಐ ಟಾಕ್ ಟಿವಿ ಜೊತೆಗಿನ ಸಂವಾದದಲ್ಲಿ ಹೇಳಿದ್ದರು.

'ಇಂಗ್ಲೆಂಡ್, ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕಾದ ಪ್ರವಾಸಗಳು ಭಾರತ ತಂಡಕ್ಕೆ ಯಾವಾಗಲೂ ಕಠಿಣ ಸವಾಲಿನದ್ದಾಗಿವೆ. ಭಾರತ ತಂಡವು ಇಂಗ್ಲೆಂಡ್‌ನಲ್ಲಿ ಆಡಿರುವ 19 ಸರಣಿಗಳ ಪೈಕಿ ಮೂರರಲ್ಲಿ ಗೆದ್ದಿದೆ. ಕೊನೆಯ ಗೆಲುವು 2007ರಲ್ಲಿ ಬಂದಿತ್ತು. ಬೆಳಗಿನ ಅವಧಿಯಲ್ಲಿ ಬಿಸಿಲು ಮತ್ತು ಸಂಜೆ ಹೊತ್ತಿಗೆ ಶೀತಗಾಳಿಯಂತಹ ಪರಿಸ್ಥಿತಿ ಇಲ್ಲಿರುತ್ತದೆ. ಇಲ್ಲಿಯ ಪಿಚ್‌ಗಳಲ್ಲಿ ಚೆಂಡು ಸ್ವಿಂಗ್, ಸೀಮ್ ಆಗುವ ರೀತಿ ಕೂಡ ಕೆಲವೊಮ್ಮೆ ಊಹೆಗೂ ನಿಲುಕದು. ಇನ್ನೊಂದೆಡೆ ಪ್ರೇಕ್ಷಕರ ಗ್ಯಾಲರಿಗಳಲ್ಲಿರುವ ಸ್ಥಳೀಯ ಪ್ರೇಕ್ಷಕವರ್ಗ ಪ್ರವಾಸಿ ತಂಡಕ್ಕೆ ಸವಾಲೊಡ್ಡಬಲ್ಲವು.

ಎರಡು ವರ್ಷಗಳ ಅವಧಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ನಾಲ್ಕನೇ ಆವೃತ್ತಿ ನಲ್ಲಿ ಇದು ಮೊದಲ ಸರಣಿಯಾಗಿದೆ. ಸರಣಿಯ ಮೊದಲ ಪಂದ್ಯದ ಆರಂಭಕ್ಕೂ ಮುನ್ನ ಒಂದಿಷ್ಟು ಪ್ರಶ್ನೆಗಳು ಕಾಡುತ್ತಿರುವುದೂ ಸುಳ್ಳಲ್ಲ. ಯುವ ಆಟಗಾರರು ಹೆಚ್ಚು ಸಂಖ್ಯೆಯಲ್ಲಿರುವ, ಕೆಲವೇ ಅನುಭವಿಗಳೂ ಇರುವ ತಂಡವು ಹೇಗೆ ಕಾರ್ಯ ನಿರ್ವಹಿಸಬಹುದು? 25ನೇ ವಯಸ್ಸಿನಲ್ಲಿಯೇ ನಾಯಕತ್ವದ ಕಠಿಣ ಸ್ಥಾನಕ್ಕೆ ನೇಮಕವಾಗಿರುವ ಶುಭಮನ್ ಗಿಲ್ ಆಯ್ಕೆಗಾರರ ವಿಶ್ವಾಸ ಉಳಿಸಿಕೊಳ್ಳಬಲ್ಲರೇ? ಇಂಗ್ಲೆಂಡ್ ತಂಡದ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಗೆ ತಕ್ಕ ಉತ್ತರ ನೀಡುವಲ್ಲಿ ಬೌಲರ್‌ಗಳು ಯಶಸ್ವಿಯಾಗುವರೇ? ಕಳೆದ ಎಂಟು ಟೆಸ್ಟ್‌ಗಳಲ್ಲಿ ಕೇವಲ ಎರಡು ಪಂದ್ಯಗಳನ್ನು ಮಾತ್ರ ಗೆದ್ದಿರುವ ಹಾಗೂ ಸತತ ಎರಡು ಸರಣಿ ಸೋಲುಗಳ ಹಿನ್ನೆಲೆಯಲ್ಲಿ ಭಾರತವು ಯಶಸ್ಸಿನ ಹಾದಿಗೆ ಮರಳುವುದೇ?

ಈ ಎಲ್ಲ ಅನುಮಾನಗಳಿಗೂ ಶುಕ್ರವಾರದಿಂದ ಉತ್ತರಗಳು ಸಿಗಲಾರಂಭಿಸುತ್ತವೆ. ಆದರೆ ಭಾರತ ತಂಡದಲ್ಲಿ ಮಾತ್ರ ಶಾಂತ ಹಾಗೂ ಆತ್ಮವಿಶ್ವಾಸದ ಗಾಳಿ ಬೀಸುತ್ತಿದೆ. ಬ್ಯಾಟಿಂಗ್ ಕ್ರಮಾಂಕ ಯುವ ಮತ್ತು ಅನುಭವದ ಉತ್ತಮ ಮಿಶ್ರಣವನ್ನು ಹೊಂದಿದೆ. ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರಿಗೆ ಕೇವಲ 23 ವರ್ಷ ವಯಸ್ಸು. ಆದರೆ ಮುಂಬೈಕರ್ ಈಗಾಗಲೇ 19 ಟೆಸ್ಟ್‌ಗಳನ್ನು ಆಡಿರುವ ಅನುಭವಿ. ಈ ಪ್ರಯಾಣದಲ್ಲಿ ಅವರು ಈಗಾಗಲೇ 52.88 ಸರಾಸರಿಯಲ್ಲಿದ್ದಾರೆ. ಅವರು ಆಸ್ಟ್ರೇಲಿಯಾದಲ್ಲಿ 5 ಟೆಸ್ಟ್‌ಗಳಲ್ಲಿ 391 ರನ್ ಗಳಿಸಿದ್ದರು. ಅವರು ವಿಶ್ವದ ಪ್ರತಿಯೊಂದು ಭಾಗದಲ್ಲೂ ಉತ್ತಮ ಸಾಧನೆ ಮಾಡುವ ಹಸಿವು ಹೊಂದಿದ್ದಾರೆ ಎಂಬುದಂತೂ ನಿಜ. ಅನುಭವಿಗಳಾದ ಕೆಎಲ್ ರಾಹುಲ್, ಗಿಲ್ ಮತ್ತು ರಿಷಭ್ ಪಂತ್ ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಇಂಗ್ಲೆಂಡ್‌ನಲ್ಲಿ ಟೆಸ್ಟ್ ಪಂದ್ಯಗಳನ್ನು ಆಡಿದ ಅನುಭವ ಇರುವುದು ಈ ಮೂವರು ಆಟಗಾರರಿಗೆ ಮಾತ್ರ. ಆದ್ದರಿಂದ ಅವರ ಹೊಣೆಗಾರಿಕೆಯೇ ಹೆಚ್ಚು.

ಈ ಸರಣಿಯು ಗಿಲ್ ಅವರ ಪಾತ್ರದ ದೊಡ್ಡ ಪರೀಕ್ಷೆಯೂ ಆಗಿದೆ. ಹದಿಹರೆಯದ ವಯಸ್ಸಿನಿಂದ ಕೊಹ್ಲಿಯ ಸಿಂಹಾಸನದ ಉತ್ತರಾಧಿಕಾರಿಯೆಂದು ಪರಿಗಣಿಸಲ್ಪಟ್ಟ 'ಯುವರಾಜ'ನನ್ನು ಈಗ ರಾಜನಾಗಿ ನೇಮಿಸಲಾಗಿದೆ. ಬ್ಯಾಟರ್ ಮತ್ತು ನಾಯಕನಾಗಿ ಅವರು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದು ಭಾರತೀಯ ಕ್ರಿಕೆಟ್ ಭವಿಷ್ಯದ ದಿಕ್ಸೂಚಿಯಾಗಲಿದೆ.

ತಂಡದಲ್ಲಿರುವ ಶ್ರೇಷ್ಠ ಬೌಲರ್‌ಗಳಿಂದಾಗಿ ಗಿಲ್ ಆತ್ಮವಿಶ್ವಾಸ ಹೆಚ್ಚಿದೆ. ಇಂಗ್ಲೆಂಡ್ ತಂಡದಲ್ಲಿ ಅನುಭವಿ ಬೌಲರ್‌ಗಳು ಇಲ್ಲ. ಅದಕ್ಕೆ ಹೋಲಿಸಿದರೆ ಈ ವಿಭಾಗದಲ್ಲಿ ಭಾರತವೇ ಉತ್ತಮವಾಗಿದೆ. ವಿಶ್ವಶ್ರೇಷ್ಠ ವೇಗಿ ಜಸ್‌ಪ್ರೀತ್ ಬೂಮ್ರಾ, ಅವರಿಗೆ ಜೊತೆ ನೀಡಲಿರುವ ಮೊಹಮ್ಮದ್ ಸಿರಾಜ್, ಕನ್ನಡಿಗ ಪ್ರಸಿದ್ಧಕೃಷ್ಣ ತಂಡಕ್ಕೆ ಉತ್ತಮ ಆರಂಭ ನೀಡುವ ಛಲದಲ್ಲಿದ್ದಾರೆ. ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಉತ್ತಮ ಲಯದಲ್ಲಿದ್ದಾರೆ.

ಆತಿಥೇಯ ತಂಡವು ಯಥಾಪ್ರಕಾರ ತಮ್ಮ 'ಬೇಜ್‌ಬಾಲ್' ಆಟವನ್ನೇ ಮುಂದುವರಿಸುವುದಾಗಿ ಈಗಾಗಲೇ ಘೋಷಿಸಿಕೊಂಡಿದೆ. 2024ರಲ್ಲಿ ಭಾರತದಲ್ಲಿ ನಡೆದಿದ್ದ ಸರಣಿಯಲ್ಲಿ ಇಂಗ್ಲೆಂಡ್ ತಂಡದ ಈ ತಂತ್ರಗಾರಿಕೆ ವಿಫಲವಾಗಿತ್ತು. 1-4ರಿಂದ ಸರಣಿಯಲ್ಲಿ ಸೋತಿತ್ತು. ಆದರೀಗ ತನ್ನ ತವರಿನ ಅಂಗಳದಲ್ಲಿ ಬೇಜ್‌ಬಾಲ್ ಶೈಲಿ ಯಶಸ್ವಿಯಾಗುವ ವಿಶ್ವಾಸ ಬೆನ್ ಸ್ಟೋಕ್ಸ್ ಬಳಗಕ್ಕೆ ಇದೆ. ಉಭಯ ತಂಡಗಳ ಆಟಗಾರರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಿದರೆ ಸರಣಿಗೆ ರೋಚಕ ಆರಂಭ ಸಿಗುವುದರಲ್ಲಿ ಅನುಮಾನವೇ ಇಲ್ಲ.

ಮುಖ್ಯಾಂಶಗಳು

- ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಅಶ್ವಿನ್ ಅವರಿಲ್ಲದ ಸರಣಿ
- ಕನ್ನಡಿಗರಾದ ರಾಹುಲ್, ಕರುಣ್, ಪ್ರಸಿದ್ಧ ಕೃಷ್ಣ ತಂಡದಲ್ಲಿದ್ದಾರೆ
- ಡಬ್ಲ್ಯುಟಿಸಿ ಹೊಸ ಆವೃತ್ತಿಯ ಮೊದಲ ಪಂದ್ಯ

ಅಂಕಿ ಅಂಶಗಳು

9 ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಇಂಗ್ಲೆಂಡ್‌ನಲ್ಲಿ ಗೆದ್ದಿರುವ ಟೆಸ್ಟ್‌ಗಳು

3 ಭಾರತ ತಂಡವು ಇಂಗ್ಲೆಂಡ್‌ನಲ್ಲಿ ಗೆದ್ದಿರುವ ಟೆಸ್ಟ್ ಸರಣಿಗಳು

(ಅಂಕಿ ಸಂಖ್ಯೆ: ಎಚ್.ಆರ್. ಗೋಪಾಲಕೃಷ್ಣ)

ಬಲಾಬಲ	
ಪಂದ್ಯಗಳು	136
ಭಾರತ ಜಯ	35
ಇಂಗ್ಲೆಂಡ್ ಗೆಲುವು	51
ಡ್ರಾ	50

11 ವರ್ಷ ವಯಸ್ಸಿನವರಾಗಿದ್ದಾಗ ನಾನು ಮತ್ತು ಕರುಣ್ ನಾಯರ್ ಕ್ರಿಕೆಟ್ ಆಡಲು ಆರಂಭಿಸಿದ್ದೆವು. ನಮ್ಮ ಪಯಣ ಜೊತೆಯಾಗಿ ಸಾಗುತ್ತಿದೆ. ಇಬ್ಬರೂ ಹಲವು ಏಳು–ಬೀಳುಗಳನ್ನು ಅನುಭವಿಸಿದ್ದೇವೆ.

ಕೆ.ಎಲ್. ರಾಹುಲ್, ಭಾರತದ ಆಟಗಾರ

ರೋಹಿತ್, ವಿರಾಟ್ ಮತ್ತು ಅಶ್ವಿನ್ ಇಲ್ಲ. ಆದ್ದರಿಂದ ಭಾರತ ತಂಡವನ್ನು ಸುಲಭವಾಗಿ ಸೋಲಿಸಬಹುದು ಎಂಬುದು ನಿಜವಲ್ಲ. ಭಾರತ ತಂಡದಲ್ಲಿ ಅದ್ಭುತವಾದ ಪ್ರತಿಭಾವಂತ ಆಟಗಾರರಿದ್ದಾರೆ. ಅವರೂ ಕಠಿಣ ಸವಾಲೊಡ್ಡಬಲ್ಲರು

ಬೆನ್ ಸ್ಟೋಕ್ಸ್, ಇಂಗ್ಲೆಂಡ್ ತಂಡದ ನಾಯಕ

ಭಾರತ ಮತ್ತು ಇಂಗ್ಲೆಂಡ್ ಸರಣಿಯ ಟ್ರೋಫಿಯೊಂದಿಗೆ ಜಿಮ್ಮಿ ಆ್ಯಂಡರ್ಸನ್ ಮತ್ತು ಸಚಿನ್ ತೆಂಡೂಲ್ಕರ್ ಪಿಟಿಐ ಚಿತ್ರಗಳು



ಶುಭಮನ್ ಗಿಲ್	
ಟೆಸ್ಟ್	32
ರನ್	1893
ಶ್ರೇಷ್ಠ	128
ಶತಕ	5
ಅರ್ಧಶತಕ	7
ವಯಸ್ಸು	25



ಬೆನ್ ಸ್ಟೋಕ್ಸ್	
ಟೆಸ್ಟ್	111
ರನ್	6728
ಶ್ರೇಷ್ಠ	258
ಶತಕ	13
ಅರ್ಧಶತಕ	35
ವಯಸ್ಸು	34

ತಂಡಗಳು

ಭಾರತ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ಉಪನಾಯಕ/ವಿಕೆಟ್‌ಕೀಪರ್), ಅಭಿಮನ್ಯು ಈಶ್ವರನ್, ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್, ಕರುಣ್ ನಾಯರ್, ಕೆ.ಎಲ್. ರಾಹುಲ್, ಸಾಯಿ ಸುದರ್ಶನ್, ರವೀಂದ್ರ ಜಡೇಜ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಆಕಾಶ್‌ದೀಪ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಹರ್ಷಿತ್ ರಾಣಾ, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧಕೃಷ್ಣ, ಶಾರ್ದೂಲ್ ಠಾಕೂರ್.

ಇಂಗ್ಲೆಂಡ್: ಬೆನ್ ಸ್ಟೋಕ್ಸ್ (ನಾಯಕ), ಜೆಮಿ ಸ್ಮಿತ್ (ವಿಕೆಟ್‌ಕೀಪರ್), ಕ್ರಿಸ್ ವೋಕ್ಸ್, ಬ್ರೈಡನ್ ಕೇರ್ಸ್, ಜೋಶ್ ಟಂಗ್, ಶೋಯಬ್ ಬಶೀರ್, ಜ್ಯಾಕ್ ಕ್ರಾಲಿ, ಬೆನ್ ಡಕೆಟ್, ಒಲಿ ಪೋಪ್, ಜೋ ರೂಟ್, ಹ್ಯಾರಿ ಬ್ರೂಕ್.

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಪಟೌಡಿ ಪರಂಪರೆ ಉಳಿಸಲು ಬದ್ಧ: ಸಚಿನ್ ತೆಂಡೂಲ್ಕರ್ ವಾಗ್ದಾನ

ನವದೆಹಲಿ (ಪಿಟಿಐ): ಭಾರತ –ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯ ವಿಜೇತರಿಗೆ ನೀಡಲಾಗುವ ಟ್ರೋಫಿಯ ಮರುನಾಮಕರಣ ವಿಷಯ ತಿಳಿದಾಕ್ಷಣ ದಿವಂಗತ ಮನ್ಸೂರ್ ಅಲಿಖಾನ್ ಪಟೌಡಿ ಅವರ ಕುಟುಂಬದವರೊಂದಿಗೆ ಮಾತನಾಡಿರುವೆ. ಟೈಗರ್ ಪಟೌಡಿಯವರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ಎಲ್ಲ ರೀತಿಯಿಂದಲೂ ಬದ್ಧರಾಗಿದ್ದೇವೆ ಎಂದು ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್ ಹೇಳಿದ್ದಾರೆ.

2007ರಿಂದ ಇದ್ದ ಪಟೌಡಿ ಟ್ರೋಫಿ ಎಂಬ ಹೆಸರನ್ನು ಈ ಬಾರಿ ಬದಲಿಸಲಾಗಿದೆ. ಇಂಗ್ಲೆಂಡ್ ಮಾಜಿ ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಮತ್ತು ಭಾರತದ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಹೆಸರನ್ನು ಟ್ರೋಫಿಗೆ ಇಡಲಾಗಿದೆ. ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜಂಟಿಯಾಗಿ ಈ ನಿರ್ಧಾರ ತೆಗೆದುಕೊಂಡಿವೆ.

'ಕೆಲವು ತಿಂಗಳುಗಳ ಹಿಂದೆ ಪಟೌಡಿ ಟ್ರೋಫಿಯನ್ನು ವಿಸರ್ಜಿಸುವ ಕುರಿತು ಬಿಸಿಸಿಐ ಮತ್ತು ಇಸಿಬಿ ತೆಗೆದುಕೊಂಡಿದ್ದ ನಿರ್ಧಾರವು ತಿಳಿದಿತ್ತು. ಆದರೆ ಇತ್ತೀಚೆಗೆ ಆ್ಯಂಡರ್ಸನ್ ಮತ್ತು ನನ್ನ ಹೆಸರನ್ನು ಆ ಟ್ರೋಫಿಗೆ ನಾಮಕರಣ ಮಾಡಲಿದ್ದಾರೆ ಎಂದು ತಿಳಿಯಿತು. ಕೂಡಲೇ ನಾನು ಪಟೌಡಿ ಕುಟುಂಬಸ್ಥರಿಗೆ ಫೋನ್ ಕರೆ ಮಾಡಿದ್ದೆ' ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಸಚಿನ್ ಹೇಳಿದ್ದಾರೆ.

'ಟೈಗರ್ ಪಟೌಡಿ ಅವರು ಯುವ ಜನಾಂಗಗಳಿಗೆ ಸ್ಫೂರ್ತಿ ತುಂಬಿದ ಮಹನೀಯರು. ಅವರ ಕಾಣಿಕೆಗಳು ಅವಿಸ್ಮರಣೀಯ. ಅವರ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಎಲ್ಲ ರೀತಿಯಿಂದಲೂ ಬದ್ಧರಾಗಿದ್ದೇವೆಂದು ಕುಟುಂಬಕ್ಕೆ ತಿಳಿಸಿದ್ದೇನೆ' ಎಂದೂ ಸಚಿನ್ ಹೇಳಿದರು.

'ಬಿಸಿಸಿಐ ಮಾಜಿ ಕಾರ್ಯದರ್ಶಿ ಮತ್ತು ಐಸಿಸಿ ಮುಖ್ಯಸ್ಥ ಜಯ್ ಶಾ, ಇಸಿಬಿಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಅವರೆಲ್ಲರೂ ನನ್ನ ಮನವಿಗೆ ಸ್ಪಂದಿಸಿದ್ದು ಸಂತಸ ನೀಡಿದೆ. ಇದರ ಫಲವಾಗಿ ಪಟೌಡಿ ಅವರ ಹೆಸರಿನಲ್ಲಿ ಪದಕವೊಂದನ್ನು ಪ್ರದಾನ ಮಾಡುವ ನಿರ್ಧಾರ ಹೊರಹೊಮ್ಮಿದೆ. ಅವರ ಗೌರವಾರ್ಥ ಇದೊಂದು ಉತ್ತಮ ನಡೆಯಾಗಿದೆ' ಎಂದು ಸಚಿನ್ ವಿವರಿಸಿದರು.

ಶ್ರೀಲಂಕಾದ ಪಥುಮ್ ನಿಸಾಂಕ ಎಪಿ/ಪಿಟಿಐ ಚಿತ್ರ

ಮೊದಲ ಟೆಸ್ಟ್: ಲಂಕಾ ನೆರವಿಗೆ ನಿಸಾಂಕ

ಗಾಲೆ (ಎಎಫ್‌ಪಿ): ಆರಂಭ ಆಟಗಾರ ಪಥುಮ್ ನಿಸಾಂಕ ಅವರ ಜೀವನಶ್ರೇಷ್ಠ 187 ರನ್‌ಗಳ ನೆರವಿನಿಂದ ಶ್ರೀಲಂಕಾ ಮೊದಲ ಟೆಸ್ಟ್‌ನ ಮೂರನೇ ದಿನವಾದ ಗುರುವಾರ ಮೊದಲ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗೆ 368 ರನ್ ಬಾರಿಸಿತು. ಆತಿಥೇಯರು ಈಗ ಬಾಂಗ್ಲಾದೇಶ ತಂಡಕ್ಕಿಂತ 127 ರನ್ ಮಾತ್ರ ಹಿಂದೆಯಿದ್ದಾರೆ.

27 ವರ್ಷ ವಯಸ್ಸಿನ ನಿಸಾಂಕ ಶ್ರೀಲಂಕಾ ಇನಿಂಗ್ಸ್‌ಗೆ ಲಂಗರು ಹಾಕಿದ್ದು, ದಿನದಾಟ ಮುಕ್ತಾಯಕ್ಕೆ ಎಂಟು ಓವರುಗಳಿದ್ದಾಗ ನಿರ್ಗಮಿಸಿದರು.

ಇದಕ್ಕೆ ಮೊದಲು, 9 ವಿಕೆಟ್‌ಗೆ 484 ರನ್‌ಗಳೊಡನೆ ಮೂರನೇ ದಿನದಾಟ ಮುಂದುವರಿಸಿದ ಬಾಂಗ್ಲಾದೇಶ 495 ರನ್‌ಗಳಿಗೆ ಆಲೌಟಾಯಿತು. ವೇಗಿ ಅಸಿತ ಫೆರ್ನಾಂಡೊ 86 ರನ್ನಿಗೆ 4 ವಿಕೆಟ್ ಪಡೆದರು.

ನಿಸಾಂಕ ಒಂದು ಸಿಕ್ಸರ್, 23 ಬೌಂಡರಿಗಳನ್ನು ಬಾರಿಸಿದರು. ಅನುಭವಿ ದಿನೇಶ್ ಚಾಂದಿಮಲ್ ಜೊತೆ ಎರಡನೇ ವಿಕೆಟ್‌ಗೆ 157 ರನ್ ಸೇರಿಸಿ ತಂಡಕ್ಕೆ ಭದ್ರ ಅಡಿಪಾಯ ಒದಗಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 153.4 ಓವರುಗಳಲ್ಲಿ 495; ಶ್ರೀಲಂಕಾ: 93 ಓವರುಗಳಲ್ಲಿ 4 ವಿಕೆಟ್‌ಗೆ 368 (ಪಥುಮ್ ನಿಸಾಂಕ 187, ದಿನೇಶ್ ಚಾಂದಿಮಲ್ 54, ಏಂಜೆಲೊ ಮ್ಯಾಥ್ಯೂಸ್ 39, ಕಮಿಂದು ಮೆಂಡಿಸ್ ಔಟಾಗದೇ 37),

ಪ್ಯಾರಿಸ್ ಡೈಮಂಡ್ ಲೀಗ್ ಕೂಟ ಇಂದು

ನೀರಜ್‌ಗೆ ವರ್ಷದ ಮೊದಲ ಪ್ರಶಸ್ತಿ ಗುರಿ

ಪ್ಯಾರಿಸ್ (ಪಿಟಿಐ): ದೀರ್ಘಕಾಲದ ಕನಸಾದ 90 ಮೀ. ಎಸೆತದ ಮೈಲಿಗಲ್ಲನ್ನು ಸಾಧಿಸಿರುವ ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಶುಕ್ರವಾರ ನಡೆಯಲಿರುವ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಕಣಕ್ಕಿಳಿಯಲಿದ್ದು ಅಗ್ರಸ್ಥಾನದತ್ತ ಗುರಿನೆಟ್ಟಿದ್ದಾರೆ. ಇಲ್ಲಿ ಅವರು ಪರಿಚಿತ ಎದುರಾಳಿಗಳಿರುವ ಪ್ರಬಲ ಕಣದಿಂದ ಪೈಪೋಟಿ ಎದುರಿಸಲಿದ್ದಾರೆ.

ಚೋಪ್ರಾ ಜೊತೆಗೆ ಜರ್ಮನಿಯ ಅನುಭವಿ ಜೂಲಿಯನ್ ವೆಬರ್, ಎರಡು ಬಾರಿಯ ವಿಶ್ವ ಚಾಂಪಿಯನ್ ಆ್ಯಂಡರ್ಸನ್ ಪೀಟರ್ಸ್ (ಗ್ರೆನಡಾ) ಸೇರಿದಂತೆ ಎಂಟು ಸ್ಪರ್ಧಿಗಳು ಜಾವೆಲಿನ್ ಥ್ರೊ ಇರುವ ಇರುವ ಎರಡನೇ ಡೈಮಂಡ್ ಲೀಗ್‌ನಲ್ಲಿ ಕಣಕ್ಕೆ ಇಳಿಯುತ್ತಿದ್ದಾರೆ. ಎಂಟು ಮಂದಿಯಲ್ಲಿ ಐವರು 90 ಮೀ.ಗಿಂತ ದೂರ ಎಸೆದವರು ಇದ್ದಾರೆ.

ಮೇ 16ರಂದು ದೋಹಾದಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ ನೀರಜ್ ಮೊದಲ ಬಾರಿ 90 ಮೀ.ಗಿಂತ (90.23 ಮೀ.) ದೂರ ಎಸೆದು ತಮ್ಮ ದೀರ್ಘಕಾಲದ ಗುರಿಯನ್ನು ಈಡೇರಿಸಿಕೊಂಡಿದ್ದರು. ಆದರೆ ಜರ್ಮನಿಯ ದಿಗ್ಗಜ ವೆಬರ್ ತಮ್ಮ ಕೊನೆಯ ಯತ್ನದಲ್ಲಿ ಭರ್ಜಿಯನ್ನು 91.06 ಮೀ. ಎಸೆಯುವ ಮೂಲಕ ಭಾರತದ ಎದುರಾಳಿಯನ್ನು ಹಿಂದೆಹಾಕಿದ್ದರು. ವೆಬರ್ ಸಹ ಮೊದಲ ಬಾರಿ + 90 ಮೀ. ಗುರಿ ಸಾಧಿಸಿದ್ದರು.

31 ವರ್ಷ ವಯಸ್ಸಿನ ವೆಬರ್ ಅವರು ಮೇ 23ರಂದು ಪೋಲೆಂಡ್‌ನಲ್ಲಿ ನಡೆದ ಯಾನುಝ್ ಕೊಸೊಸಿನ್‌ಸ್ಕಿ ಸ್ಮರಣಾರ್ಥ ಕೂಟದಲ್ಲೂ ನೀರಜ್ ಅವರನ್ನು ಹಿಮ್ಮೆಟ್ಟಿಸಿದ್ದರು. ಆ ಕೂಟದಲ್ಲಿ ವೆಬರ್ 86.12 ಮೀ. ಮತ್ತು ಚೋಪ್ರಾ 84.14 ಮೀ. ದೂರ ದಾಖಲಿಸಿ ಮೊದಲ ಎರಡು ಸ್ಥಾನ ಪಡೆದಿದ್ದರು.



ನೀರಜ್ ಚೋಪ್ರಾ

ಭಾರತಕ್ಕೆ ಪಾಕ್ ಮೊದಲ ಎದುರಾಳಿ

ದುಬೈ (ಪಿಟಿಐ): ಭಾರತ ತಂಡವು 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ.

ಭಾರತ ತಂಡದ ವೇಳಾಪಟ್ಟಿ		
ದಿನಾಂಕ	ಎದುರಾಳಿ	ತಾಣ
ಜೂನ್ 14	ಪಾಕಿಸ್ತಾನ	ಬರ್ಮಿಂಗ್‌ಹ್ಯಾಮ್
ಜೂನ್ 17	ಕ್ವಾಲಿಫೈಯರ್	ಲೀಡ್ಸ್
ಜೂನ್ 21	ದಕ್ಷಿಣ ಆಫ್ರಿಕಾ	ಮ್ಯಾಂಚೆಸ್ಟರ್
ಜೂನ್ 25	ಕ್ವಾಲಿಫೈಯರ್	ಮ್ಯಾಂಚೆಸ್ಟರ್
ಜೂನ್ 28	ಆಸ್ಟ್ರೇಲಿಯಾ	ಲಾರ್ಡ್ಸ್

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಹಾಗೂ ಆತಿಥೇಯ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಬುಧವಾರ 12 ತಂಡಗಳನ್ನು ಒಳಗೊಂಡ ಟೂರ್ನಿಯ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಟೂರ್ನಿಯು 2026ರ ಜೂನ್ 12ರಿಂದ ಜುಲೈ 5ರವರೆಗೆ ನಡೆಯಲಿದೆ. ಇಂಗ್ಲೆಂಡ್‌ನ ಏಳು ತಾಣಗಳಲ್ಲಿ ಒಟ್ಟು 33 ಪಂದ್ಯಗಳು ಆಯೋಜನೆಗೊಳ್ಳಲಿವೆ.

ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ಜೂನ್ 14ರಂದು ತಮ್ಮ ಅಭಿಯಾನವನ್ನು ಆರಂಭಿಸಲಿವೆ. ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ನಡುವೆ ಜೂನ್ 12ರಂದು ಉದ್ಘಾಟನಾ ಪಂದ್ಯ ನಡೆಯಲಿದೆ.

ಬಿಲ್ಲೀ ಜೀನ್ ಕಿಂಗ್ ಕಪ್ ಪ್ಲೇ ಆಫ್

ಜಿ ಗುಂಪಿಗೆ ಬೆಂಗಳೂರಿನ ಆತಿಥ್ಯ

ಬೆಂಗಳೂರು (ಪಿಟಿಐ): ಪ್ರತಿಷ್ಠಿತ ಬಿಲ್ಲೀ ಜೀನ್ ಕಿಂಗ್ ಕಪ್ ಪ್ಲೇ ಆಫ್‌ನ 'ಜಿ' ಗುಂಪಿನ ಪಂದ್ಯಗಳ ಆತಿಥ್ಯವನ್ನು ಬೆಂಗಳೂರು ವಹಿಸಲಿದೆ. ಇದೇ ನವೆಂಬರ್ 14ರಿಂದ ಈ ಪಂದ್ಯಗಳು ನಡೆಯಲಿದ್ದು, ಭಾರತ ತಂಡವು, ಸ್ಲೊವೇನಿಯಾ ಮತ್ತು ನೆದರ್ಲೆಂಡ್ಸ್ ತಂಡಗಳ ಜೊತೆ 'ಜಿ' ಗುಂಪಿನಲ್ಲಿದೆ.

ಈ ವಿಭಿನ್ನ ಮಾದರಿಯ ಟೆನಿಸ್ ಟೂರ್ನಿಯಲ್ಲಿ 21 ತಂಡಗಳು ಭಾಗಹಿಸುತ್ತಿದ್ದು ಏಳು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಏಳು ರಾಷ್ಟ್ರಗಳು ಒಂದೊಂದು ಗುಂಪಿನ ಪಂದ್ಯಗಳ ಆತಿಥ್ಯ ವಹಿಸುತ್ತಿವೆ. ಲಂಡನ್‌ನಲ್ಲಿ ಗುರುವಾರ 'ಡ್ರಾ' ನಡೆದಿದ್ದು, ಪಂದ್ಯಗಳು ನಡೆಯುವ ಏಳು ತಾಣಗಳ ಹೆಸರನ್ನು ಅಧಿಕೃತವಾಗಿ ಪ್ರಕಟಿಸಲಾಯಿತು.

ಮೂರು ದಿನಗಳ ಪ್ಲೇ ಆಫ್ ಪಂದ್ಯಗಳು ನವೆಂಬರ್ 16ರಂದು ಕೊನೆಗೊಳ್ಳಲಿವೆ.

ಭಾರತ ಪ್ಲೇ ಆಫ್‌ಗೆ ನೇರ ಅರ್ಹತೆ ಪಡೆದಿದೆ. ಪುಣೆಯಲ್ಲಿ ನಡೆದ ಏಷ್ಯಾ–ಓಷಾನಿಯಾ ಒಂದನೇ ಗುಂಪಿನಲ್ಲಿ ತೋರಿದ ಅಮೋಘ ನಿರ್ವಹಣೆಯಿಂದ ಭಾರತ ಅವಕಾಶ ಪಡೆದಿದೆ. ಭಾರತದ ಜೊತೆಗೆ ನ್ಯೂಜಿಲೆಂಡ್ ಸಹ ಅರ್ಹತೆ ಗಳಿಸಿದೆ. ಆರು ತಂಡಗಳ ಟೂರ್ನಿಯಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಲಾ ನಾಲ್ಕು ಪಂದ್ಯಗಳನ್ನು ಜಯಿಸಿದ್ದವು.

ಈ ಪ್ರತಿಷ್ಠಿತ ಟೆನಿಸ್ ಕಪ್‌ನ ಇತಿಹಾಸದಲ್ಲಿ ಭಾರತ ಎರಡನೇ ಬಾರಿ ಪಾಲ್ಗೊಳ್ಳುತ್ತಿದೆ.

ಗಾಫ್‌ಗೆ ಆಘಾತ

ಕೊಕೊ ಗಾಫ್

ಬರ್ಲಿನ್ (ಎಎಫ್‌ಪಿ): 12 ದಿನಗಳ ಹಿಂದೆ ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡ ಅಮೆರಿಕದ ಕೊಕೊ ಗಾಫ್ ಅವರು ಇಲ್ಲಿ ನಡೆಯುತ್ತಿರುವ ಜರ್ಮನ್ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನಲ್ಲೇ ಆಘಾತ ಅನುಭವಿಸಿದರು.

ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಎರಡನೇ ಶ್ರೇಯಾಂಕದ ಗಾಫ್ 6-2, 7-6 (8/6)ರಿಂದ ಚೀನಾದ ಕ್ವಾಲಿಫೈಯರ್ ಆಟಗಾರ್ತಿ ವಾಂಗ್ ಕ್ಸಿನ್ಯು ವಿರುದ್ಧ ಮುಗ್ಗರಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ (ಬೆಲರೂಸ್) ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.

ದೇಶಕ್ಕೆ ಆಡಲು ಆದ್ಯತೆ: ಟೆನಿಸ್ ಆಟಗಾರರಿಗೆ ಸಾಯ್ ಸೂಚನೆ

ನವದೆಹಲಿ (ಪಿಟಿಐ): ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ವಿವಿಧ ಯೋಜನೆಗಳ ಮೂಲಕ ಹಣಕಾಸು ನೆರವು ಪಡೆಯುವ ಭಾರತದ ಟೆನಿಸ್ ಆಟಗಾರರು ದೇಶಕ್ಕೆ ಆಡುವುದಕ್ಕೆ ಆದ್ಯತೆ ನೀಡಬೇಕು. ದೇಶಕ್ಕೆ ಆಡಲು ಸಕಾರಣವಿಲ್ಲದೇ ನಿರಾಕರಿಸಿದರೆ ನೆರವನ್ನು ಮರಳಿ ವಸೂಲಿ ಮಾಡಲಾಗುವುದು ಎಂದು ಸಾಯ್‌ನ ಆದೇಶದಲ್ಲಿ ತಿಳಿಸಲಾಗಿದೆ.

ಹಣಕಾಸಿನ ನೆರವಿಗೆ ಪ್ರತಿಯಾಗಿ ಉತ್ತರದಾಯಿತ್ವ ಹೊಂದಿರಲು ಸಾಯ್ ಈ ಕ್ರಮಕ್ಕೆ ಮುಂದಾಗಿದೆ. ಟಾರ್ಗೆಟ್ ಏಷ್ಯನ್ ಗೇಮ್ಸ್ ಗ್ರೂಪ್ (ಟಿಎಜಿಜಿ– ಟ್ಯಾಗ್) ಅಡಿ ಆಯ್ಕೆಯಾದ ಆಟಗಾರರು ಇಂಥ ವಾಗ್ದಾನ ಪತ್ರಕ್ಕೆ ಸಹಿಹಾಕಬೇಕೆಂದು ತಿಳಿಸಲಾಗಿದೆ. ಅವರು ಪಡೆಯುವ ಹಣಕಾಸಿನ ನೆರವು ದೇಶದ ಕ್ರೀಡಾ ಉನ್ನತಿಗೆ ಕಾಣಿಕೆ ನೀಡಬೇಕಾದ ಹೊಣೆಗಾರಿಕೆಯನ್ನೂ ಹೊಂದಿದೆ ಎಂಬ ಒಕ್ಕಣೆಯ ಪತ್ರಕ್ಕೆ ಸಹಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ತಮಿಳುನಾಡು ಎಡಿಜಿಪಿ ಪ್ರಕರಣ ಸಿಬಿ–ಸಿಐಡಿಗೆ

ನವದೆಹಲಿ (ಪಿಟಿಐ): ತಮಿಳುನಾಡು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಚ್.ಎಂ.ಜಯರಾಮ್ ಅವರನ್ನು ಬಂಧಿಸಿ ವಿಚಾರಣೆ ನಡೆಸುವಂತೆ ಮದ್ರಾಸ್ ಹೈಕೋರ್ಟ್ ನೀಡಿದ್ದ ಮೌಖಿಕ ಆದೇಶವನ್ನು ವಜಾ ಮಾಡಿರುವ ಸುಪ್ರೀಂ ಕೋರ್ಟ್, ಅಧಿಕಾರಿ ವಿರುದ್ಧದ ತನಿಖೆಯನ್ನು ಸಿಬಿ–ಸಿಐಡಿಗೆ ವರ್ಗಾವಣೆ ಮಾಡಿದೆ.

ಯುವತಿಯೊಬ್ಬರನ್ನು ಅಪಹರಿಸಲಾಗಿದ್ದ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಜಯರಾಮ್ ಅವರನ್ನು ತಮಿಳುನಾಡು ಸರ್ಕಾರ ಅಮಾನತು ಮಾಡಿತ್ತು. ಇದನ್ನು ಜಯರಾಮ್ ಪ್ರಶ್ನಿಸಿದ್ದರು. ಸರ್ಕಾರದ ಕ್ರಮಕ್ಕೆ ಬುಧವಾರ ಸುಪ್ರೀಂ ಕೋರ್ಟ್ ತೀವ್ರ ಬೇಸರ ವ್ಯಕ್ತಪಡಿಸಿತ್ತು.

ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಮನ್‌ಮೋಹನ್ ಸಿಂಗ್ ಅವರು ಇದ್ದ ಪೀಠದಲ್ಲಿ ಗುರುವಾರ ಜಯರಾಮ್ ಅವರ ಅರ್ಜಿ ವಿಚಾರಣೆ ಮುಂದುವರೆದಾಗ, ತನಿಖೆ ಮುಗಿಯುವವರೆಗೂ ಅಮಾನತು ಮುಂದುವರೆಯಬೇಕೆಂದು ಬಯಸುವುದಾಗಿ ಸರ್ಕಾರ ನ್ಯಾಯಾಲಯಕ್ಕೆ ಮನವಿ ಮಾಡಿತು.

ತಮಿಳುನಾಡು ಸರ್ಕಾರದ ಪರ ವಕೀಲ ಸಿದ್ಧಾರ್ಥ ದವೆ ಅವರು, 'ಎಡಿಜಿಪಿ ಜಯರಾಮ್ ಅವರ ವಿರುದ್ಧ ಅಪಹರಣ ಪ್ರಕರಣವಷ್ಟೇ ಅಲ್ಲದೇ ಮತ್ತಿತರ ಆರೋಪಗಳೂ ಇವೆ. ನಿಯಮಗಳ ಅನ್ವಯವೇ ಅಮಾನತು ಮಾಡಲಾಗಿದೆ' ಎಂದು ವಾದ ಮಂಡಿಸಿದರು.

ಈ ವೇಳೆ, ಮತ್ತೊಂದು ಪೀಠಕ್ಕೆ ಅಪಹರಣ ಪ್ರಕರಣದ ವಿಚಾರಣೆ ವರ್ಗಾಯಿಸುವಂತೆಯೂ ಹೈಕೋರ್ಟ್ ನ್ಯಾಯಮೂರ್ತಿಗೆ ಪೀಠವು ಸೂಚಿಸಿತು.

ಹಾಕಿ ವಿಶ್ವಕಪ್ ಲೋಗೊ ಅನಾವರಣ

ಚೆನ್ನೈ (ಪಿಟಿಐ): ಚೆನ್ನೈ ಮತ್ತು ಮದುರೈಯಲ್ಲಿ ನವೆಂಬರ್ 28 ರಿಂದ ಡಿಸೆಂಬರ್ 10ರವರೆಗೆ ನಡೆಯಲಿರುವ ಪುರುಷರ ಎಫ್‌ಐಎಚ್ ಹಾಕಿ ಜೂನಿಯರ್ ವಿಶ್ವಕಪ್‌ನ ಲೋಗೊವನ್ನು ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಗುರುವಾರ ಅನಾವರಣಗೊಳಿಸಿದರು.

ಇದೇ ಮೊದಲ ಬಾರಿಗೆ ಜೂನಿಯರ್ ವಿಶ್ವಕಪ್‌ನಲ್ಲಿ 24 ತಂಡಗಳು ಭಾಗವಹಿಸುತ್ತಿವೆ. ಈ ಹಿಂದೆ 16 ತಂಡಗಳು ಇರುತ್ತಿದ್ದವು. ಆರು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗುವುದು. 'ಡ್ರಾ' ಎತ್ತುವ ಸಮಾರಂಭ ಸ್ವಿಜರ್ಲೆಂಡ್‌ನ ಲುಸಾನ್‌ನಲ್ಲಿ ಇದೇ 24ರಂದು ನಡೆಯಲಿದೆ.

ಐಪಿಎಲ್: ದಾಖಲೆ ವೀಕ್ಷಣೆ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 18ನೇ ಆವೃತ್ತಿಯ ಟೂರ್ನಿಯನ್ನು ದಾಖಲೆಯ ಸಮಯ ವೀಕ್ಷಿಸಲಾಗಿದೆ ಎಂದು ಅಧಿಕೃತ ಪ್ರಸಾರಕ ಜಿಯೊ ಸ್ಟಾರ್ ತಿಳಿಸಿದೆ.

2025ರ ಐಪಿಎಲ್ ಟೂರ್ನಿಯನ್ನು ಟೆಲಿವಿಷನ್ ಮತ್ತು ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್ ಮುಂತಾದ ಇಂಟರ್ನೆಟ್ ಆಧಾರಿತ ಸಾಧನಗಳ ಮೂಲಕ 84,000 ಕೋಟಿಗೂ ಹೆಚ್ಚು ನಿಮಿಷಗಳ ಕಾಲ ವೀಕ್ಷಣೆ ಮಾಡಲಾಗಿದೆ.

ಆರ್‌ಸಿಬಿ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಫೈನಲ್ ಪಂದ್ಯವು ಇತಿಹಾಸದಲ್ಲೇ ಅತ್ಯಂತ ಹೆಚ್ಚು ವೀಕ್ಷಣೆಗೊಳಗಾದ ಟಿ20 ಪಂದ್ಯವಾಗಿದೆ. ಆ ಪಂದ್ಯವನ್ನು ವಿವಿಧ ಮಾಧ್ಯಮಗಳ ಮೂಲಕ 3,170 ಕೋಟಿ ನಿಮಿಷಗಳ ಕಾಲ ವೀಕ್ಷಿಸಲಾಗಿದೆ. ಟಿವಿಯಲ್ಲಿ ಆ ಪಂದ್ಯವನ್ನು 16.9 ಕೋಟಿ ಜನರು ವೀಕ್ಷಿಸಿದರು. ಡಿಜಿಟಲ್ ಸಾಧನಗಳಲ್ಲಿ ಪಂದ್ಯವು 89.2 ಕೋಟಿ ವಿಡಿಯೊ ವೀಕ್ಷಣೆ ಪಡೆಯಿತು. ಕಳೆದ ವರ್ಷಕ್ಕೆ ಹೋಲಿಸಿದರೆ ಜಿಯೊಸ್ಟಾರ್‌ನ ಡಿಜಿಟಲ್ ವೀಕ್ಷಣೆಯಲ್ಲಿ ಈ ಬಾರಿ ಶೇ 29ರಷ್ಟು ಏರಿಕೆಯಾಗಿದೆ.

ಟೆಲಿವಿಷನ್ ವಿಭಾಗದಲ್ಲಿ ಸ್ಟಾರ್ ಸ್ಪೋರ್ಟ್ಸ್‌ನಲ್ಲಿ ಪ್ರೇಕ್ಷಕರು 45,600 ನಿಮಿಷಗಳ ಕಾಲ ಐಪಿಎಲ್ ನೇರಪ್ರಸಾರವನ್ನು ವೀಕ್ಷಿಸಿದ್ದಾರೆ. ಇದೂ ಕೂಡ ಐಪಿಎಲ್ ಇತಿಹಾಸದಲ್ಲೇ ದಾಖಲೆಯಾಗಿದೆ.

ಸಮಾರಂಭದ ಮಧ್ಯೆಯೇ ಹೊರನಡೆದ ಶಿಕ್ಷಣ ಸಚಿವ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಜಭವನದಲ್ಲಿ ಗುರುವಾರ ಸಮಾರಂಭವೊಂದರ ಮಧ್ಯೆಯೇ ಕೇರಳ ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ಅವರು ದಿಢೀರನೆ ಹೊರನಡೆದರು.

ರಾಜಭವನದಲ್ಲಿ ಭಾರತಮಾತೆಯ ಫೋಟೊ ಇರಿಸಿದ್ದನ್ನು ಖಂಡಿಸಿ ಹೀಗೆ ಮಾಡಿದ್ದಾಗಿ ಶಿವನ್‌ಕುಟ್ಟಿ ತಿಳಿಸಿದರಲ್ಲದೆ, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಟೀಕಿಸಿದರು.

ಇದು ಶಿಷ್ಟಾಚಾರ ಉಲ್ಲಂಘನೆ ಎಂದು ರಾಜಭವನವು ಹೇಳಿಕೆ ಬಿಡುಗಡೆ ಮಾಡಿದೆ. ಭಾರತಮಾತೆ ಹಾಗೂ ಆರ್‌ಎಸ್‌ಎಸ್ ಮುಖಂಡರ ಫೋಟೊಗಳನ್ನು ರಾಜಭವನದಲ್ಲಿ ಪ್ರದರ್ಶಿಸುವುದನ್ನು ಬುಧವಾರವಷ್ಟೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಖಂಡಿಸಿದ್ದರು. ರಾಜಭವನಕ್ಕೆ ಘನತೆ ಇದ್ದು, ಅದನ್ನು ಆರ್‌ಎಸ್‌ಎಸ್ ಶಾಖೆಯ ಮಟ್ಟಕ್ಕೆ ಇಳಿಸಕೂಡದು ಎಂದು ಟೀಕಿಸಿದ್ದರು. ಅದರ ಬೆನ್ನಲ್ಲೇ, ಸಮಾರಂಭದ ನಡುವೆಯೇ ಶಿಕ್ಷಣ ಸಚಿವರು ಹೊರನಡೆದ ಪ್ರಸಂಗಕ್ಕೆ ರಾಜ್ಯಪಾಲರು ಸಾಕ್ಷಿಯಾಗಿದ್ದಾರೆ.

ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಾಧಕರಿಗೆ ಪ್ರಶಸ್ತಿ ವಿತರಿಸುವ ಸಮಾರಂಭ ಅದಾಗಿತ್ತು. ತಾವು ಹೊರನಡೆಯಲು ಕಾರಣ ಏನು ಎಂಬ ತಿಳಿಸುವ ಸೌಜನ್ಯವನ್ನೂ ಶಿವನ್‌ಕುಟ್ಟಿ ತೋರಲಿಲ್ಲ ಎಂದು ರಾಜಭವನದ ಪ್ರಕಟಣೆ ಉಲ್ಲೇಖಿಸಿದೆ.

ಗಣ್ಯರು ಉಪಸ್ಥಿತರಿದ್ದ ಸಮಾರಂಭದಲ್ಲಿ ದಿಢೀರನೆ ಶಿಕ್ಷಣ ಮಂತ್ರಿಯೇ ನಡೆದುಹೋಗುವುದು ತಪ್ಪು ಸಂದೇಶ ರವಾನಿಸುತ್ತದೆ

ಕೇರಳ ರಾಜಭವನದ ಪ್ರಕಟಣೆ

ಶಿವನ್‌ಕುಟ್ಟಿ

ಅಮೆರಿಕ: ಸಾಮಾಜಿಕ ಮಾಧ್ಯಮ ಖಾತೆಗಳ ಪರಿಶೀಲನೆ

ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ಪ್ರಕ್ರಿಯೆ ಪುನರಾರಂಭ

ವಾಷಿಂಗ್ಟನ್ (ಎಪಿ): ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ನೀಡುವ ಪ್ರಕ್ರಿಯೆಯನ್ನು ಅಮಾನತುಗೊಳಿಸಿದ್ದ ಅಮೆರಿಕ ಅದನ್ನು ಪುನರಾರಂಭಿಸುವುದಾಗಿ ತಿಳಿಸಿದೆ. ಆದರೆ, ಅರ್ಜಿದಾರರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು 'ಅನ್‌ಲಾಕ್' ಮಾಡಬೇಕು ಎಂದು ಅದು ಹೇಳಿದೆ.

ವೀಸಾಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬರ ಸಾಮಾಜಿಕ ಮಾಧ್ಯಮ ಖಾತೆಗಳು ಪರಿಶೀಲನೆಗೆ ಒಳಗಾಗಲಿವೆ ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಿವರಿಸಿದೆ.

'ಅರ್ಜಿದಾರರ ಖಾತೆಗಳನ್ನು ಸಚಿವಾಲಯದ ಅಧಿಕಾರಿಗಳು ಪರಿಶೀಲಿಸುತ್ತಾರೆ. ಅಮೆರಿಕದ ಮೂಲ ತತ್ವಗಳು, ಸರ್ಕಾರ, ಸಂಸ್ಕೃತಿ, ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅರ್ಜಿದಾರರ ಸಂದೇಶಗಳ ಬಗ್ಗೆ ನಿಗಾವಹಿಸುತ್ತಾರೆ' ಎಂದು ಅದು ಮಾಹಿತಿ ನೀಡಿದೆ.

ವೀಸಾಗೆ ಹೊಸದಾಗಿ ಅರ್ಜಿ ಸಲ್ಲಿಸುವವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ಆ ಮೂಲಕ ಪರಿಶೀಲನೆಗೆ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಅಂಥವರ ವೀಸಾ ಅರ್ಜಿ ತಿರಸ್ಕೃತವಾಗುತ್ತದೆ ಎಂದು ಸಚಿವಾಲಯ ಬುಧವಾರ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿದಾರರು ಖಾತೆಗಳನ್ನು ಬಹಿರಂಗಪಡಿಸಲು ನಿರಾಕರಿಸಿದರೆ, ಅವರು ತಮ್ಮ ಆನ್‌ಲೈನ್ ಚಟುವಟಿಕೆಗಳನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ ಎಂದು ಅರ್ಥೈಸಬೇಕಾಗುತ್ತದೆ ಎಂದು ಅದು ಹೇಳಿದೆ.

'ವೀಸಾ ಸೌಲಭ್ಯವೇ ಹೊರತು, ಅಧಿಕಾರವಲ್ಲ'



ನವದೆಹಲಿ (ಪಿಟಿಐ): 'ಅಮೆರಿಕ ವೀಸಾವು ಸೌಲಭ್ಯವೇ ಹೊರತು ಅಧಿಕಾರವಲ್ಲ. ವೀಸಾ ನೀಡಿದ ಮೇಲೂ ಪರಿಶೀಲನೆ ನಿಲ್ಲುವುದಿಲ್ಲ, ಒಂದೊಮ್ಮೆ ಕಾನೂನು ಉಲ್ಲಂಘಿಸಿದರೆ, ಅಧಿಕಾರಿಗಳು ಅದನ್ನು ಹಿಂದಕ್ಕೆ ಪಡೆಯಬಹುದು' ಎಂದು ಇಲ್ಲಿನ ಅಮೆರಿಕ ರಾಯಭಾರ ಕಚೇರಿ ತಿಳಿಸಿದೆ.

'ಡ್ರಗ್ಸ್ ಅಕ್ರಮವಾಗಿ ಹೊಂದಿದ್ದರೆ, ಅಮೆರಿಕದ ಯಾವುದೇ ಕಾನೂನು ಉಲ್ಲಂಘಿಸಿದರೆ ವಿದ್ಯಾರ್ಥಿ ಹಾಗೂ ಸಂದರ್ಶಕರ ವೀಸಾವನ್ನು ಭವಿಷ್ಯದಲ್ಲಿಯೂ ಪಡೆಯಲು ಅನರ್ಹರಾಗುತ್ತಾರೆ ಎಂದು ರಾಯಭಾರ ಕಚೇರಿಯ 'ಎಕ್ಸ್' ಖಾತೆಯಲ್ಲಿ ಸಂದೇಶ ಪ್ರಕಟಿಸಲಾಗಿದೆ.

ಶ್ರೀ ನರಸಿಂಹಗಿರಿ ವಿದ್ಯಾ ಸಂಸ್ಥೆ (ರಿ), ನರಸಿಂಹಗಿರಿ

ಕೂಡ್ಲಿಗಿ ತಾ॥ ಬೆಳ್ಳಗಟ್ಟೆ ಅಂಚೆ, ವಿಜಯನಗರ ಜಿ॥ ಶ್ರೀ ರುದ್ರಣ್ಣ ಕಾರ್ಯದರ್ಶಿಗಳು 9740567052

ಶಿಕ್ಷಕರು ಬೇಕಾಗಿದ್ದಾರೆ

ಶ್ರೀ ನರಸಿಂಹಗಿರಿ ವಿದ್ಯಾ ಸಂಸ್ಥೆ (ರಿ), ನರಸಿಂಹಗಿರಿ (ಗ್ರಾಮ), ಬೆಳ್ಳಗಟ್ಟೆ ಅಂಚೆ, ಕೂಡ್ಲಿಗಿ (ತಾ), ವಿಜಯನಗರ ಜಿಲ್ಲೆ

ಸದರಿ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಈ ಕೆಳ ಕಂಡ ಅನುದಾನಿತ ಪ್ರೌಢ ಶಾಲೆಯಲ್ಲಿ ಖಾಲಿ ಇರುವ 01 ಬೋಧಕ ಶಿಕ್ಷಕರ ಹುದ್ದೆಗೆ ನೇಮಕಾತಿಗಾಗಿ ಅರ್ಹ ವಿದ್ಯಾರ್ಹತೆಯುಳ್ಳ ಶಿಕ್ಷಕರು ಬೇಕಾಗಿದ್ದಾರೆ.

ಕ್ರ ಸಂ.	ಶಾಲೆಯ ಹೆಸರು	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ	ವಿದ್ಯಾರ್ಹತೆ
01	ಶ್ರೀ ಚೌಡೇಶ್ವರಿ ಪ್ರೌಢ ಶಾಲೆ, ಹಾರಕಬಾವಿ, ಕೂಡ್ಲಿಗಿ (ತಾ), ವಿಜಯನಗರ(ಜಿ).	ಕನ್ನಡ ಪಂಡಿತ	01	ಸಾಮಾನ್ಯ (20ನೇ ಬಿಂದು)	ಬಿ.ಎ. ಬಿ. ಇಡಿ.

1) ಮೇಲ್ಕಂಡ ಜಾಹೀರಾತನ್ನು ಅಪರ ಆಯುಕ್ತರು ಶಾ.ಶಿ.ಇ. ಗುಲ್ಬರ್ಗ ಇವರ ಆದೇಶ ಸಂಖ್ಯೆ ಸಿ 4(5) ಖಾಪ್ರೌಶಾ/ ಹುದ್ದೆ.ತುಂ/ಅನು/01/2019–20/726 ದಿನಾಂಕ: 23–07–2019 ರ ಅನ್ವಯ ಪ್ರಕಟಿಸಿದೆ. 2) ಅಪರ ಆಯುಕ್ತರ ಕಛೇರಿ ಶಾ.ಶಿ.ಇಲಾಖೆ, ಕಲಬುರ್ಗಿ ಇವರ ಆದೇಶ ಸಂಖ್ಯೆ:–ಸಿ(5) ಖಾಪ್ರೌಶಾ/ಹುದ್ದೆ, ತುಂ/ಅನು/01/2019–20/276 ದಿನಾಂಕ:–05–06–2025. 3) ವಿಷಯಕ್ಕೆ ತಕ್ಕಂತೆ ವಿದ್ಯಾರ್ಹಾತೆ ಪಡೆದಿರಬೇಕು. 4) ಸರ್ಕಾರದ ಸೇವೆಗಳ 100 ಬಿಂದುಗಳ ಅನುಗುಣವಾಗಿ ಮೀಸಲಾತಿ ಇರುತ್ತದೆ. 5) ಮೇಲಿನ ಹುದ್ದೆಗೆ ಸರ್ಕಾರದ ಆದೇಶದಂತೆ ಪಿಂಚಣಿ ಸೌಲಭ್ಯವಿಲ್ಲ 6) ಸದರಿ ಹುದ್ದೆಗೆ ಸೇರಲು ಬಯಸುವ ಅಭ್ಯರ್ಥಿಗಳು ತಮ್ಮ ಲಿಖಿತ ಅರ್ಜಿಯೊಂದಿಗೆ ಎಲ್ಲಾ ಅರ್ಹ ದಾಖಲೆಗಳನ್ನು ಕಾರ್ಯದರ್ಶಿಗಳು (ಮೇಲಿನ ವಿಳಾಸ) ಮತ್ತು ಪ್ರತಿಯನ್ನು ಉಪ ನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವಿಜಯನಗರ ಇವರಿಗೆ ಪತ್ರಿಕೆ ಪ್ರಕಟಗೊಂಡ 21 ದಿನದೊಳಗೆ ಅರ್ಜಿಯನ್ನು ಸಲ್ಲಿಸುವುದು. 7) ಸಂದರ್ಶನದ ಪತ್ರವನ್ನು ತಮಗೆ ಅಂಚೆಯ ಮೂಲಕ ಕಳಿಸಿಕೊಡಲಾಗುವುದು.

ಸ್ಥಳ: ನರಸಿಂಹಗಿರಿ
ದಿನಾಂಕ:19–06–2025

ಸಹಿ/– ರುದ್ರಣ್ಣ
(ಕಾರ್ಯದರ್ಶಿಗಳು)

CREATING Awesome EXPERIENCES FOR OVER 25 YEARS

GREAT JOURNEYS DESERVE GREATER REWARDS

TOYOTA

LOW ROI OF 5.99%* + SERVICE PACKAGE 5 FREE SERVICES* + EXTENDED WARRANTY OF 5 YEARS* + CORPORATE & EXCHANGE OFFERS*

THE COOL TOYOTA GLANZA

STARTS AT ₹6.90 LAKHS ONLY*

PETROL 22.94 km/l** | CNG 30.61 km/kg**

THE PREMIUM HATCHBACK | ADVANCED FEATURES 360° Camera, Hill Hold Assist, Connected Car Tech | LOW COST OF OWNERSHIP

URBAN CRUISER HYRYDER SELF-CHARGING HYBRID ELECTRIC SUV

STARTS AT ₹11.34 LAKHS ONLY*

27.97 km/l** BEST IN CLASS MILEAGE

SELF-CHARGING HYBRID ELECTRIC SUV | ADVANCED FEATURES Panoramic Sunroof, Ventilated Seats | 8 YEARS Hybrid Battery Warranty

LAND CRUISER 300 | VELLFIRE | CAMRY | LEGENDER | FORTUNER | HILUX | INNOVA HYCROSS | INNOVA CRYSTA | HYRYDER | RUMION | TAISOR | GLANZA

* Terms and conditions apply. ** Fuel efficiency as certified by test agency under rule 115 of CMVR, 1989 under standard test conditions. Actual mileage on road may vary. Creative visualisation: digitally created visual. Picture of the vehicle was not taken while driving.

SPECIAL OFFERS FOR GOVERNMENT EMPLOYEES

T-CONNECT | Toyota Mobility Service Conversion | Fleet | Leasing | TOYOTA U TRUST Buy | Sell | Exchange - Used car | TOYOTA FINANCIAL SERVICES

Bharat Toyota — Bangalore: [Domlur]: 9741357683, 08047950000

Ravindu Toyota — Bangalore: [K R Puram, Magadi Rd, Marathahalli, Rajajinagar, Victoria Rd, Yeshwantpur]: 8058245555; Kolar: 9606090040; Tumkur: 9379189796

Viva Toyota — Bangalore: [Hebbal, Vidyaranyapura]: 9900027736; [Airport Rd, Kogilu]: 9900030617; Mysore Rd: 9900030620

Nandi Toyota — Bangalore: [Banashankari, Banaswadi, Bannerghatta, Bommanahalli, Whitefield]: 7022340713; Hosur Road: 9945255800; Kanakapura Rd: 9731369995; Queens Rd: 9741310066

Shodha Toyota — Bagalkot: 8147599463; Belgaum: Shahapur: 8147599461; Poona-Bangalore Road: 7899305505, 7760963774; Bijapur: 9606484983; Davangere: 9008952277; Hubli: 7204818810, 8123047553

Palace Toyota — Hunsur: 9663709743; Kodagu, Madikeri: 7022671919; Mandya: 9538874907; Mysore: Hootagalli: 9538874906; Krishnamurthy Puram: 9538874936

Shakti Toyota — Chikkamagaluru, Hassan, Kadur, Shivamogga: 9686652728; Sagara: 08183200402

United Toyota — Mangalore: [Bunt's Hostel, Padil]: 9686687581; Udupi: 9686687581

Karuna Toyota — Gulbarga: 7829990010; Raichur: 7829990021

BJS Toyota — Bellary: Hospet: 7829927943

11ನೇ ಯೋಗ ದಿನಾಚರಣೆ ದಿನದಂದು, ಆರೋಗ್ಯವಂತ, ಸಮೃದ್ಧಿಭರಿತ ಮತ್ತು ಅತ್ಯಂತ ವೈಭವೋಪೇತ ಭಾರತ ನಿರ್ಮಾಣಕ್ಕಾಗಿ ಪ್ರತಿಜ್ಞೆ ಮಾಡೋಣ

PATANJALI®



ಯೋಗ–ಸಮೃದ್ಧ ಭಾರತ: ಸ್ವಾಮಿ ರಾಮದೇವಜಿ'ರವರ ಆಹ್ವಾನ

ಬನ್ನಿರಿ, ಈ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ, ಸ್ವಾಮಿಜಿಯವರ ನೇತೃತ್ವದಲ್ಲಿ ಯೋಗವೃತಿ ಮತ್ತು ಸ್ವದೇಶಿವೃತಿಗಳಾಗಿ ಸ್ವಾಸ್ಥ್ಯ, ಸಮೃದ್ಧಿ, ಸಮರ್ಥ, ಸಂಘಟಿತ ಮತ್ತು ಪರಮ ವೈಭವಯುತ ಭಾರತ ನಿರ್ಮಾಣ ಮಾಡೋಣ. ಪತಂಜಲಿಯ ಮೂಲಕ ಕಳೆದ ಮೂರು ದಶಕಗಳಲ್ಲಿ ಯೋಗ, ಆಯುರ್ವೇದ ಮತ್ತು ಸ್ವದೇಶಿ ಮನೋಭಾವವು ವಿಶ್ವದ 200 ದೇಶಗಳಾದ್ಯಂತ 200 ಕೋಟಿಗೂ ಅಧಿಕ ಜನರಿಗೆ ರೋಗಮುಕ್ತಿ, ವ್ಯಸನಮುಕ್ತಿ ಮತ್ತು ಆಧ್ಯಾತ್ಮಿಕ ಮಾರ್ಗಗಳನ್ನು ಒದಗಿಸಿದೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ಉಳಿತಾಯ ಅಷ್ಟೇ ಅಲ್ಲದೆ, ಆಧ್ಯಾತ್ಮಿಕ ಹಾಗೂ ಸನಾತನ ಬದುಕಿಗೆ ಬುನಾದಿ ಹಾಕಿದೆ.

ಜಾಗೃತೆಯ ದೇವರು

ದೇಶಾದ್ಯಂತ 25 ಲಕ್ಷಕ್ಕೂ ಅಧಿಕ ಕಿಲೋಮೀಟರ್ ಸಂಚರಿಸಿ, 10 ಕೋಟಿಗೂ ಅಧಿಕ ಜನರಿಗೆ ಯೋಗ ತರಬೇತಿ ನೀಡಿ, ಮಾನವೀಯ ಸೇವೆಗಳಿಗೆ ನಿಸ್ವಾರ್ಥ ಮತ್ತು ಫಲಾಪೇಕ್ಷೆಗಳಿಲ್ಲದೆ ಸ್ವಯಂಪ್ರೇರಿತ ಒಂದು ಕೋಟಿಗೂ ಅಧಿಕ ಭಕ್ತಾದಿಗಳನ್ನು ರೂಪಿಸಿರುವ ಸ್ವಾಮಿಜಿ ಮಹಾರಾಜರನ್ನು, ಈ ದೇಶದ ಉನ್ನತ ಸಂತರು ಮತ್ತು ಶ್ರೀಗಳು ಸೇರಿದಂತೆ, ಕೋಟ್ಯಾಂತರ ಜನರು ಕೂಡ "ಜಾಗೃತೆಯ ದೇವರು" ಎಂದು ಗುರುತಿಸುತ್ತಾರೆ. ತರಬೇತಿ ಪಡೆದಿರುವ ಪತಂಜಲಿಯ ಈ ಯೋಗಿ ಸಹೋದರರು ಮತ್ತು ಸಹೋದರಿಯರು ದೇಶದ ಪ್ರತಿ ಗ್ರಾಮ, ನಗರ, ಗಲ್ಲಿ ಮತ್ತು ಸ್ಥಳಗಳಲಿ ಒಂದು ಲಕ್ಷಕ್ಕೂ ಅಧಿಕ ಯೋಗ ಶಿಬಿರಗಳನ್ನು ಮತ್ತು ನಿಯಮಿತ ಯೋಗ ತರಗತಿಗಳನ್ನು ಕೈಗೊಳ್ಳುವ ಮೂಲಕ ಜನಮಾನದಲ್ಲಿ ಆರೋಗ್ಯ ಮತ್ತು ಜಾಗೃತಿಯ ಸಂದೇಶ ಪಸರಿಸುತ್ತಿದ್ದಾರೆ. ಬೆಳಗ್ಗೆ ಬೇಗ ಎದ್ದೇಳುವ ಮತ್ತು ಯೋಗಾಭ್ಯಾಸ ಮಾಡುವ ಈ ಕ್ರಾಂತಿಯು, ಭಾರತವನ್ನು ಹೊಸ ದಿಕ್ಕಿನತ್ತ ಕರೆದೊಯ್ಯುತ್ತಲಿದೆ.

ವಿಶ್ವದ ಅತಿದೊಡ್ಡ ಯೋಗ ಗುರು

ಯೋಗ ಕಲಿಯಲು ಯೋಗ ಸಂತ ಸ್ವಾಮಿ ರಾಮದೇವರ ಜೊತೆಗೆ ನೇರವಾಗಿ ಪಾಲ್ಗೊಳ್ಳಿ

ಆಸ್ಥಾ LIVE — ಪ್ರತಿದಿನ ಬೆ. 5:30 ರಿಂದ 7:30 & 8:00 ಗಂಟೆ

INDIA TV — ಪ್ರತಿದಿನ ಬೆ. 7:56 ಗಂಟೆಗೆ

ನಿಸ್ವಾರ್ಥ ಮಾನವ ಕಲ್ಯಾಣ ಅಭಿಯಾನ

ಪತಂಜಲಿಯು ಭಾರತದಲ್ಲಿ ಬೃಹತ್ ಸೇವೆಯನ್ನು ನೀಡುತ್ತಿದೆ. ದೇಶಾದ್ಯಂತ 10,000 ಕ್ಕೂ ಹೆಚ್ಚು ಪತಂಜಲಿ ಕೇಂದ್ರಗಳು ಮತ್ತು 2,500 ಅರ್ಹ ಮತ್ತು ತರಬೇತಿ ಪಡೆದ ವೈದ್ಯರ ಮೂಲಕ ಯೋಗ, ಆಯುರ್ವೇದ ಮತ್ತು ಸ್ವದೇಶಿ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಆರ್ಥಿಕ ದೃಷ್ಟಿಯಿಂದ ಮೌಲ್ಯಮಾಪನ ಮಾಡಿದರೆ, ರಾಷ್ಟ್ರ ನಿರ್ಮಾಣಕ್ಕೆ ಈ ಕೊಡುಗೆ ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಅಧಿಕವಾಗಿದೆ. ಪತಂಜಲಿಯ ಪ್ರತಿಯೊಂದು ಯೋಜನೆಯೂ ಭಾರತ ಮಾತೆಯ ಸೇವೆಗೆ ಸಮರ್ಪಿತವಾಗಿದೆ.

ಸ್ವದೇಶಿಯಿಂದ ಸಮೃದ್ಧಿ: ದಾನಕ್ಕಾಗಿ ಸಮೃದ್ಧಿ.

ಆಕ್ಸ್‌ಫಾಮ್ ಗ್ಲೋಬಲ್ (ಯುಕೆ) ಮತ್ತು ಇನ್ನಿತರ ಸಂಸ್ಥೆಗಳು, 1765 ಮತ್ತು 1900 ರ ನಡುವೆ ಕೈಗೊಂಡ ಸಮೀಕ್ಷೆಯ ಪ್ರಕಾರ, ವಿದೇಶಿ ಕಂಪನಿಗಳು ಭಾರತದ ಮೇಲೆ ಆಕ್ರಮಣ ಮಾಡಿವೆ ಮತ್ತು ಭಾರತದಿಂದ 100 ಟ್ರಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ಮೌಲ್ಯದ ಸಂಪತ್ತನ್ನು ಲೂಟಿ ಮಾಡಿವೆ ಹಾಗೂ ಈ ಲೂಟಿಕೋರತನ ಇಂದಿಗೂ ಸಹ ಮುಂದುವರೆದಿದೆ. ಭಾರತವನ್ನು ಆರ್ಥಿಕ ಮಹಾಶಕ್ತಿಯನ್ನಾಗಿ ಮಾಡಲು ಸಹಾಯ ಮಾಡುವುದರ ಜೊತೆಗೆ ಸ್ವದೇಶಿ ಚಳುವಳಿಯ ಮೂಲಕ ಈ ಲೂಟಿಯನ್ನು ನಿಲ್ಲಿಸಲು ಸ್ವಾಮಿಜಿಯವರು ದೃಢ ಸಂಕಲ್ಪ ಮಾಡಿದ್ದಾರೆ. "ದಾನ ಧರ್ಮಕ್ಕಾಗಿ ಸಮೃದ್ಧಿ": ಪತಂಜಲಿಯು ಭಾರತ ಮಾತೆಯ ನಿಸ್ವಾರ್ಥ ಸೇವೆಯಲ್ಲಿ ಹೂಡಿಕೆ ಮಾಡಿದೆ, ಹೂಡಿಕೆ ಮಾಡುತ್ತಿದೆ ಮತ್ತು ತನ್ನ ಲಾಭದ 100% ಅನ್ನು ಹೂಡಿಕೆ ಮಾಡುವುದನ್ನು ಮುಂದುವರಿಸುತ್ತದೆ.

ಭಾರತೀಯ ಶಿಕ್ಷಾ ಮಂಡಳಿಯ ಮೂಲಕ ಮೆಕಾಲೆ ಶಿಕ್ಷಣ ವ್ಯವಸ್ಥೆಯಿಂದ ಮುಕ್ತಿ

1835ರ ನಂತರ ಬ್ರಿಟಿಷರು ಜಾರಿಗೆ ತಂದ ಮೆಕಾಲೆ ಶಿಕ್ಷಣ ವ್ಯವಸ್ಥೆಯಿಂದ ಭಾರತವನ್ನು ಮುಕ್ತಗೊಳಿಸಲು, ಪತಂಜಲಿ ಗುರುಕುಲಂ ಮತ್ತು ಆಚಾರ್ಯಕುಲಂ ಮಾದರಿಯ ಸಂಸ್ಥೆಗಳು ಭಾರತೀಯ ಶಿಕ್ಷಣ ಮಂಡಳಿಯ ಮಾರ್ಗದರ್ಶನದಲ್ಲಿ ಬಲವಾದ ವ್ಯಕ್ತಿತ್ವ, ಪಾತ್ರ ಮತ್ತು ನಾಯಕತ್ವದ ಗುಣಗಳನ್ನು ಹೊಂದಿರುವ ಮಕ್ಕಳನ್ನು ರೂಪಿಸುತ್ತಿವೆ. ಅಲ್ಲದೆ, ಲಕ್ಷಾಂತರ ಶಾಲೆಗಳನ್ನು ಭಾರತೀಯ ಶಿಕ್ಷಣ ಮಂಡಳಿಯೊಂದಿಗೆ ಸಂಯೋಜಿಸುವ ಮೂಲಕ, ನಾವು ಹೊಸ ಭಾರತವನ್ನು ನಿರ್ಮಿಸುತ್ತಿದ್ದೇವೆ. ನಿಮ್ಮ ಮಕ್ಕಳಿಗೆ ಪತಂಜಲಿ ಗುರುಕುಲಂ, ಆಚಾರ್ಯಕುಲಂ, ಪತಂಜಲಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ನೀಡಿ ಮತ್ತು ರಾಷ್ಟ್ರ ನಿರ್ಮಾಣದ ಮಹಾ ಯಜ್ಞದಲ್ಲಿ ನಿಮ್ಮ ಪಾತ್ರವನ್ನು ನಿರ್ವಹಿಸುತ್ತಿದ್ದೇವೆ.

ಆರೋಗ್ಯ ಕ್ರಾಂತಿ: ಆರೋಗ್ಯಕರ ಭಾರತ

ಚರಕ, ಸುಶ್ರುತ, ಧನ್ವಂತರಿ ಮತ್ತು ಪತಂಜಲಿಯಂತಹ ಮಹಾನ್ ಋಷಿಗಳಿಂದ ಬಂದ ಸಾಂಪ್ರದಾಯಿಕ ಜ್ಞಾನದ ಆಧಾರದ ಮೇಲೆ ವೈಜ್ಞಾನಿಕ ಸಂಶೋಧನೆಯೊಂದಿಗೆ ಆರೋಗ್ಯ, ಯೋಗಗ್ರಾಮ ಮತ್ತು ನಿರಾಮಾಯಂ ಮಾದರಿಯ ಪತಂಜಲಿಯಂತಹ ವಿಶ್ವ ದರ್ಜೆಯ ಸಮಗ್ರ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳ ಮೂಲಕ ಕೋಟ್ಯಂತರ ಜನರು ಆರೋಗ್ಯವಂತರಾಗುತ್ತಿದ್ದಾರೆ ಮತ್ತು ಸದೃಢರಾಗುತ್ತಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಸ್ವತಃ ಯೋಗ ಮಾಡಬೇಕು ಮತ್ತು ಇನ್ನಿತರ ಹತ್ತು ಜನರನ್ನು ಯೋಗ ಮಾಡಲು ಪ್ರೋತ್ಸಾಹಿಸಬೇಕು ಎಂಬುದು ಸ್ವಾಮೀಜಿಯವರ ಮನವಿ. ಜಾಗೃತ ಜನರಲ್ಲಿ ಕೇವಲ 1% ಜನರು ಬೆಳಿಗ್ಗೆ ಯೋಗ ಮಾಡಿ ಯೋಗದಿಂದ ವಿಧಿಸಲಾದ ಸನಾತನ ಜೀವನ ವಿಧಾನವನ್ನು ಅಳವಡಿಸಿಕೊಂಡರೆ, ಭಾರತದ ಆರೋಗ್ಯ ಬಜೆಟ್ ಒಂದು ದಿನ ಶೂನ್ಯಕ್ಕೆ ಇಳಿಯಬಹುದು.

ಸಂಶೋಧನೆ ಮತ್ತು ಪರಿಹಾರಗಳು: ವಿಜ್ಞಾನ ಮತ್ತು ಸಂಪ್ರದಾಯದ ಸಂಗಮ.

500 ಕ್ಕೂ ಹೆಚ್ಚು ವಿಜ್ಞಾನಿಗಳು ಪತಂಜಲಿಯು ಹಲವು ವರ್ಷಗಳ ಸಂಶೋಧನೆಯ ನಂತರ ಯಕೃತ್ತು, ಮೂತ್ರಪಿಂಡ, ಹೃದಯ, ಮೆದುಳು ಮತ್ತು ಉಸಿರಾಟದ ವ್ಯವಸ್ಥೆಯ ಕಾಯಿಲೆಗಳಿಗೆ ಪುರಾವೆ ಆಧಾರಿತ ಔಷಧಿಗಳನ್ನು ಅಭಿವೃದ್ಧಿಪಡಿಸಿಲಾಗಿದೆ. ನಮ್ಮ ವಿಜ್ಞಾನಿಗಳ 5,000ಕ್ಕೂ ಅಧಿಕ ಸಂಶೋಧನಾ ಪ್ರೋಟೋಕಾಲ್‌ಗಳು ಮತ್ತು ಸಂಶೋಧನಾ ಪ್ರಬಂಧಗಳು 500 ಕ್ಕೂ ಹೆಚ್ಚು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಆಯುರ್ವೇದವನ್ನು ಸಂಶೋಧನೆ ಮತ್ತು ಪುರಾವೆ ಆಧಾರಿತ ಔಷಧಿಗಳ ವ್ಯವಸ್ಥೆಯನ್ನಾಗಿ ರೂಪಿಸಿ ಜಾಗತಿಕ ಮನ್ನಣೆ ಪಡೆಯುವಲ್ಲಿ ಇದು ಉತ್ತಮ ಕೆಲಸ ಮಾಡಿದೆ.

ಯೋಗಧರ್ಮವು ಈಗ ಯುಗಧರ್ಮವಾಗಬೇಕು: ಸನಾತನವೇ ಇಂದಿನ ಏಕೈಕ ಪರಿಹಾರ

ಯೋಗ ಮತ್ತು ಸನಾತನ ಧರ್ಮವು ಜಗತ್ತಿಗಿಂದು ಅತ್ಯಗತ್ಯವಾಗಿದೆ. ಯೋಗ ಮತ್ತು ಸನಾತನ ಮೌಲ್ಯಗಳ ಮೂಲಕ ಒತ್ತಡ, ರೋಗಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವನತಿಯೊಂದಿಗೆ ಹೋರಾಡುತ್ತಿರುವ ಜಗತ್ತಿಗೆ ಪತಂಜಲಿಯು ಹೊಸ ದಿಶೆಯನ್ನು ಒದಗಿಸುತ್ತಿದೆ. ಬನ್ನಿ, ಯೋಗಧರ್ಮವನ್ನು ಆಧರಿಸಿದ ಸನಾತನ ಜೀವನ ವಿಧಾನವನ್ನು ಅಳವಡಿಸಿಕೊಳ್ಳಿ.

ಐದು ಮಹಾ ಕ್ರಾಂತಿಗಳಿಗೆ ಸ್ಪಷ್ಟ ಆಹ್ವಾನ

ಪತಂಜಲಿಯು ಭಾರತವನ್ನು ಶೈಕ್ಷಣಿಕ, ವೈದ್ಯಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಗುಲಾಮಗಿರಿಯಿಂದ ಮುಕ್ತಗೊಳಿಸುವುದರ ಜೊತೆಗೆ, ಭಾರತವನ್ನು ಆರ್ಥಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನಾಗಿಸಲು ಶ್ರಮಿಸುತ್ತಿದೆ. ಪತಂಜಲಿ ಒಂದು ಲಕ್ಷಕ್ಕೂ ಹೆಚ್ಚು ಹಸುಗಳನ್ನು ಪೋಷಿಸುತ್ತಿದೆ ಮತ್ತು ಹಸುಗಳನ್ನು ಉಳಿಸಲು ದೊಡ್ಡ ಕ್ರಿಯಾ ಯೋಜನೆಯಲ್ಲಿ ಕೆಲಸ ಮಾಡುತ್ತಿದೆ.

ಪತಂಜಲಿಯ ಶುದ್ಧ ಮತ್ತು ಸಾತ್ವಿಕ ಉತ್ಪನ್ನಗಳನ್ನು ಬಳಸಿ, ನಿಮ್ಮ ಮಕ್ಕಳು ಮತ್ತು ಕುಟುಂಬವನ್ನು ಕಲಬೆರಕೆಯ ವಿಷದಿಂದ ಸಂರಕ್ಷಿಸಿರಿ.